ಸಂಪುಟ: 13 Volume | ಸಂಚಿಕೆ: 352 Issue | ಪುಟಗಳು 08 Pages | ಮಂಗಳವಾರ 17 ಮಾರ್ಚ್ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**
ಅನ್ಯರನ್ನು ಆಳು ಮಾಡದೆ, ತನ್ನ ತಾನಾಳಿದರೆ ಅದೇ ಬಿಡುಗಡೆ.
–ದ.ರಾ.ಬೇಂದ್ರೆ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ , ಕೌಡಾಳೆ

ಶಾಲಾ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ 6
ಸಾಧಕ ಮಹಿಳೆಯರಿಗೆ ಐಕಾನ್ ಪ್ರಶಸ್ತಿ 7
ಕಾರ್ಯಾಚರಣೆ, 36 ಆರೋಪಿಗಳ ಬಂಧನ 8

## ಮಲ್ಲಮ್ಮ ನುಡಿ ಯುಗಾದಿ ವಿಶೇಷಾಂಕ- 2026

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com

## ಎಲ್‌ಪಿಜಿ ಕೊರತೆ, ಖರ್ಗೆ ಕಳವಳ

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ದೇಶದಲ್ಲಿ ಎಲ್ಪಿಜಿ ಕೊರತೆಯ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ರಾಜ್ಯಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಅವರು, ಕೇಂದ್ರ ಸರ್ಕಾರವು ಅಡುಗೆ ಅನಿಲದ ಬಿಕ್ಕಟ್ಟು ಮತ್ತು ಕಾಳಸಂತೆಯಲ್ಲಿ ಮಾರಾಟವನ್ನು ತಡೆಯಲು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದು ಆರೋಪಿಸಿದ್ದಾರೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದ ಹಿನ್ನೆಲೆಯಲ್ಲಿ ದೇಶಾದ್ಯಂತ ಎಲ್ಪಿಜಿ ಬಿಕ್ಕಟ್ಟಿನಿಂದ ಜನ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಬಳಕೆದಾರರ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ ಎಂದಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಕೇಂದ್ರ



ಸಚಿವ ಮತ್ತು ಸದನದ ನಾಯಕ ಜೆ ಪಿ ನಡ್ಡಾ, ಪ್ರತಿಪಕ್ಷವು "ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ" ಸರ್ಕಾರದೊಂದಿಗೆ ನಿಲ್ಲುವ ಬದಲು "ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಪ್ರಯತ್ನಿಸುತ್ತಿದೆ" ಎಂದು ದೂರಿದ್ದಾರೆ.

## ಅಧಿಕಾರಿಗಳ ವಿರುದ್ಧ ಅಸಮಾಧಾನ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ನಮಗೆ ಅಧಿಕಾರಿಗಳಿಂದ ಅವಮಾನವಾಗಿದೆ ಎಂದು ವಿಧಾನಸಭೆಯಲ್ಲಿ ಜೆಡಿಎಸ್ ಸದಸ್ಯ ಎಚ್ ಡಿ ರೇವಣ್ಣ ಮತ್ತು ಬಿಜೆಪಿ ಸದಸ್ಯ ಸುರೇಶ್ ಗೌಡ ಹಕ್ಕು ಚ್ಯುತಿ ಮಂಡಿಸಿದ ಪ್ರಸಂಗ ನಡೆಯಿತು. ಮಧ್ಯಾಹ್ನ ಭೋಜನ ವಿರಾಮದ ಬಳಿಕ ಸದನ ಆರಂಭಗೊಂಡ ಸಂದರ್ಭದಲ್ಲಿ ಅಧಿಕಾರಿಗಳ ವಿರುದ್ಧ ಶಾಸಕ ಎಚ್.ಡಿ ರೇವಣ್ಣ ಹಕ್ಕುಚ್ಯುತಿ ಮಂಡಿಸಿದರು. ಕ್ಷೇತ್ರದ ದೇವಾಲಯದ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಶಿಷ್ಟಾಚಾರ ಪಾಲಿಸಿಲ್ಲ. ಇದು ನನಗೆ ಮಾಡಿದ ಅವಮಾನ ಅಲ್ಲ ಬದಲಾಗಿ ಕ್ಷೇತ್ರಕ್ಕೆ ಮಾಡಿದ ಅವಮಾನವಾಗಿದೆ ಎಂದರು.

ಹೊಳೆನರಸೀಪುರ ಕ್ಷೇತ್ರದ ದೇವಾಲಯ ಕಾರ್ಯಕ್ರಮದಲ್ಲಿ ಜಿಲ್ಲೆಯ ಅಧಿಕಾರಿಗಳು ಶಿಷ್ಟಾಚಾರವನ್ನು ಪಾಲನೆ ಮಾಡಿಲ್ಲ ಎಂದು ಸದನದ ಗಮನಕ್ಕೆ ತಂದರು. ಇದರಿಂದ ಶಾಸಕರ ಹಕ್ಕಿಗೆ ಧಕ್ಕೆ ಆಗಿದೆ. ಅಷ್ಟೇ ಅಲ್ಲ, ಇದು ನನಗೆ ಮಾಡಿದ ಅವಮಾನ ಅಲ್ಲ. ಕ್ಷೇತ್ರಕ್ಕೆ ಅವಮಾನವಾಗಗಿದೆ. ಹಾಗಾಗಿ ಇದಕ್ಕೆ ನ್ಯಾಯ ಒದಗಿಸಬೇಕು ಎಂದು ಮನವಿ ಮಾಡಿದ್ದಾರೆ. ಅಧಿಕಾರಿಗಳ ಮೇಲೆ ತುಮಕೂರು ಗ್ರಾಮಾಂತರ ಶಾಸಕ ಸುರೇಶ್ ಗೌಡ ಹಕ್ಕುಚ್ಯುತಿ ಮಂಡನೆ ಮಾಡಿದ್ದರು. ಗಮನ ಸೆಳೆಯುವ ಸೂಚನೆ ವೇಳೆ ಕಂದಾಯ ಸಚಿವರು ಕೊಟ್ಟ ಉತ್ತರದ ಆಧಾರದಲ್ಲಿ ತಹಶಿಲ್ದಾರ್ ನೀಡಿದ್ದ ಪತ್ರವನ್ನು ಓದಿದ್ದೆ. ಪ್ರೆಸ್ ಮೀಟ್ ಮಾಡಿ ನನ್ನಹಕ್ಕಿನ ಬಗ್ಗೆ ಮಾತಾಡಿದ್ದಾರೆ ಎಂದು ವಿವರಿಸಿದರು.

# ಕೂಲ್ ಸಿಎಂ, ಸ್ಪೀಕರ್ ಗರಂ

### ಸದನಕ್ಕೆ ಬಾರದ ಅನೇಕ ಸಚಿವರು | ಖಾದರ್ ಸಿಡಿಮಿಡಿ | ಪ್ರತಿಪಕ್ಷಗಳ ಆರೋಪ | ಮುಖ್ಯಮಂತ್ರಿ ಸಮಾಧಾನ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಅಧಿವೇಶನದಲ್ಲಿ ಸ್ಪೀಕರ್ ಅವರೇ ಗರಂ ಆದ ಪ್ರಸಂಗ ನಡೆಯಿತು.

ಶಾಸಕರು ಕೇಳಿದ ಪ್ರಶ್ನೆಗಳಿಗೆ ಲಿಖಿತ ರೂಪದಲ್ಲಿ ಉತ್ತರ ನೀಡದೆ ಇರುವುದಕ್ಕೆ ಸಂಬಂಧಪಟ್ಟ ಸಚಿವರು ಹಾಗೂ ಕಾರ್ಯದರ್ಶಿಗಳು ಸ್ಪಷ್ಟನೆ ನೀಡುವವರೆಗೆ ಕಲಾಪ ನಡೆಸುವುದಿಲ್ಲ ಎಂದು ಪೀಠದಿಂದ ಸ್ಪೀಕರ್ ಯು.ಟಿ ಖಾದರ್ ಎದ್ದು ಹೋದ ಪ್ರಸಂಗ ನಡೆಯಿತು. ಖಾದರ್ ನಡೆ ಸರ್ಕಾರಕ್ಕೆ ತೀವ್ರ ಮುಜುಗರ ಉಂಟು ಮಾಡಿದೆ.

**ಪದೇ ಪದೇ ಸೂಚನೆ:** ಸಚಿವರು, ಸರ್ಕಾರದ ಧೋರಣೆಗೆ ಸ್ಪೀಕರ್ ಖಾದರ್ ಗರಂ ಆದರು. ಲಿಖಿತ ರೂಪದ ಉತ್ತರ ನೀಡುವ ಬಗ್ಗೆ ಸರ್ಕಾರಕ್ಕೆ ಸ್ಪೀಕರ್ ಪದೇ ಪದೇ ಸೂಚನೆ ನೀಡುತ್ತಿದ್ದರು. ಸೋಮವಾರ 230 ಪ್ರಶ್ನೆಗಳ ಪೈಕಿ 84 ಉತ್ತರವನ್ನು ಸರ್ಕಾರ ಮಂಡಿಸಿತು.

**ಅಶೋಕ್ ತರಾಟೆಗೆ:** ಈ ಬಗ್ಗೆ ವಿಧಾನಸಭೆಯಲ್ಲಿ ಸರ್ಕಾರವನ್ನು ವಿಪಕ್ಷನಾಯಕ ಆರ್ ಅಶೋಕ್ ತರಾಟೆ ತೆಗೆದುಕೊಂಡು, ನೀವು ನಾಲ್ಕು ಬಾರಿ ವಾರ್ನಿಂಗ್ ನೀಡಿದ್ದೀರಿ. ಆದರೆ 50% ಪಾಲನೆ ಆಗಿಲ್ಲ. ಐದನೇ ಬಾರಿ ವಾರ್ನಿಂಗ್ ಮಾಡಿ, ರೆಕಾರ್ಡ್ ಆಗಲಿ .ನೀವು ಹೇಳಿದರೂ ಯಾರೂ ಎಚ್ಚೆತ್ತುಕೊಂಡಿಲ್ಲ. ದೇವರ ತರ ಬಂದು ದೇವರ ತರ ಮನೆಗೆ ಹೋಗ್ತಾರೆ" ಎಂದು ಅಶೋಕ್ ತರಾಟೆಗೆ ತೆಗೆದುಕೊಂಡರು.





**ಅಶೋಕ್‌ಗೆ ಸ್ಪೀಕರ್ ಉತ್ತರ**

ಅಶೋಕ್ ಮಾತಿಗೆ ಸ್ಪೀಕರ್ ಖಾದರ್ ಮಾತನಾಡಿ, ಸದನ ನಡೆಯುವುದು ಸಚಿವರಿಗಾಗಿ ಅಲ್ಲ. ಶಾಸಕರಿಗೆ ಬೇಕಾಗಿ ನಡೆಯುವ ಅಧಿವೇಶನ ಇದು. ಸಮಸ್ಯೆ ಚರ್ಚೆ ಮಾಡಬೇಕು. ಎಲ್ಲರಿಗೂ ಚುಕ್ಕೆ ಗುರುತಿನ ಪ್ರಶ್ನೆ ಕೇಳಲು ಆಗಲ್ಲ. ದಿನಕ್ಕೆ 15 ಮಾತ್ರ ಉತ್ತರಿಸಲು ಸಾಧ್ಯ ಇದೆ. ಉಳಿದ ಪ್ರಶ್ನೆಗೆ ಸರ್ಕಾರ ಲಿಖಿತ ಉತ್ತರಿಸಬೇಕು. ಆದರೆ ನೀಡುತ್ತಿಲ್ಲ. ಶಾಸಕರು ಏಕೆ ಸದನಕ್ಕೆ ಬರಬೇಕು" ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಪೀಠದಿಂದ ಎದ್ದು ಹೋದ್ರು**

ಪ್ರಶ್ನೆಗೆ ಉತ್ತರ ಇಲ್ಲ. ಸರಿಯಾದ ಸಮಯಕ್ಕೆ ಸಚಿವರು ಬರ್ತಿಲ್ಲ. ಪೀಠದಿಂದ ಸತತವಾಗಿ ಈ ಬಗ್ಗೆ 4 ಬಾರಿ ಸೂಚನೆ ನೀಡಲಾಗಿದೆ. ಆದರೆ ಯಾವುದೇ ಸುಧಾರಣೆ ಆಗಿಲ್ಲ. ಸರ್ಕಾರದ ಈ ಧೋರಣೆ ಸರಿಯಲ್ಲ. ಹೀಗಾದರೆ ಸದನ ಹೇಗೆ ನಡೆಸುವುದು" ಎಂದು ಕಿಡಿಕಾರಿದರು. ಸಚಿವರು ಹಾಗೂ ಕಾರ್ಯದರ್ಶಿಗಳು ಈ ಬಗ್ಗೆ ಸ್ಪಷ್ಟನೆ ನೀಡುವವರೆಗೆ ಸದನ ನಡೆಸಲ್ಲ ಎಂದು ಸ್ಪೀಕರ್ ಖಾದರ್ ಪೀಠದಿಂದ ಎದ್ದು ಹೋದರು.

**ಮನವೊಲಿಸಿದ ಸಿಎಂ**

ಸರ್ಕಾರದ ನಡೆಯಿಂದ ಅಸಮಾಧಾನಗೊಂಡ ಸ್ಪೀಕರ್ ಯು.ಟಿ ಖಾದರ್ ಅವರನ್ನು ಮನವೊಲಿಸಲು ಸ್ವತಃ ಸಿಎಂ ಸಿದ್ದರಾಮಯ್ಯ ಯತ್ನಿಸಿದ್ದಾರೆ. ಸದನದಿಂದ ಸ್ಪೀಕರ್ ಹೊರನಡೆದಾಗ ಅವರ ಮನವೊಲಿಸಲು ಗೃಹ ಸಚಿವ ಡಾ.ಜಿ ಪರಮೇಶ್ವರ್,ಸತೀಶ್ ಜಾರಕಿಹೊಳಿ ಪ್ರಯತ್ನಿಸಿದರು. ಈ ನಡುವೆ ಸಿಎಂ ಸಿದ್ದರಾಮಯ್ಯ ಸ್ಪೀಕರ್ ಯು.ಟಿ ಖಾದರ್ ಅವರನ್ನು ಭೇಟಿ ಮಾಡಿದರು. ಸ್ಪೀಕರ್ ಜೊತೆಗೆ ಸಂಧಾನ ಸಭೆ ಯಶಸ್ವಿಯಾಯಿತು.

**ಅಧಿಕಾರಿಗಳ ತಲೆದಂಡ**

ಅಧಿವೇಶನದಲ್ಲಿ ಶಾಸಕರ ಪ್ರಶ್ನೆಗಳಿಗೆ ಉತ್ತರಿಸುವವರೇ ಇಲ್ಲ, ಸಚಿವರು, ಅಧಿಕಾರಿಗಳು ಗೈರಾಗಿದ್ದಾರೆ, ಹೀಗಾದರೆ ಸದನ ನಡೆಸುವುದು ಹೇಗೆ ಎಂದು ಹೊರನಡೆದ ಸ್ಪೀಕರ್ ಯುಟಿ ಖಾದರ್ ಆಕ್ರೋಶಕ್ಕೆ 3 ಅಧಿಕಾರಿಗಳ ತಲೆದಂಡವಾಗಿದೆ. ವಿಧಾನಸಭೆ ಅಧಿವೇಶನಕ್ಕೆ ಸಚಿವರು ಗೈರಾಗಿದ್ದಾರೆ. ಸಿಎಂ ಸಿದ್ದರಾಮಯ್ಯ ಸ್ಪೀಕರ್ ಖಾದರ್ ಜೊತೆ ಮಾತುಕತೆ ನಡೆಸಿ ಮನವೊಲಿಕೆ ಮಾಡಿದ್ದಾರೆ. ಸ್ಪೀಕರ್ ಜೊತೆ ಮಾತನಾಡಿದ ಬಳಿಕ ಮೂವರು ಅಧಿಕಾರಿಗಳ ಸಸ್ಪೆಂಡ್‌ಗೆ ಸೂಚನೆ ನೀಡಿದ್ದಾರೆ.

## ನುಗಡೋಣಿಗೆ ಅಕಾಡೆಮಿ ಪ್ರಶಸ್ತಿ

**ನವದೆಹಲಿ:** ಕನ್ನಡದ ಖ್ಯಾತ ಸಾಹಿತಿ ಅಮರೇಶ ನುಗಡೋಣಿ ಅವರ 'ದಡ ಸೇರಿಸು ತಂದೆ' ಕಥಾ ಸಂಕಲನಕ್ಕೆ 2025ನೇ ಸಾಲಿನ ಪ್ರತಿಷ್ಠಿತ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಈ ಮೂಲಕ ಕನ್ನಡದ ಗಟ್ಟಿಯಾದ ಕಥಾ ಲೋಕ–ಕ್ಕೆ ರಾಷ್ಟ್ರಮಟ್ಟದ ಮನ್ನಣೆ ದೊರೆತಂತಾಗಿದೆ. ಈ ಪ್ರಶಸ್ತಿಯು ?1,00,000 ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ. ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ, ಡಾ. ಜಯಲಲಿತ ಮತ್ತು ಸಹನಾ ಕಾಂತಬೈಲು ಅವರಿದ್ದ ತಜ್ಞರ ಸಮಿತಿಯು ಈ ಕೃತಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ. 2025ರ ಜನವರಿ 30ರಂದು ಆರಂಭವಾದ ಸುದೀರ್ಘ ಆಯ್ಕೆ ಪ್ರಕ್ರಿಯೆಯ ನಂತರ ಈ ಅಧಿಕೃತ ಘೋಷಣೆ ಹೊರಬಿದ್ದಿದೆ.

## ವಿದ್ಯಾರ್ಥಿಗೆ ಹಾವು ಕಡಿತ, ಪಾರು

**ಚಿತ್ರದುರ್ಗ:** ಶಾಲಾ ಆವರಣದಲ್ಲಿ ಕುಳಿತು ಊಟ ಮಾಡುತ್ತಿದ್ದ ವಿದ್ಯಾರ್ಥಿನಿಗೆ ನಾಗರಹಾವು ಕಚ್ಚಿರುವ ಘಟನೆಯೊಂದು ಚಿತ್ರದುರ್ಗ ತಾಲೂಕಿನ ಹುಣಸೆಕಟ್ಟೆ ಗ್ರಾಮದಲ್ಲಿ ನಡೆದಿದೆ ತರಗತಿ ಮುಗಿಸಿ ಶಾಲಾ ಆವರಣದಲ್ಲಿ ಊಟ ಮಾಡುತ್ತಿದ್ದಾಗ ವಿದ್ಯಾರ್ಥಿನಿ ಸೃಷ್ಟಿಗೆ ನಾಗರಹಾವು ಕಚ್ಚಿದೆ. ಬಾಲಕಿ ಕಾಲಿನಿಂದ ರಕ್ತ ಬರುತ್ತಿದ್ದು, ಉರಿ ತಾಳಲಾರದೆ ಜೋರಾಗಿ ಅಳತೊಡಗಿದ್ದಳು. ಈ ವೇಳೆ ವಿದ್ಯಾರ್ಥಿನಿಯನ್ನು ಕಂಡ ಶಿಕ್ಷಕ ರವಿ ಶಂಕರ್ ಕೂಡಲೇ ಓಡಿ ಬಂದು, ಹಾವು ಕಚ್ಚಿದ ಜಾಗಕ್ಕೆ ಬಾಯಿ ಹಾಕಿ ವಿಷ ಹೀರಿ ಹೊರಗೆ ಹಾಕಿದ್ದಾರೆ. ಬಳಿಕ ಬಾಲಕಿಯ ಕಾಲಿಗೆ ಬಟ್ಟೆಯನ್ನು ಗಟ್ಟಿಯಾಗಿ ಬಿಗಿದು ಆಸ್ಪತ್ರೆಗೆ ದಾಖಲಿಸಿದ್ದಾರೆ. ಪರಿಣಾಮ ಬಾಲಕಿ ಅಪಾಯದಿಂದ ಪಾರಾಗಿದ್ದು ವೈದ್ಯರು ಆಕೆಯನ್ನು ನಿಗಾದಲ್ಲಿರಿಸಿದ್ದಾರೆ.

## 7ರಾಜ್ಯಗಳ 26 ಸ್ಥಾನಕ್ಕೆ ಅಭ್ಯರ್ಥಿಗಳ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ಇಂದು( ಸೋಮವಾರ) 10 ರಾಜ್ಯಗಳಲ್ಲಿನ 37 ರಾಜ್ಯ ಸಭಾ ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. ಈ ಪೈಕಿ ಏಳು ರಾಜ್ಯಗಳ 26 ಸ್ಥಾನಗಳಿಗೆ ಅಭ್ಯರ್ಥಿಗಳು ಅವಿರೋಧ ಆಯ್ಕೆಯಾಗಲಿದ್ದಾರೆ.

ಉಳಿದ 11 ಅಭ್ಯರ್ಥಿಗಳ ಆಯ್ಕೆಯು ಮತದಾನದ ಮೂಲಕ ನಿರ್ಧಾರ ಆಗಲಿದೆ. ಬೆಳಗ್ಗೆ 9ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತದಾನ ಆಗಲಿದ್ದು, ಸಂಜೆ 5 ಗಂಟೆಗೆ ಮತ ಎಣಿಕೆ ನಡೆಯಲಿದೆ. 234 ಸದಸ್ಯಬಲದ ರಾಜ್ಯಸಭೆಯಲ್ಲಿ ಬಿಜೆಪಿ ನೇತೃತ್ವದ ಎನ್ಡಿಎ ಒಕ್ಕೂಟ 134 ಸದಸ್ಯರನ್ನು ಹೊಂದಿದೆ. ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟದ ಬಳಿ 80 ಸದಸ್ಯಬಲ ಇದೆ. ವಿವಿಧ ಮಸೂದೆಗಳ ಅನುಮೋದನೆಗೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಹೆಚ್ಚಿನ ಸದಸ್ಯಬಲ ಇರುವುದು ಅಗತ್ಯ. ರಾಜ್ಯಸಭಾ ಚುನಾವಣೆ ಬಳಿಕ ಮೇಲ್ಮನೆಯಲ್ಲಿ ಎನ್ಡಿಎ ಸದಸ್ಯಬಲ ಮತ್ತಷ್ಟು ಏರಿಕೆ ಆಗಲಿದೆ.

## 5 ರಾಜ್ಯಗಳ ಚುನಾವಣಾ ಪೂರ್ವ ಫಲಿತಾಂಶ

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

5 ರಾಜ್ಯಗಳಿಗೆ ಚುನಾವಣೆ ಘೋಷಣೆ ಬೆನ್ನಲ್ಲೇ ತಮಿಳುನಾಡು, ಕೇರಳ, ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿ ಮತದಾನ ಪೂರ್ವ ಸಮೀಕ್ಷೆ ನಡೆಸಲಾಗಿದೆ. ಮ್ಯಾಜಿಜ್ ಜೊತೆಗೂಡಿ ಐಎಎನ್‌ಎಸ್ ಸುದ್ದಿಸಂಸ್ಥೆ ನಡೆಸಿರುವ ಸಮೀಕ್ಷೆ ಅನ್ವಯ ತಮಿಳುನಾಡಿನಲ್ಲಿ ಆಡಳಿತಾರೂಢ ಡಿಎಂಕೆ ಅಧಿಕಾರ ಕಳೆದುಕೊಳ್ಳಲಿದ್ದು, ಕೇರಳದಲ್ಲಿ ಸಿಪಿಎಂ ನೇತೃತ್ವದ ಎಲ್ಡಿಎಫ್ ಮತ್ತೊಮ್ಮೆ ಸರ್ಕಾರ ರಚಿಸಲಿದೆ. ಪಶ್ಚಿಮ ಬಂಗಾಳ ಹಾಗೂ ಅಸ್ಸಾಂನಲ್ಲಿ ಸದ್ಯದ ಪಕ್ಷಗಳೇ ಆಳ್ವಿಕೆ ಮುಂದುವರೆಯಲಿವೆ.

ತಮಿಳುನಾಡು: ಡಿಎಂಕೆ ಮತ್ತು ಎಐಎಡಿ–ಎಂಕೆ ನಡುವಿನ ಕದನಕಣವಾಗಿದ್ದ 234 ಸೀಟುಗಳ ತಮಿಳುನಾಡಲ್ಲೀಗ ಹೊಸ ಪಕ್ಷದೊಂದಿಗೆ ದಳಪತಿ ವಿಜಯ್ ಅವರ ಆಗಮನವಾಗಿದೆ. ಇದರಿಂದ ಮತವಿಭಜನೆ ಆಗುವ ಸಂಭವವಿದೆ. ಪರಿಣಾಮ ಬಿಜೆಪಿ ಬೆಂಬಲಿತ ಅಣ್ಣಾಡಿಎಂಕೆ ಶೇ.39ರಿಂದ 40ರಷ್ಟು ಮತ ಪಡೆದು 114–127 ಸೀಟುಗಳನ್ನು ಬುಟ್ಟಿಗೆ ಹಾಕಿಕೊಳ್ಳಲಿದೆ ಎಂದು ಸಮೀಕ್ಷೆ ಹೇಳಿದೆ.

# ಅವಹೇಳನಕಾರಿ ಮಾತಾಡದಂತೆ ಕಟ್ಟುನಿಟ್ಟಿನ ಸೂಚನೆ ಕೊಡಿ


### ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಅಖಿಲ ಭಾರತ ಬ್ರಾಹ್ಮಣ ಮಹಾಸಂಘ ಬೀದರ ಜಿಲ್ಲೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ಬೀದರ್


ಬೀದರ ಜಿಲ್ಲೆಯಲ್ಲಿ ಸಮಾಜದ ಶಾಂತಿ, ಸಹೋದರತ್ವ ಮತ್ತು ಸಾಮುದಾಯಿಕ ಸೌಹಾರ್ದತೆಯನ್ನು ಕಾಪಾಡುವ ಉದ್ದೇಶದಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಅಖಿಲ ಭಾರತ ಬ್ರಾಹ್ಮಣ ಮಹಾಸಂಘ ಬೀದರ ಜಿಲ್ಲೆ ವತಿಯಿಂದ ಮಹತ್ವದ ಮನವಿಯನ್ನು ಸಲ್ಲಿಸಲಾಗಿದೆ.

ಬಾಳೆಹೊನ್ನೂರು ಮಠದ ನಿಜಗುಣಾನಂದಸ್ವಾಮೀಜಿ ಅವರು 2026ರ ಮಾ.15ರಿಂದ ಬೀದರ್ ಜಿಲ್ಲೆಯಲ್ಲಿ ಒಂದು ತಿಂಗಳ ಕಾಲ ಪ್ರವಚನ ಕಾರ್ಯಕ್ರಮ ನಡೆಸಲು ಯೋಜಿಸಿರುವ ಮಾಹಿತಿ ಇದೆ. ಹಿಂದಿನ ಕೆಲವು ಪ್ರವಚನಗಳಲ್ಲಿ ಬ್ರಾಹ್ಮಣ ಸಮುದಾಯ ಹಾಗೂ ಹಿಂದೂ ಧಾರ್ಮಿಕ ಆಚರಣೆಗಳ ಕುರಿತು ವಿವಾದಾತ್ಮಕ, ಅವಹೇಳನಕಾರಿ ಮಾತುಗಳನಾಡಿರುವುದಾಗಿ ಅನೇಕ ಭಕ್ತರು, ನಾಗರಿಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಮಾಜದಲ್ಲಿ ಆತಂಕ ಉಂಟಾಗಿದೆ.

ಮನವಿಯಲ್ಲಿ ಹೇಳಿರುವಂತೆ, ಬೀದರ ಜಿಲ್ಲೆ ಸದಾ ಶಾಂತಿ, ಸಹೋದರತ್ವ ಮತ್ತು ಪರಸ್ಪರ ಗೌರವದ



ಪರಂಪರೆಯನ್ನು ಹೊಂದಿರುವ ಪವಿತ್ರಭೂಮಿಯಾಗಿದೆ. ಇದು ಮಹಾನ್ ಸಮಾಜ ಸುಧಾರಕ ಬಸವೇಶ್ವರರ ಆದರ್ಶಗಳಿಂದ ಪ್ರೇರಿತವಾದ ಭೂಮಿಯಾಗಿದೆ. ಅವರು,



"ಸರ್ವ ಧರ್ಮ ಸಮಭಾವ" ಎಂಬ ಸಂದೇಶವನ್ನು ನೀಡಿ ಎಲ್ಲಾ ಧರ್ಮ ಮತ್ತು ಸಮುದಾಯಗಳು ಪರಸ್ಪರ ಗೌರವದಿಂದ ಬದುಕಬೇಕು ಎಂದು ಬೋಧಿಸಿದ್ದಾರೆ. ಆದರೆ ಯಾವುದೇ ಧಾರ್ಮಿಕ ವೇದಿಕೆಯನ್ನು ಬಳಸಿಕೊಂಡು ಒಂದು ಸಮುದಾಯದ ಬಗ್ಗೆ ಅವಹೇಳನಕಾರಿ, ಅಸಭ್ಯ ಅಥವಾ ಪ್ರಚೋದನಕಾರಿ ಮಾತುಗಳನ್ನು ಆಡಿದರೆ ಅದು ಸಮಾಜದಲ್ಲಿ ಅನಗತ್ಯವಾದ ಉದ್ವಿಗ್ನತೆ, ಭಿನ್ನಾಭಿಪ್ರಾಯಕ್ಕೆ ಕಾರಣವಾಗುವ ಸಾಧ್ಯತೆ ಇದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಈ ಮನವಿಯ ಉದ್ದೇಶ ಯಾರೊಬ್ಬರ ಧಾರ್ಮಿಕ ಸ್ವಾತಂತ್ರ್ಯವನ್ನು ತಡೆಯುವುದು ಅಲ್ಲ. ಬಸವ ತತ್ವ, ಧಾರ್ಮಿಕ ಮೌಲ್ಯಗಳು ಮತ್ತು ಸಮಾಜದ ಒಳ್ಳೆಯತನದ ಬಗ್ಗೆ ನಡೆಯುವ ಪ್ರವಚನಗಳನ್ನು ನಾವು ಸದಾ ಸ್ವಾಗತಿಸುತ್ತೇವೆ. ಆದರೆ ಯಾವುದೇ ಸಮುದಾಯವನ್ನು ಅವಮಾನಿಸುವ ಅಥವಾ ಸಮಾಜದಲ್ಲಿ ಅಶಾಂತಿ ಉಂಟುಮಾಡುವ ಮಾತುಗಳು ನಡೆಯಬಾರದು ಎಂಬುದು ನಮ್ಮ ಸ್ಪಷ್ಟ ನಿಲುವಾಗಿದೆ.

–ಶ್ರೀ ರಮೇಶ್ ಕುಲಕರ್ಣಿ,
ಜಿಲ್ಲಾಧ್ಯಕ್ಷರು ಅಖಿಲ ಭಾರತ ಬ್ರಾಹ್ಮಣ ಮಹಾಸಂಘ ಬೀದರ ಜಿಲ್ಲೆ.
& ಶ್ರೀ ವೆಂಕಟೇಶ್ ಕುಲಕರ್ಣಿ,
ಜಿಲ್ಲಾಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೀದರ್ ಜಿಲ್ಲೆ

**ಸಮಾಜದ ಶಾಂತಿ, ಸೌಹಾರ್ದತೆ ಕಾಪಾಡಲು ವಿನಮ್ರ ಮನವಿ**

- ಸಮಾಜದ ಶಾಂತಿ ಮತ್ತು ಸೌಹಾರ್ದತೆ ಕಾಪಾಡಲು ಕೆಳಗಿನ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿತ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ.
- ಶ್ರೀ ನಿಗಗುಣಾನಂದ ಸ್ವಾಮಿಗಳಿಗೆ ಮುನ್ನೆಚ್ಚರಿಕೆಯಾಗಿ ಕಠಿಣ ಎಚ್ಚರಿಕೆ ನೀಡಬೇಕು.
- ಯಾವುದೇ ಸಮುದಾಯದ ವಿರುದ್ಧ, ವಿಶೇಷವಾಗಿ ಬ್ರಾಹ್ಮಣ ಸಮುದಾಯ, ಹಿಂದೂ ಧಾರ್ಮಿಕ ಆಚರಣೆಗಳ ಬಗ್ಗೆ ಅವಹೇಳನಕಾರಿ ಮಾತುಗಳನ್ನು ಆಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು.
- ಅಗತ್ಯವಿದ್ದಲ್ಲಿ ಬೀದರ ಜಿಲ್ಲೆಯಲ್ಲಿ ನಡೆಯುವ ಅವರ ಪ್ರವಚನಗಳನ್ನು ನಿಷೇಧಿಸುವ ಅಥವಾ ನಿರ್ಬಂಧಿಸುವ ಕ್ರಮವನ್ನು ಸರ್ಕಾರದಿಂದ ಕೈಗೊಳ್ಳಬೇಕು.
- ಬೀದರ ಜಿಲ್ಲೆಯ ಶಾಂತಿ, ಸಾಮುದಾಯಿಕ ಸೌಹಾರ್ದತೆ ಮತ್ತು ಸಹೋದರತ್ವವನ್ನು ಕಾಪಾಡುವ ದೃಷ್ಟಿಯಿಂದ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರ ಹಾಗೂ ಸಂಬಂಧಿತ ಅಧಿಕಾರಿಗಳಿಗೆ ವಿನಮ್ರವಾಗಿ ಮನವಿ ಮಾಡಲಾಗಿದೆ.

**ಎಲ್ಪಿಜಿ ಸಿಲಿಂಡರ್ ಕೊರತೆ ನಿವಾರಿಲಸು ವಿದೇಶಗಳಿಂದ ಅನಿಲ ಆಮದು, ಪರ್ಯಾಯ ಕ್ರಮಕ್ಕಾಗಿ ಕೇಂದ್ರಕ್ಕೆ ಪತ್ರ: ಮುಖ್ಯಮಂತ್ರಿ ಸಿದ್ದರಾಮಯ್ಯ**

# ಸಂಗೀತಕ್ಕೆ ಪುಟ್ಟರಾಜ ಗವಾಯಿಗಳ ಕೊಡುಗೆ ಅಪಾರ: ಹಿರೇಮಠ



• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ

ತಾಲೂಕಿನ ಮಾಣಿಕ ಪ್ರಭುಗಳ ಸಂಸ್ಥಾನದಲ್ಲಿ ಗಾನಯೋಗಿ ಡಾ. ಪಂಡಿತ್ ಪುಟ್ಟರಾಜ ಕವಿ ಗವಾಯಿಗಳ 112ನೇ ಜಯಂತಿ ಹಾಗೂ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಪಂ. ರೇವಣಸಿದ್ದಯ್ಯ ಹಿರೇಮಠ ಅವರು, "ಗಾನಯೋಗಿ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳು ಅರಮನೆಗಳಲ್ಲಿ ಸೀಮಿತವಾಗಿದ್ದ ಸಂಗೀತವನ್ನು ಗುರುಮನೆಗೆ ತಂದು ಪ್ರತಿ ಮನೆಮನೆಗೂ ಹಾಗೂ ಪ್ರತಿ ಗ್ರಾಮಗ್ರಾಮಕ್ಕೂ ತಂದಿರುವ ಕೀರ್ತಿ ಪುಟ್ಟರಾಜ ಗವಾಯಿಗಳಿಗೆ ಸಲ್ಲುತ್ತದೆ" ಎಂದು ಹೇಳಿದರು. ಅಂಧ ಅನಾಥರ ಆಶಾಕಿರಣವಾಗಿ, ಅಂಧರ ಬಾಳಿನ ನಂದಾದೀಪವಾಗಿ ಕುರುಡ ಕುಂಟರ ದೀನದಲಿತರ ಹಾಗೂ ನಿರ್ಗತಿಕರಿಗೆ ಆಶ್ರಯ ನೀಡಿ ಅನ್ನ, ವಿದ್ಯೆ, ವಸತಿ ನೀಡಿ ಭಿಕ್ಷೆಯ ಪಾತ್ರೆಯನ್ನು ಬಿಡಿಸಿ ಅಕ್ಷಯಪಾತ್ರೆಯನ್ನು ನೀಡಿದ ಉಭಯ ಗಾಯನಾಚಾರ್ಯರು ಹಾಗೂ ತ್ರಿಭಾಷಾ ಪಂಡಿತ ಪುಟ್ಟರಾಜ ಗವಾಯಿಗಳು ಎಂದು ನುಡಿದರು. ಕಾರ್ಯಕ್ರಮಕ್ಕೆ ಶ್ರೀ ಆನಂದರಾಜ ಮಾಣಿಕ ಪ್ರಭುಗಳು ದಿವ್ಯ ಸಾನಿಧ್ಯ ವಹಿಸಿದ್ದರು. ಅಧ್ಯಕ್ಷತೆಯನ್ನು ಕುಪೇಂದ್ರ ಹುಲಸೂರ ವಹಿಸಿದ್ದರು. ಉದ್ಘಾಟಕರಾಗಿ ಪಿಎ□□□ ಸುರೇಶ ಚೌವ್ಹಾಣ ಭಾಗವಹಿಸಿದರು. ಈ ಸಂದರ್ಭದಲ್ಲಿ ಪಂಚಾಕ್ಷರ ಪ್ರಶಸ್ತಿ ಪುರಸ್ಕೃತರಾದ ಮಡಿವಾಳಯ್ಯ ಸಾಲಿ ಅಲ್ಲೂರು ಹಾಗೂ ಪುಟ್ಟರಾಜ ಪ್ರಶಸ್ತಿ ಪುರಸ್ಕೃತರಾದ ಏಕನಾಥ್ ಅವರನ್ನು ಸನ್ಮಾನಿಸಲಾಯಿತು. ಮಾಣಿಕ್ ನೆಳಗಿ ಮಾತನಾಡಿ, ಗಾನಯೋಗಿ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳು ಕೇವಲ ವ್ಯಕ್ತಿಯಲ್ಲ; ಅವರು ಸಂಗೀತ ಮತ್ತು ಸಾಹಿತ್ಯ ಲೋಕದ ಅದ್ಭುತ ಶಕ್ತಿ" ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶರದಕುಮಾರ ನಾರಾಯಣ ಪೇಟಕರ, ಡಾ. ಸಾರಿಕಾ ಎಸ್. ಗಂಗಾ, ಪ್ರಭು ಎಂ. ಹಂಜಾಳ, ವೈಜಿನಾಥ ಬಂಡೆನೋರೆ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕು. ಗುರುಕುಮಾರ ಹಿರೇಮಠರ ವಾಯಲಿನ್ ವಾದನ ಗಮನ ಸೆಳೆಯಿತು. ಕಲಾ ಬಳಗದ ಕಲಾವಿದರುಗಳಾದ ಕಲ್ಯಾಣಿ, ನಾಗೇಶ್, ವಿಠಲ್, ವಿಶ್ವಜೀತ್, ಮೌನೇಶ್, ರಾಜು, ಶಾಂತ, ಸರಿತಾ, ಶಿವಬಸವ, ಸಂದೀಪ, ಗಿರಿ ಮುಂತಾದವರು ಭಾಗವಹಿಸಿದ್ದರು. ಮಾಣಿಕ ಪ್ರಭು ಶಾಲೆಯ ಮಕ್ಕಳು ಪ್ರಾರ್ಥಿಸಿದರು. ಸುಭದ್ರ ಆರ್. ಗಿರಿ ಸ್ವಾಗತಿಸಿದರು. ಯಲ್ಲಾಲಿಂಗ ರೊಟ್ಟೆ ಪ್ರಾಸ್ತಾವಿಕವಾಗಿ ಮಾತನಾಡಿದರು. ತುಕರಾಮ್ ಕಾರ್ಯಕ್ರಮ ನಿರೂಪಿಸಿದರು. ವಿವೇಕಾನಂದ ಗುರುಮೂರ್ತಿ ವಂದಿಸಿದರು.

# ಬಾವಗಿ ಭದ್ರೇಶ್ವರ ಜಾತ್ರೆ ಪೋಸ್ಟರ್ ಲೋಕಾರ್ಪಣೆ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಬೀದರ್ ತಾಲುಕಿನ ಬಾವಗಿ ಐತಿಹಾಸಿಕ ಭದ್ರೇಶ್ವರ ದೇವಸ್ಥಾನ ಜಾತ್ರಾ ಉತ್ಸವ ಎಪ್ರಿಲ್ 3ರಿಂದ 3 ದಿನಗಳ ಕಾಲ ಜರುಗಲಿದೆ 5ರಂದು ರಾತ್ರಿ 9 ಗಂಟೆಗೆ ರಥೋತ್ಸವ ಜರುಗಲಿದೆ' ಎಂದು ಭದ್ರೇಶ್ವರ ಮಠದ ಶ್ರೀ ಶಿವುಕುಮಾರ ಸ್ವಾಮೀಜಿ ಹೇಳಿದರು.

ಭದ್ರೇಶ್ವರ ಮಠದ ಕಲ್ಯಾಣ ಮಂಟಪದಲ್ಲಿ ಇತ್ತೀಚೆಗೆ ಪೋಸ್ಟರ್ ಬಿಡುಗಡೆ ಮಾಡಿ ಭದ್ರೇಶ್ವರ ಮಠದ ಶ್ರೀ ಶಿವುಕುಮಾರ ಸ್ವಾಮಿಜಿ ಮಾತನಾಡಿದ ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಹಸ್ರಾರು ಜನ ಭಾಗವಹಿಸಲಿದ್ದು ತಯಾರಿ ನಡೆದಿದೆ. ಎಪ್ರಿಲ್ 3 ರಂದು ಜಾತ್ರಾ ಉದ್ಘಾಟನಾ ನಾಡಿನ ಪೂಜರು ರಾಜಕೀಯ ಗಣ್ಯ-ರಿಂದ ಉದ್ಘಾಟನಾ ಕಾರ್ಯಕ್ರಮ ನೆರವೇರಲಿದೆ ಎಪ್ರಿಲ್ 4ರಂದು ರಾತ್ರಿ 9ಗಂಟೆಗೆ ಪಲ್ಲಕ್ಕಿ ಮೆರವಣಿಗೆ ಸಕಲ ವಾದ್ಯಗಳೊಂದಿಗೆ ಗ್ರಾಮದ ಪ್ರಮುಖ ರಸ್ತೆಗಳಿಂದ ಮೆರವಣಿಗೆ ಮುಖಾಂತರ ಸಾಗುವುದು ಎಪ್ರಿಲ್ 5ರಂದು ಬೆಳಿಗ್ಗೆ 5:ಗಂಟೆಗೆ ಪಲ್ಲಕ್ಕಿ ಮೆರವಣಿಗೆ ಅಗ್ನಿ ಬಸವಣ್ಣನಿಗೆ ಪುರವಂತರ ಹಾಗೂ ಭಕ್ತರಿಂದ ಅಗ್ನಿಪ್ರವೇಶ ಮಾಡುವುದು ಬಳಿಕ ಎಪ್ರಿಲ್ 5ರಂದು ರ್ಾತಿ 9ಗಂಟೆಗೆ ರಥೋತ್ಸವ ಎಂದು ಮಾಹಿತಿ ನೀಡಿದರು.

ಭಕ್ತರಾದ ಶಾಂತವೀರ ಹಜ್ಜರಗಿ ಹಾಗಶೆಟ್ಟಿ ಅಳ್ಳಿ ಕಾಶಿನಾಥ್ ಪಕ್ಕ ರಾಜಕುಮಾರ್

ಪಾಟೀಲ್ ಜಗನ್ನಾಥ್ ಚಿದ್ರಿ ಸಂತೋಷ್ ಜಗದಾಳಿ ನಾಗೇಶ್ ಕೋಳರ್ ಗುಂಡಯ್ಯ ಸ್ವಾಮಿ ಭಕ್ತರಾದ ಭದ್ರಸಾಯಿ ಸಿದ್ದು ಹೊನ್ನಿಕೇರಿ ರೇವಣಪ್ಪ ಭದ್ರೇಣ ಸುನಿಲ್ ಕುಮಾರ್ ಚಿದ್ರಿ ಪ್ರಭು ಹಜ್ಜರಗಿ ಮಂಜುನಾಥ್ ಮರಾಠ ಪ್ರಭು ಕಾರಕನಳಿ ಅನೇಕ ಗ್ರಾಮಸ್ಥರು ಭಾಗವಹಿಸಿದರು,

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



# ರಂಜಾನ್ ಹಬ್ಬವು ಪವಿತ್ರವಾದದ್ದು

ಇಸ್ಲಾಂ ಧರ್ಮದ ಅತ್ಯಂತ ಪವಿತ್ರ ಹಬ್ಬಗಳಲ್ಲಿ ಒಂದಾದ ರಂಜಾನ್ (ರಮಝಾನ್) ತಿಂಗಳು ಭಕ್ತಿ, ಶಾಂತಿ ಮತ್ತು ಸಹೋದರತ್ವದ ಸಂಕೇತವಾಗಿದೆ. ಈ ಪವಿತ್ರ ತಿಂಗಳಲ್ಲಿ ಮುಸ್ಲಿಂ ಸಮುದಾಯದವರು ಪ್ರಾತಃಕಾಲದಿಂದ ಸೂರ್ಯಾಸ್ತದವರೆಗೆ ಉಪವಾಸ ಆಚರಿಸಿ ಅಲ್ಲಾಹನಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಉಪವಾಸದ ಮೂಲಕ ಆತ್ಮಶುದ್ಧಿ, ನಿಯಮಬದ್ಧ ಜೀವನ ಮತ್ತು ಧಾರ್ಮಿಕ ಭಾವನೆಗಳನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಲಾಗುತ್ತದೆ.

ರಂಜಾನ್ ತಿಂಗಳಲ್ಲಿ ದಾನಧರ್ಮಗಳಿಗೆ ವಿಶೇಷ ಮಹತ್ವ ನೀಡಲಾಗುತ್ತದೆ. ಬಡವರು ಮತ್ತು ಅಗತ್ಯವಿರುವವರಿಗೆ ಸಹಾಯ ಮಾಡುವ ಮೂಲಕ ಮಾನವೀಯ ಮೌಲ್ಯಗಳನ್ನು ಬಲಪಡಿಸಲಾಗುತ್ತದೆ. ಮಸೀದಿಗಳಲ್ಲಿ ವಿಶೇಷ ನಮಾಜ್‌ಗಳು ನಡೆಯುತ್ತವೆ ಮತ್ತು ಕುಟುಂಬದವರು ಹಾಗೂ ಸ್ನೇಹಿತರೊಂದಿಗೆ ಸಹಭಾಗಿತ್ವದಿಂದ ಈ ಪವಿತ್ರ ಕಾಲವನ್ನು ಆಚರಿಸಲಾಗುತ್ತದೆ.

ರಂಜಾನ್ ತಿಂಗಳ ಅಂತ್ಯದಲ್ಲಿ ಈದ್-ಉಲ್-ಫಿತರ್ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಈ ಹಬ್ಬವು ಪ್ರೀತಿ, ಸಹೋದರತ್ವ ಮತ್ತು ಏಕತೆಯ ಸಂದೇಶವನ್ನು ಸಮಾಜಕ್ಕೆ ನೀಡುತ್ತದೆ. ಎಲ್ಲ ಧರ್ಮಗಳ ಜನರು ಪರಸ್ಪರ ಶುಭಾಶಯಗಳನ್ನು ಹಂಚಿಕೊಂಡು ಸಾಮಾಜಿಕ ಸೌಹಾರ್ದತೆಯನ್ನು ಕಾಪಾಡಿಕೊಳ್ಳುತ್ತಾರೆ.

ಅದರ ಕಾರಣಕ್ಕೆ ರಂಜಾನ್ ಹಬ್ಬವು ಕೇವಲ ಧಾರ್ಮಿಕ ಆಚರಣೆ ಮಾತ್ರವಲ್ಲ, ಮಾನವೀಯ ಮೌಲ್ಯಗಳನ್ನು ಬಲಪಡಿಸುವ ಪವಿತ್ರ ಮತ್ತು ಮಹತ್ವದ ಹಬ್ಬವಾಗಿದೆ.

# ರಿಷ್ಹಾ, ರೋಹನ ಜನ್ಮ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ತಾಲೂಕಿನ ನಿರ್ಣಾ ಗ್ರಾಮದಲ್ಲಿ ಕನ್ನಡ ಸೇನೆ ಕರ್ನಾಟಕ ಸಂಘಟನೆಯ ಬೀದರ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಮೇಶ್ ಧೂಳ ಅವರ ಮಕ್ಕಳಾದ ಕುಮಾರಿ ರಿಷಾ ಮತ್ತು ಕುಮಾರ ರೋಹನ ಇವರ 9ನೇ ವರ್ಷದ ಜನ್ಮ ದಿನಾಚರಣೆಯನ್ನು ಹಿತೈಷಿಗಳೊಂದಿಗೆ ಕೇಕ್ ಕತ್ತರಿಸುವ ಮೂಲಕ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಪ್ರಭಾವತಿ ಪಿ. ಧೂಳ, ಕನ್ನಡ ಸೇನೆ ರಾಜ್ಯ ಉಪಾಧ್ಯಕ್ಷ ಡಾ. ರವಿ ಸ್ವಾಮಿ ನಿರ್ಣಾ, ಅಮರ ತೆಳಮನಿ, ಪತ್ರಕರ್ತ ರಾಜಕುಮಾರ್ ಆರ್. ಹಡಪದ, ಹಾಸ್ಯ ಕಲಾವಿದ ಚಿದಾನಂದ ಗುಳ್ಳಾ, ಶರಣು ಪೊಲೀಸ್ ಪಾಟೀಲ್, ಪ್ರಕಾಶ ಧೂಳ, ಚಂದ್ರಕಾಂತ ಧೂಳ, ಕಪಿಲ್ ಅಳ್ಳಿ, ಎಲೇಶ ಧೂಳ, ಆರುತಿ ಆನಂದ, ಶ್ವೇತಾ, ಪೂಜಾ, ಸ್ಟೇಲ್ಲಾ, ಸೇರಿದಂತೆ ಧೂಳ ಕುಟುಂಬಸ್ಥರು ಉಪಸ್ಥಿತರಿದ್ದರು.

# ಮಹಿಳೆ ಬಹುರೂಪಿ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಮಹಿಳೆ ತಾಯಿಯಾಗಿ, ಪತ್ನಿಯಾಗಿ, ಸೊಸೆಯಾಗಿ, ಅತ್ತಿಗೆಯಾಗಿ ಎಲ್ಲರ ಸೇವೆ ಮಾಡುವ ವಿಶಾಲ ಹೃದಯ ಹೊಂದಿ, ಬಹುರೂಪಿಯಾಗಿ ಕಾರ್ಯನಿರ್ವಹಿಸಿ, ಎಲ್ಲರನ್ನು ಸಮಾಧಾನ ಪಡಿಸುವ ಶಕ್ತಿ ಹೊಂದಿದ್ದಾಳೆ ಎಂದು ನ್ಯಾಯವಾದಿ ಆರತಿ ಎಸ್.ತಿವಾರಿ ಪ್ರತಿಪಾದಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ನ್ಯಾಯವಾದಿ ಆರತಿ ಎಸ್.ತಿವಾರಿ ಅವರು ಸಾವಿತ್ರಿಬಾಯಿ ಫುಲೆ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಅಧ್ಯಕ್ಷತೆವಹಿಸಿದ ಕಾಲೇಜಿನ ಪ್ರಾಚಾರ್ಯ ಡಾ.ಹೇಮಾವತಿ ಪಾಟೀಲ್ ಮಾತನಾಡಿ, ಗಿವ್ ಟು ಗೇನ್ ಧ್ಯೇಯವಾಕ್ಯ ಪಾಲಿಸಿ, ಇಂದು ಮಹಿಳೆ ಸ್ವಾವಲಂಬಿ ಬದುಕು ಸಾಗಿಸಿ ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುತ್ತಿರುವುದು ಸಂತಸದ ಸಂಗತಿಯಾಗಿದೆ.

ಬಹುಮಾನ ವಿತರಣೆ: ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಿದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಡಾ.ರಘುನಂದ, ಡಾ.ನಾಗಮ್ಮ, ಪ್ರೊ.ಸಂಪತಕುಮಾರಿ, ಡಾ.ಸಹನಾ, ಪ್ರೊ.ಸಾವಿತ್ರಿ ದೇಸಾಯಿ, ಪ್ರೊ.ಮೀನಾಕ್ಷಿ, ಡಾ.ಕೃಷ್ಣಮೂರ್ತಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಡಾ.ಮಾತೇಶ ಸುಬೇದಾರ ಸ್ವಾಗತಿಸಿದರು. ಡಾ.ರವಿ ಮೇಟಿ ನಿರೂಪಿಸಿದರು. ಪ್ರೊ.ಅಶೋಕ ಚೆಲವಾ ವಂದಿಸಿದರು.

# ನಾಳೆ ಜನಸಂಪರ್ಕ ಸಭೆ

ಬೀದರ: ಬೀದರ ಕಾರ್ಯ ಮತ್ತು ಪಾಲನೆ ವಿಭಾಗ ವ್ಯಾಪ್ತಿಯ ಔರಾದ(ಬಿ), ಭಾಲ್ಕಿ, ಬೀದರ, ಕಮಠಾಣ ಉಪ ವಿಭಾಗದಲಿ ಮಾರ್ಚ್. 18 ರಂದು ಜನ ಸಂಪರ್ಕಸಭೆ ಹಾಗೂ ಕೆಇಆರ್‌ಸಿಯ (ಎಸ್.ಒ.ಪಿ) ಮಾನದಂಡಗಳನ್ನು ಕುರಿತು ಅರಿವು ಮೂಡಿಸುವಿಕೆ ಕಾರ್ಯಕ್ರಮವನ್ನು ಕಾರ್ಯನಿರ್ವಾಹಕ ಇಂಜಿನಿಯರರು(ವಿ),/ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಗುವಿಸಕಂನಿ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿರುತ್ತದೆ. ಜನಸಂಪರ್ಕ ಸಭೆಗಳ ವಿವರ: ಮಾರ್ಚ್.18 ರಂದು ಬೆಳಿಗ್ಗೆ 10.30 ಗಂಟೆಗೆ ಔರಾದ್ (ಬಿ) ಉಪ ವಿಭಾಗ ಕಛೇರಿಯಲ್ಲಿ, ಬೀದರ (ನಗರ) ಉಪ ವಿಭಾಗ ಕಛೇರಿಯಲ್ಲಿ, ಕಮಠಾಣ ಉಪ ವಿಭಾಗ ಕಛೇರಿಯಲ್ಲಿ ಹಾಗೂ ಮಧ್ಯಾಹ್ನ 2.30 ಗಂಟೆಗೆ ಭಾಲ್ಕಿ ಉಪ ವಿಭಾಗ ಕಛೇರಿಯಲ್ಲಿ ಬೀದರ (ಗ್ರಾಮೀಣ) ಉಪ ವಿಭಾಗ ಕಛೇರಿಯಲ್ಲಿ ಸಭೆಗಳು ನಡೆಯಲಿವೆ.

ಸಾರ್ವಜನಿಕರು ಹಾಗೂ ಗುವಿಸಕಂನಿ ಗ್ರಾಹಕರು ಸಭೆಯಲ್ಲಿ ಉಪಸ್ಥಿತರಿದ್ದು, ಕುಂದು ಕೊರತೆಯ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಬೀದರ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹಿಳೆ ಸುಶಿಕ್ಷಿತವಾದರೆ ಇಡೀ ಸಮಾಜ ಪ್ರಜ್ವಲಿಸುವುದು: ರೇಷ್ಮಾ ಕೌರ್

• ಮಲ್ಲಮ್ಮ ನುಡಿ ವಾರ್ತೆ ಬೀದರ



ಮಹಿಳೆ ಸುಕ್ಷಿತವಾದರೆ ಆಕೆಯ ತವರು ಹಾಗೂ ಗಂಡನ ಮನೆ ಬೆಳಗುವುದರ ಜೊತೆಗೆ ಇಡೀ ಸಮಾಜವೇ ಪ್ರಜ್ವಲಿಸುವುದು ಎಂದು ಗುರುನಾನಕ ಸಮೂಹ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷೆ ಡಾ.ರೇಷ್ಮಾ ಕೌರ್ ತಿಳಿಸಿದರು.

ಭಾನುವಾರ ನಗರದ ರಾಘವೇಂದ್ರ ಕಲ್ಯಾಣ ಮಂಟಪದಲ್ಲಿ ರಾಜಮಾತಾ ಜಿಜಾವು ಮಹಿಳಾ ಸಮಿತಿ ಬೀದರ್ ವತಿಯಿಂದ ಜರುಗಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಓರ್ವ ಮಹಿಳೆ ಸುಶಿಕ್ಷಿತವಾದರೆ ಸಮಾಜದ ಸವಾಂಗಿಣ ಪ್ರಗತಿ ಸಾಧ್ಯವಿದೆ. ಶಿಕ್ಷಣದ ಜೊತೆಗೆ ಇಂದು ಸಂಸ್ಕಾರ, ಮಾನವಿಯ ಮೌಲ್ಯಗಳನ್ನು ಕಲಿಸುವುದು, ನೈತಿಕ, ಸಾಮಾಜಿಕ ಹಾಗೂ ಸೈದ್ಧಾಂತಿಕ ನೆಲೆಗಟ್ಟನ್ನು ಅರಿತುಕೊಳ್ಳುವುದು ತುಂಬ ಅಗತ್ಯವಾಗಿದೆ ಎಂದರು.

ಮಹಿಳೆ ಅಬಲೆಯಲ್ಲ, ಆಕೆ ಎಲ್ಲದರಲ್ಲೂ ಸಬಲೆ. ನಾರಿಶಕ್ತಿ ಮುಂದೆ ಬಂದರೆ ಇಡೀ ಸಮಾಜ ಅದನ್ನು ಗೌರವಿಸುತ್ತದೆ. ಹಾಗಂತ ನಮ್ಮ ಸೀಮೆಯ ಕಟ್ಟೆಯೊಡೆ-ಯದಂತೆ ತನ್ನ ಕುಟುಂಬ ಹಾಗೂ ಸಮಾಜದ ಜೊತೆ ಧೃಢವಾಗಿ ನಿಂತು ಮಾತೆ ಜೀಜಾಬಾಯಿ ಹಾಗೆ ತನ್ನ ಮಾತೃಶಕ್ತಿ ಪ್ರದರ್ಶಿಸಬೇಕಿದೆ ಎಂದವರು ಹೇಳಿದರು.

ನಮ್ಮ ಗುರುನಾನಕ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಅದರಲ್ಲೂ ಗುರುನಾನಕದೇವ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮಹಿಳೆಯರೆ 50 ಪ್ರತಿಶತಕ್ಕಿಂತ ಹೆಚ್ಚಿದ್ದು, ಇದರಿಂದ ಮಹಿಳೆ ಈಗ ಕೇವಲ ಕೆಲವೊಂದು ಕ್ಷೇತ್ರಕ್ಕೆ ಸೀಮಿತವಾಗಿರದೆ ಐಟಿ, ಬಿಟಿ, ತಾಂತ್ರಿಕ ಹಾಗೂ ಕೌಶಲ್ಯಾಧಾರಿತ ಕ್ಷೇತ್ರಗಳಿಗೂ ವಿಸ್ತರಿಸಿದ್ದು, ಇದು ಭವ್ಯಭಾರತಕ್ಕೊಂದು ಅಭಿವೃದ್ಧಿಯ ಕೈಗನ್ನಡಿಯಾಗಿದೆ ಎಂದು ಬಣ್ಣಿಸಿದರು.

ಧರಮಸಿಂಗ್ ಫೌಂಡೇಷನ್ ನಿರ್ದೇಶಕಿ ಸೋನಲ್ ವಿಜಯಸಿಂಗ್ ಮುಖ್ಯ ಅತಿಥಿಗಳಾಗಿ ಮಾತನಾಡಿ, ಓರ್ವ ಮಹಿಳೆ ಸುಶಿಕ್ಷಿತವಾದರೆ ಸಬಲಿಕರಣ, ಸಶಕ್ತಿಕರಣ ಹಾಗೂ ಸಾಂಸ್ಕೃತಿಕರಣದ ವಿಚಾರಧಾರೆ ಇರಿಸಿ ಮುಂದೆ ಬರುವಳು. ನಾರಿಶಕ್ತಿ ದೇಶದ ಬಹುದೊಡ್ಡ ಶಕ್ತಿಯಾಗಿದ್ದಾಳೆ. ಮಹಿಳೆ ಮುಂದೆ ಬರಲು ನಮ್ಮ ಫೌಂಡೇಷನ್ ವತಿಯಿಂದ ಇನ್ನು ಸಾಕಷ್ಟು ಸಹಾಯ ಮಾಡುವುದಾಗಿ ತಿಳಿಸಿದರು.

ಸಮಾಜದ ಪೂಜ್ಯರಾದ ದಾದಾ ಮಹಾರಾಜ ನಗರಕರ್ ಸಾನಿಧ್ಯ ವಹಿಸಿ ಮಾತನಾಡಿ, ಮಹಿಳೆ ಇಂದು ಎಲ್ಲ ಕ್ಷೇತ್ರಗಳಂತೆ ಅಧ್ಯಾತ್ಮದಲ್ಲೂ ಎತ್ತಿದ ಕೈ. ಹಾಗಾಗಿ ಈ ದೇಶದ ಚುಕ್ಕಾಣಿ ಹಿಡಿಯಲು ಓರ್ವ ಶಕ್ತಿಶಾಲಿ ಮಹಿಳೆಯ ಅಗತ್ಯವಿದೆ ಎಂದರು.

ಜಿ.ಎನ್.ಡಿ ಕಾಲೇಜಿನ ಪ್ರಾಧ್ಯಾಪಕಿ ಡಾ.ಜಸ್ಮಿತ್ ಕೌರ್ ಮಾತನಾಡಿ, ಇಂದು ಮಹಿಳೆ ಮಾನಸಿಕ ಹಾಗೂ ದೈಹಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಒತ್ತು ನೀಡಬೇಕು. ನಿತ್ಯ ಯೋಗ, ವ್ಯಾಯಾಮ ಜೊತೆಗೆ ದೈಹಿಕ ಚಟುವಟಿಕೆಗಳಿಗೂ ಉತ್ತೇಜನ ನೀಡಬೇಕಿದೆ. ಹೆಚ್ಚುತ್ತಿರುವ ಸೈಬರ್ ಅಪರಾಧಗಳಿಂದ ಮಹಿಳೆ ಜಾಗೃತಳಾಗಬೇಕೆಂದು ಕರೆ ಕೊಟ್ಟರು.

ಮಹಾನಗರ ಪಾಲಿಕೆಯ ಸದಸ್ಯೆ ಉಲ್ಲಾಸಿನಿ ಮುದಾಳೆ, ಪೋಲಿಸ್ ಅಧಿಕಾರಿ ಕೌಶಲ್ಯಾ ಮಸ್ಕಿ, ಅಕ್ಕಪಡೆಯ ಸಂಗೀತಾ, ವಿಜಯಾ ಜಾಧವ, ರೇಖಾ ಮುಳೆ, ಸೋನಿ ಬಿರಾದಾರ, ಅನಿತಾ ಭೋಸ್ಲೆ, ಸುರೇಖಾ ಜಾಧವ ಹಾಗೂ ಇತರರು ಕಾರ್ಯಕ್ರಮದಲ್ಲಿದ್ದರು.

ಆರಂಭದಲ್ಲಿ ಪ್ರಾಧ್ಯಾಪಕಿ ಸೋನಿ ಮಾನಕಾರಿ ಸರ್ವರನ್ನು ಸ್ವಾಗತಿಸಿ, ಪ್ರೊ.ಮೀನಾಕ್ಷಿ ಕಾಳೆ ಕಾರ್ಯಕ್ರಮ ನಿರೂಪಿಸಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

# ಗ್ರಾಮಗಳ ಅಭಿವೃದ್ಧಿಗೆ ನಿರಂತರ ಶ್ರಮಿಸುತ್ತೇನೆ: ಬೆಲ್ದಾಳೆ

• ಮಲ್ಲಮ್ಮ ನುಡಿ ವಾರ್ತೆ ಬೀದರ



ಗ್ರಾಮದ ಜನರು ಸಾಮಾಜಿಕ, ಧಾರ್ಮಿಕ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳನ್ನು ನಡೆಸಲು ಒಂದು ಸೂಕ್ತ ಸ್ಥಳದ ಅಗತ್ಯವಿತ್ತು. ಅದನ್ನು ಮನಗಂಡು ಇಲ್ಲಿ ಸಮುದಾಯ ಭವನ ನಿರ್ಮಾಣ ಮಾಡುವ ಕೆಲಸಕ್ಕೆ ಇಂದು ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ಬೀದರ್ ದಕ್ಷಿಣ ಕ್ಷೇತ್ರದ ಕೋಳಾರ (ಕೆ) ಗ್ರಾಮದಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಸಮೀಪ □10 ಲಕ್ಷರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ಸಮುದಾಯ ಭವನದ ಕಾಮಗಾರಿಗೆ ಇಂದು ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

ಗ್ರಾಮಸ್ಥರ ಸಾಮಾಜಿಕ, ಧಾರ್ಮಿಕ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳಿಗೆ ಈ ಸಮುದಾಯ ಭವನವು ಬಹಳ ಉಪಯುಕ್ತವಾಗಲಿದ್ದು, ಗ್ರಾಮದ ಅಭಿವೃದ್ಧಿಗೆ ಇದು ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ

ಈ ಸಂದರ್ಭದಲ್ಲಿ ಗ್ರಾಮಸ್ಥರು ಕುರಿ ಮರಿ ಉಡುಗೊರೆಯಾಗಿ ನೀಡಿ, ಕಂಬಳಿಯಿಂದ ಸನ್ಮಾನಿಸಿ ಗೌರವಿಸಿದುದು ನನಗೆ ಅಪಾರ ಸಂತೋಷ ತಂದಿತು.

ಈ ಭವನವು ಗ್ರಾಮಸ್ಥರ ಎಲ್ಲ ಕಾರ್ಯಕ್ರಮಗಳಿಗೆ ಉಪಯುಕ್ತವಾಗಿದ್ದು, ಗ್ರಾಮದ ಒಗ್ಗಟ್ಟನ್ನು ಮತ್ತಷ್ಟು ಬಲಪಡಿಸುತ್ತದೆ.

ಕಾಮಗಾರಿಯನ್ನು ಶೀಘ್ರವಾಗಿ ಹಾಗೂ ಉತ್ತಮ ಗುಣಮಟ್ಟದಲ್ಲಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಸೂಚನೆ ನೀಡಿದ್ದೇನೆ.

ಈ ಸಮುದಾಯ ಭವನ ಗ್ರಾಮಾಭಿವೃದ್ಧಿಗೆ ಸಹಕಾರಿಯಾಗಲಿ ಮತ್ತು ಎಲ್ಲರಿಗೂ ಉಪಯೋಗವಾಗಲಿ ಎಂದು ಶ್ರೀ ಬೀರಲಿಂಗೇಶ್ವರ ದೇವರಲ್ಲಿ ಪ್ರಾರ್ಥಿಸುತ್ತೇನೆ.

ಈ ಭವನವು ಗ್ರಾಮಸ್ಥರ ಎಲ್ಲ ಕಾರ್ಯಕ್ರಮಗಳಿಗೆ ಉಪಯುಕ್ತವಾಗಿದ್ದು, ಗ್ರಾಮದ ಒಗ್ಗಟ್ಟನ್ನು ಮತ್ತಷ್ಟು ಬಲಪಡಿಸುತ್ತದೆ,

ನಮ್ಮ ಬೀದರ್ ದಕ್ಷಿಣ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗಿದೆ. ರಸ್ತೆ, ಕುಡಿಯುವ ನೀರು, ವಿದ್ಯುತ್, ಆರೋಗ್ಯ ಹಾಗೂ ಶಿಕ್ಷಣದಂತಹ ಅಗತ್ಯ ಸೌಲಭ್ಯಗಳ ಜೊತೆಗೆ ಗ್ರಾಮಸ್ಥರ ಸಾಮಾಜಿಕ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳಿಗೆ ಅನುಕೂಲವಾಗುವಂತೆ ಸಮುದಾಯ ಭವನಗಳ ನಿರ್ಮಾಣಕ್ಕೂ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ.

ಸಮುದಾಯ ಭವನಗಳು ಗ್ರಾಮಸ್ಥರ ಸಭೆಗಳು, ಧಾರ್ಮಿಕ ಕಾರ್ಯಕ್ರಮಗಳು, ಸಾಮಾಜಿಕ ಸಮಾರಂಭಗಳು ಹಾಗೂ ವಿವಿಧ ಜನಪರ ಚಟುವಟಿಕೆಗಳಿಗೆ ಒಂದು ಸಾಮಾನ್ಯ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತವೆ.

ಇದರಿಂದ ಗ್ರಾಮದಲ್ಲಿ ಒಗ್ಗಟ್ಟು, ಸಹಕಾರ ಮತ್ತು ಸಮಗ್ರ ಅಭಿವೃದ್ಧಿಗೆ ಉತ್ತೇಜನ ಸಿಗುತ್ತದೆ.

ಮುಂದಿನ ದಿನಗಳಲ್ಲಿಯೂ ಕ್ಷೇತ್ರದ ಇನ್ನಷ್ಟು ಗ್ರಾಮಗಳಲ್ಲಿ ಮೂಲ

ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಜೊತೆಗೆ ಸಮುದಾಯ ಭವನ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಗ್ರಾಮಗಳ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಬಾಬುರಾವ ಮಲ್ಕಾಪುರ, ಪರಿಹಾರ ಮಲ್ಲಿಕಾರ್ಜುನ, ಪೀರಪ್ಪ ಯರನಳ್ಳಿ, ಪ್ರಕಾಶ ಶಂಭು, ಸಂತೋಷ ಶಂಭು, ವಿಜಯಕುಮಾರ ಪಾಟೀಲ, ಪ್ರಶಾಂತ ಶರಗುರ, ಶಿವಾನಂದ ಕುಂಬಾರ, ಬೀಮಣ್ಣ, ಸಂತೋಷ ಬೀರಗಿ, ಯೋಗೇಶ, ಪ್ರೇಮ, ಅಮರ ಮತ್ತಿತರರು ಉಪಸ್ಥಿತರಿದ್ದರು.

# ಪದವಿ ಪೂರ್ವ ಕಾಲೇಜು ಮಂಜೂರು ಹರ್ಷ: ಸ್ವಾಮಿ



"ಮನ್ನಾಎಖ್ಖೇಳ್ಳಿ ಗ್ರಾಮದ ಪ್ರೌಢಶಾಲೆಯನ್ನು ಉನ್ನತಿಕರಿಸಿ ಸರಕಾರಿ ಪದವಿಪೂರ್ವ ಕಾಲೇಜು ಎಂದು ಆಡಳಿತಾತ್ಮಕವಾಗಿ ಅನುಮೊದನೆ ದೊರೆತಿರುವುದು. ಸಮಸ್ತ ಮನ್ನಾಎಖ್ಖೇಳ್ಳಿ ಭಾಗದ ಜನರ ಪರವಾಗಿ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರಿಗೆ ಅಭಿನಂದನೆಗಳು ಬಿಜೆಪಿ ಪಕ್ಷದ ಓಬಿಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜಕುಮಾರ ಪಂಚಾಳ ತಿಳಿಸಿದ್ದಾರೆ. ಕ್ಷೇತ್ರದ ಶಾಸಕರಾಗಿ ಡಾ. ಶೈಲೇಂದ್ರ ಬೆಲ್ದಾಳೆ ಅವರು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು. ಪ್ರಮುಖರಾದ ಝುರೆಪ್ಪ ಹಂದಿಕೇರಾ, ಜಗನಾಥ ಉಪಾರ, ಸಂಗ್ರಾಮ ಬಿರಾದರ, ಮೊಹನ, ವಿನೋದ, ಬಸವರಾಜ ಸಜ್ಜನ, ವಿನೋದ ಕೊಟೆ, ಬಸವರಾಜ ನಿಂಗದಳ್ಳಿ ಅಭಿನಂದಿಸಿದ್ದಾರೆ.

"ಬೀದರ ದಕ್ಷಿಣ ಕ್ಷೇತ್ರಕ್ಕೆ ಅವಶ್ಯವಿರುವ ಮೂಲ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರ ಕೊಡುಗೆ ಅಪಾರವಾಗಿದೆ. ಮನ್ನಾಎಖ್ಖೇಳ್ಳಿ ಗ್ರಾಮದ ಪ್ರೌಢಶಾಲೆಯನ್ನು ಉನ್ನತಿಕರಿಸಿ ಸರಕಾರಿ ಪದವಿಪೂರ್ವ ಕಾಲೇಜು ಎಂದು ಅನುಮೊದನೆ ದೊರೆತಿರುವುದು ಸಂತೋಷದ ವಿಷಯವಾಗಿದೆ ಎಂದು ಮನ್ನಾಎಖ್ಖೇಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಯುವ ಮುಖಂಡ ಸಂತೋಷ ಹಳ್ಳಿಖೇಡ ತಿಳಿಸಿದ್ದಾರೆ.

ಮನ್ನಾಎಖ್ಖೇಳ್ಳಿ ಗ್ರಾಮದಲ್ಲಿ ಸರಕಾರಿ ಪದವಿಪೂರ್ವ ಕಾಲೇಜು ಸ್ಥಾಪಿಸುವಂತೆ ಶಾಸಕರು ವಿಧಾನ ಸಭೆಯಲ್ಲಿ ಧ್ವನಿ ಎತ್ತಿದ್ದರು. ಅವರ ಧ್ವನಿಗೆ ಸರಕಾರ ಸ್ಪಂದಿಸಿರುವುದು ಸ್ವಾಗತಾರ್ಹವಾಗಿದೆ.

ಸಂತೋಷ ಹಳ್ಳಿಖೇಡ ಗ್ರಾಪಂ ಮಾಜಿ ಅಧ್ಯಕ್ಷ.

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ತಾಲೂಕಿನ ಮನ್ನಾಎಖ್ಖೇಳ್ಳಿ ಗ್ರಾಮಕ್ಕೆ ಸರಕಾರಿ ಪದವಿ ಪೂರ್ವ ಕಾಲೇಜು ಮಂಜೂರಾಗಿದ್ದು ಮನ್ನಾಎಖ್ಖೇಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ಸಹಕಾರಿಯಾಗಿದ್ದು ಸರಕಾರಿ ಕಾಲೇಜು ಮಂಜೂರಾತಿಗೆ ಶ್ರಮಿಸಿದ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರಿಗೆ ಕ್ಷೇತ್ರದ ಜನರ ಪರವಾಗಿ ಅಭಿನಂದನೆಗಳು ಎಂದು ಬಿಜೆಪಿ ಪಕ್ಷದ ಮುಖಂಡ ಶಿವಕುಮಾರ ಸ್ವಾಮಿ ಬಂಬಳಗಿ ತಿಳಿಸಿದ್ದಾರೆ. ಗ್ರಾಮದ ಸರಕಾರಿ ಪ್ರೌಢಶಾಲೆಯನ್ನು ಉನ್ನತಿಕರಿಸಿ ಸರಕಾರಿ ಪದವಿಪೂರ್ವ ಕಾಲೇಜು ಎಂದು ಆಡಳಿತಾತ್ಮಕವಾಗಿ ಅನುಮೊದನೆ ದೊರೆತಿರುವುದು. ಆದಷ್ಟು ಬೇಗ ಕಾರ್ಯರಂಭವಾಗಬೇಕು. ಈ ಭಾಗದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಉಪಯೋಗವಾಗಬೇಕು. ಶಿವಕುಮಾರ ಸ್ವಾಮಿ ಬಂಬಳಗಿ, ಬಿಜೆಪಿ ಮುಖಂಡ.

# ವಿದ್ಯುತ್ ವ್ಯತ್ಯಯ ನಾಳೆ

ಮಲ್ಲಮ್ಮ ನುಡಿ ವಾರ್ತೆ , ಬೀದರ

ಹುಮನಾಬಾದ ಕಾರ್ಯ ಮತ್ತು ಪಾಲನೆ ವಿಭಾಗ ಗು.ವಿ.ಸ.ಕಂ ವ್ಯಾಪ್ತಿಯಲ್ಲಿ ಬರುವ 220ಕೆ.ವಿ ಹುಮನಾಬಾದ, ವಿದ್ಯುತ್ ಸ್ವೀಕರಣ ಕೇಂದ್ರದ 10ಎಂವಿಎ, 110/11ಕೆ.ವಿ ಪರಿವರ್ತಕದ ತುರ್ತು ಕೆಲಸದ ಪ್ರಯುಕ್ತ ದಿನಾಂಕ: 18-03-2026 ರಂದು ಬೆಳಗ್ಗೆ 9 ರಿಂದ 1 ಗಂಟೆವರೆಗೆ 11ಕೆವಿ ಕೆ.ಐ.ಡಿ.ಬಿ, 11ಕೆವಿ ಮುಸ್ತಾಪುರ, 11ಕೆವಿ ಆರ್.ಟಿ.ಒ, 11ಕೆವಿ ನೇಕ್ಟರ ಮತ್ತು 11ಕೆವಿ ಇಂಡಸ್ಟ್ರೀಯಲ್ ಫೀಡರ ಮಾರ್ಗದ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗುತ್ತದೆ. ಕಾರಣ ಗ್ರಾಹಕರು ಸಹಕರಿಸಬೇಕೆಂದು ಹುಮನಾಬಾದ 220ಕೆವಿ ಕಾರ್ಯಚರಣೆ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಣ್ಣಿನ ರಕ್ಷಣೆಗೆ ಸದಾ ಕಾಳಜಿ ವಹಿಸಿ: ಸಿಬಿಲ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ




ಕಣ್ಣಿದ್ದರೆ ಕೈಲಾಸ ಎಂಬ ಗಾದೆಯಂತೆ ನಿತ್ಯ ಬದುಕಿನಲ್ಲಿ ಕಣ್ಣು ದೇಹದ ಮಹತ್ವದ ಅಂಗ, ಹೀಗಾಗಿ ದೇಶದ ಪ್ರತಿಯೊಬ್ಬರು ನಾಗರಿಕರು ನೇತ್ರ ರಕ್ಷಣೆಯತ್ತ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಸಾಲಿನ್ಸ್ ಆಸ್ಪತ್ರೆಯ ಕಣ್ಣಿನ ತಜ್ಞ ಡಾ. ಸಿಬಿಲ ಹೇಳಿದರು.

ಪಟ್ಟಣದ ಮಹಾಜನ ಕಾಂಪ್ಲೆಕ್ಸ್‌ದಲ್ಲಿ ಸಾಲಿನ್ಸ್ ಕಣ್ಣಿನ ಆಸ್ಪತ್ರೆಯಿಂದ ಆಯೋಜಿಸಿದ ಉಚಿತ ನೇತ್ರ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಬೀದರ್ ಜಿಲ್ಲೆಯಲ್ಲಿ ಒಟ್ಟು 8 ಕಣ್ಣಿನ ಆಸ್ಪತ್ರೆ ಆರಂಭಿಸಲಾಗಿದೆ. ಗ್ರಾಮೀಣ ಭಾಗದ ಬಡ ಕುಟುಂದ ಮತ್ತು ಜನಸಾಮಾನ್ಯರಿಗೆ ಅನುಕೂಲಕ್ಕಾಗಿ ಉಚಿತ ನೇತ್ರ ಶಿಬಿರಗಳನ್ನು ಆಯೋಜನೆ ಮಾಡಲಾಗವುದು, ಆದರಿಂದ ಕಮಲನಗರ ತಾಲೂಕಿನ ಹೋಬಳಿ ಕೇಂದ್ರ ಸುತ್ತಲಿನ ಗ್ರಾಮದ ನಾಗರಿಕರು ಮಹಾಜನ ಕಾಂಪ್ಲೆಕ್ಸ್‌ನಲ್ಲಿ ಸಾಲಿನ್ಸ ಕಣ್ಣಿನ ಆಸ್ಪತ್ರೆ ಉಪಕೇಂದ್ರ ಆರಂಭಿಸಲಾಗಿದೆ. ತಾಲೂಕಿನ ಸುತ್ತಲಿನ ಗ್ರಾಮದ ಜನರು ಡಾ. ಸಾಲಿನ್ಸ್ ನೇತ್ರ ತಪಾಸಣೆ ಕೇಂದ್ರದ ಸೌಲಭ್ಯ ಪಡೆದುಕೊಳ್ಳಬೇಕು ಎಂದು ಹೇಳಿದರು.

ದೃಷ್ಟಿನಿಖರತೆ ತಪಾಸಣೆ, ಮತ್ತು ಕನ್ನಡಕ ವಿತರಣೆ ಸೌಲಭ್ಯ, ಕಣ್ಣಿನಲ್ಲಿ ಮೊರೆ ಹಾಗೂ ಇನ್ನಿತರ ಕಣ್ಣಿನ ಸಮಸ್ಯೆ ಇರುವ ರೋಗಿಗಳಿಗೆ ಚಿಕಿತ್ಸೆಗಾಗಿ ಡಾ. ಸಾಲಿನ್ಸ್ ಕಣ್ಣಿನ ಆಸ್ಪತ್ರೆಗೆ ಬೀದರ್‌ಗೆ ಕಳುಹಿಸಲಾಗುವುದು. ಆಸ್ಪತ್ರೆಯಲ್ಲಿ ಎಲ್ಲ ತರಹದ ಕನ್ನಡಕ ದುಎಯುವ ಸೌಲಭ್ಯ ಇದೆ ಎಂದು ವಿವರವಾಗಿ ತಿಳಿಸಿದರು.

ಮಹಾಜನ ಕಾಂಪ್ಲೆಕ್ಸ್ ಕಣ್ಣಿನ ಆಸ್ಪತ್ರೆಯಲ್ಲಿ ಪ್ರತಿ ದಿನ ಬೆಳಗೆ 10 ರಿಂದ ಸಾಯಕಾಲಂ 5 ಗಂಟೆವರಿಗೂ ನೇತ್ರ ತಪಾಸನೆ ಮಾಡಲಾಗವುದು ಡಾ. ಸಿಬಿಲ ಹೇಳಿದರು. ಈ ಸಂದರ್ಭದಲ್ಲಿ ಲಿಂಗಾನಂದ ಮಹಾಜನ, ಬಾಲಾಜಿ ತೆಲಂಗ, ಸುಭಾಷ ಮಿರಚೆ, ಡಾ. ವಿರೇಂದ್ರ ಪಾಟೀಲ್, ಡಾ. ಐಶ್ವರ್ಯ ಮಹಾಜನ, ಸತಿಷ, ಅಮಿತ, ಸನಿಲ, ಮನೋರಂಜನಿ, ಅಭಿನವ ಇದ್ದರು.

# ಜೀವನ್ ಜ್ಯೋತಿ ಯೋಜನೆ ಲಾಭ ಪಡೆಯಿರಿ: ಸತೀಷಕುಮಾರ




• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ ಲಾಭ ಪಡೆಯಿರಿ, ಯಾವುದೇ ಕಾರಣದಿಂದಾಗಿ ಮರಣ ಹೊಂದಿದರೂ ಜೀವ ವಿಮಾ ರಕ್ಷಣೆಯನ್ನು ನೀಡುತ್ತದೆ. ದೇಶದ ಪ್ರತಿಯೊಬ್ಬರಿಗೂ ಅತ್ಯಂತ ಕಡಿಮೆ ಖರ್ಚಿನಲ್ಲಿ ಜೀವ ವಿಮೆಯನ್ನು ಒದಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಈ ಯೋಜನೆಯನ್ನು ಜಾರಿಗೊಳಿಸಿದೆ ಎಂದು ಕೆಜಿಬಿ ಬ್ಯಾಂಕ್ ಮ್ಯಾನೇಂಜರ್ ಸತೀಷ ಕುಮಾರ ಹೇಳಿದರು. ತಾಲೂಕಿನ ಡಿಗ್ಗಿ ಗ್ರಾಮದಲ್ಲಿ ಈಚೆಗೆ ಎಸ್.ಬಿ.ಐ, ಕೆಜಿಬಿ ಬ್ಯಾಂಕ್ ಮತ್ತು ಲೀಡ್ ಬ್ಯಾಂಕ್ ಸಹಯೋಗದಲ್ಲಿ ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ಯೋಜನೆಯನ್ನು ಎಲ್‌ಐಸಿ ಮತ್ತು ಇತರೆ ಜೀವ ವಿಮಾ ಕಂಪನಿಗಳ ಮೂಲಕ ನೀಡಲಾಗುತ್ತದೆ. ಒಂದು ವರ್ಷದ ಅವಧಿಯದ್ದಾಗಿದ್ದು, ವರ್ಷದಿಂದ ವರ್ಷಕ್ಕೆ ನವಕರೀಸಬಹುದಾದ ವಿಮಾ ಯೋಜನೆಯಾಗಿದೆ ಎಂದು ವಿವರಿಸಿದರು.

ಬೀದರ್ ಲೀಡ್ ಬ್ಯಾಂಕ್ ಎಫ್‌ಎಲ್‌ಸಿ ರಾಜೇಂದ್ರ ಮಾತನಾಡಿ, 18ರಿಂದ 50 ವರ್ಷದೊಳಗಿನ ಭಾಗವಹಿಸುವ ಬ್ಯಾಂಕುಗಳು/ಅಂಚೆ ಕಚೇರಿಯ ಖಾತೆ ಹೊಂದಿರುವ ಎಲ್ಲಾ ವ್ಯಕ್ತಿಗಳು ಸೇರಲು ಅರ್ಹರಾಗಿದ್ದಾರೆ. ಯಾವುದೇ ನೈಸರ್ಗಿಕ/ಅಸ್ವಾಭಾವಿಕ ಕಾರಣಗಳಿಂದ ಪಾಲಿಸಿಯ ನಾಮಿನಿ/ಫಲಾನುಭವಿಗೆ ಸದಸ್ಯರ ಮರಣದ ನಂತರ ಸಂದರ್ಭದಲ್ಲಿ 2 ಲಕ್ಷ. ರೂ ಪ್ರಯೋಜನವನ್ನು ಪಾವತಿಸಲಾಗುತ್ತದೆ ಎಂದರು.

ಅಸಿಸ್ಟಂಟ್ ಮ್ಯಾನೇಂಜರ್ ಗೌರೀಶ ಉಮದಿ, ಎನ್‌ಆರ್‌ಎಲ್‌ಎಂ ತಾಲ್ಲೂಕು ಸಂಪನ್ಮೂಲ ವ್ಯಕ್ತಿ ಸಂಗೀತಾ ಧಬಾಲೆ, ಸುನಿತಾ ಮೇತ್ರೆ, ಕುಶಮಾ ಮಾರ್ತಂಡ್, ಸಂತೋಷಕಾಂಬಳೆ, ವಿಜಯಕುಮಾರ ಬನವಾಸೆ, ನಾಗರಾಜ ಮಠಪತಿ, ಕವಿತಾ ಸಂತೋಷ, ದೇವಿಕಾ ಪಂಚಾಳ, ಗುಲ್ಫಾ ಮದನೂರು, ಕಾವೇರಿ ಪುರಾಣೀಕ, ಇಂದುಮತಿ ಪುರಾಣಿಕ ಸುರೇಖಾ ಬೆಂಬುಳಗೆ ಹಾಗೂ ಪ್ರಮುಖರು ಇದ್ದರು.

# ಸರ್ವೀಕಲ್ ಕ್ಯಾನ್ಸರ್ ತಡೆಗೆ ಹೆಚ್‌ಪಿವಿ ಲಸಿಕೆ: ಗಿರೀಶ ಬದೋಲೆ

• ಮಲ್ಲಮ್ಮ ನುಡಿ ವಾರ್ತೆ ಬೀದರ




ಸರ್ವೀಕಲ್ ಕ್ಯಾನ್ಸರ್ ತಡೆಗಟ್ಟುವುದಕ್ಕಾಗಿ 14 ವರ್ಷ ತುಂಬಿದ 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಹೆಚ್.ಪಿ.ವಿ ಲಸಿಕೆ ನೀಡುವುದು ಅವಶ್ಯಕವಾಗಿದೆ ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ ಹೇಳಿದರು.

ಅವರು ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೀದರ ಸಂಯುಕ್ತಾಶ್ರಯದಲ್ಲಿ ತಾಯಿ ಮತ್ತು ಮಕ್ಕಳ ಆರೈಕೆ ಕೇಂದ್ರ 100 ಹಾಸಿಗೆ ಆಸ್ಪತ್ರೆಯಲ್ಲಿ ಹಮ್ಮಿಕೊಂಡಿದ್ದ ಹೆಚ್.ಪಿ.ವಿ ಲಸಿಕಾ-ಕರಣ ಚಾಲನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಆರೋಗ್ಯ ಇಲಾಖೆಯಲ್ಲಿ ಪೋಲಿಯೋ ಲಸಿಕೆ ನೀಡಿ ಪೋಲಿಯೋ ನಿರ್ಮೂಲನೆ ಮಾಡಿದಂತೆ ಈ ಲಸಿಕೆ ನೀಡಿ ಹೆಣ್ಣುಮಕ್ಕಳ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವುದಕ್ಕಾಗಿ ತಮ್ಮ ಮಕ್ಕಳಿಗೆ ಈ ಲಸಿಕೆ ನೀಡುವಂತೆ ಎಲ್ಲಾ ಪಾಲಕ, ಪೋಷಕರ ಹಾಗೂ ತಾಯಿಂದಿರ ಜವಾಬ್ದಾರಿಯಾಗಿರುತ್ತದೆ. ಈ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಡಿ.ಡಿ.ಪಿ.ಐ ರವರು ಶಾಲೆಯಲ್ಲಿರುವ 14 ವರ್ಷ ತುಂಬಿದ 15 ವರ್ಷ ಒಳಗಿನ ಹೆಣ್ಣು ಮಕ್ಕಳಿಗೆ ಲಸಿಕೆ ಹಾಕಿಸಲು ಆರೋಗ್ಯ ಸಂಸ್ಥೆಗಳಿಗೆ ಕಳುಹಿಸುವಂತೆ ಕ್ರಮವಹಿಸಲು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಧ್ಯಾನೇಶ್ವರ ನೀರಗುಡೆ ಮಾತನಾಡಿ, ಇಲಾಖೆಯ ಮಾರ್ಗಸೂಚಿಯಂತೆ ಮೊದಲನೇ ಹಂತದಲ್ಲಿ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಮಾತ್ರ ಲಸಿಕೆ ನೀಡಲಾಗುವುದು ಎಂದರು.

ಮಕ್ಕಳ ತಜ್ಞ ಡಾ.ವರ್ಷಾ ಮಾತನಾಡಿ, ಹೆಚ್.ಪಿ.ವಿ ಒಂದು ವೈರಸ್ ಇದು ಗರ್ಭಕಂಠದ ಕ್ಯಾನ್ಸರ್‌ಗೆ ಕಾರಣವಾಗುತ್ತದೆ, ಇಲಾಖೆಯ ಮಾರ್ಗಸೂಚಿಯಂತೆ 14 ವರ್ಷ ತುಂಬಿದ 15 ವರ್ಷ ಒಳಗಿನ ಹೆಣ್ಣು ಮಕ್ಕಳು ಮೊದಲು ಆಹಾರ ಸೇವಿಸಿದ ನಂತರ ಈ ಲಸಿಕೆ ತೆಗೆದುಕೊಳ್ಳುವುದು ಅವಶ್ಯಕವಾಗಿರುತ್ತದೆ ಎಂದರು.

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ. ಶಿವಶಂಕರ.ಬಿ. ಮಾತನಾಡಿ, ಹೆಚ್.ಪಿ.ವಿ ಲಸಿಕೆ ಸುರಕ್ಷಿತವಾಗಿದ್ದು 14 ವರ್ಷ ತುಂಬಿದ 15 ವರ್ಷ ಒಳಗಿನ ಹೆಣ್ಣು ಮಕ್ಕಳ ಗರ್ಭ ಕಂಠದ ಕ್ಯಾನ್ಸರ್ ತಡೆಗಟ್ಟುವ ಕುರಿತು ಈ ಲಸಿಕೆ ನೀಡಲಾಗುವುದು. ಈ ಲಸಿಕೆ ಪಡೆದ ನಂತರ ಯು.ವಿನ್. ಪೋರ್ಟಲ್‌ನಿಂದ ಪ್ರಮಾಣಪತ್ರ ಪಡೆದುಕೊಳ್ಳಲು ತಿಳಿಸಿದರು.

ಈ ಸಂದರ್ಭದಲ್ಲಿ ಡಾ.ದಿಲೀಪ ಡೋಂಗರೆ, ಡಾ.ಕಿರಣ ಪಾಟೀಲ, ಡಾ.ಶಾಂತಲಿಂಗ್ ಪಾಟೀಲ, ಉಮೇಶ ಬಿರಾದರ,. ಶಿವಶಂಕರ ಬೇಮಳಗಿ, ಗುರುನಾಥ ಕವಳೆ, ಓಂಕಾರ, ಲೋಕೇಶ, ಶಾಂತಾ, ಅಜಯ ಪಾಟೀಲ, ರವೀಂದ್ರ, ಅಬ್ರಹಾಮ, ಅನೀತಾ, ಅವಿನಾಶ ಹೆಚ್.ಐ.ಓ, ಆಶಾ ಕಾರ್ಯಕತೆ-ಯರು, ಆರೋಗ್ಯ ಇಲಾಖೆಯ ಅಧಿಕಾರಿ ಸೇರಿದಂತೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಅಂಬೇಡ್ಕರ್ ಭಾವಚಿತ್ರಕ್ಕೆ ಚಪ್ಪಲಿ ಧರಿಸಿ ನಮನ ಸಲ್ಲಿಸಿದ ಘಟನೆ ಖಂಡನೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಲೇಖಕಿ ಹಾಗೂ ಸಾಮಾಜಿಕ ಕಾರ್ಯಕರ್ತೆ ಬಾನು ಮುಸ್ತಾಕ್ ಅವರು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಚಪ್ಪಲಿ ಧರಿಸಿ ನಮನ ಸಲ್ಲಿಸಿರುವ ಘಟನೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ಬೀದರ್ ಜಿಲ್ಲಾ ಘಟಕ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಈ ಕುರಿತು ಪ್ರಕಟಣೆ ನೀಡಿದ ಕೆಡಿಎಸ್‌ಎಸ್ (ಭೀಮವಾದ) ಜಿಲ್ಲಾ ಸಂಚಾಲಕರಾದ ಸುನಿಲ್ ಸಂಗಮ್ ಅವರು, ಬಾನು ಮುಸ್ತಾಕ್ ಅವರು ಬುಕರ್ ಪ್ರಶಸ್ತಿ ಪುರಸ್ಕೃತ ಕನ್ನಡದ ಲೇಖಕಿ, ಕಥೆಗಾರ್ತಿ, ವಕೀಲರು ಹಾಗೂ ಸಮಾಜಕಾರ್ಯಕರ್ತೆ ಎಂದು ಪರಿಚಿತರಾಗಿದ್ದು, ಇತ್ತೀಚೆಗೆ ಮೈಸೂರು ದಸರಾ ನಾಡಹಬ್ಬದ ಉದ್ಘಾಟಕರಾಗಿ ನೇಮಕಗೊಂಡಿರುವುದು ತಿಳಿದ ವಿಷಯವಾಗಿದೆ. ಕೆಲವರು ಅವರ ನೇಮಕಕ್ಕೆ ವಿರೋಧ ವ್ಯಕ್ತಪಡಿಸಿದರೂ ಕರ್ನಾಟಕ ಸರ್ಕಾರವು ಅವರ ಜ್ಞಾನ, ಪ್ರತಿಭೆ ಹಾಗೂ ಸಾಧನೆಯನ್ನು ಮೆಚ್ಚಿ ಈ ಗೌರವ ನೀಡಿದೆ ಎಂದು ಹೇಳಿದರು.

ಆದರೆ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ದೇಶದ 140 ಕೋಟಿಗೂ ಹೆಚ್ಚು ಜನರ ಬದುಕಿಗೆ ದಾರಿ ತೋರಿದ ಮಹಾನ್ ಚಿಂತಕ, ಸಂವಿಧಾನ ಶಿಲ್ಪಿ ಹಾಗೂ ಸಮಾಜ ಸುಧಾರಕರಾಗಿದ್ದಾ-ರೆ. ಅಂತಹ ಮಹನೀಯರ ಭಾವಚಿತ್ರಕ್ಕೆ ನಮನ ಸಲ್ಲಿಸುವ ಸಂದರ್ಭದಲ್ಲಿ ಚಪ್ಪಲಿ ಧರಿಸಿ ನಮನ ಸಲ್ಲಿಸಿರುವುದು ಅಸಮಂಜಸ ಹಾಗೂ ಅವಮಾನಕಾರಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಈ ಘಟನೆ ಕುರಿತು ಹಲವು ಸಂಘಟನೆಗಳು, ಹಿರಿಯ ಮೇಧಾವಿಗಳು ಮತ್ತು ಸಮಾಜದ ಹಿತಚಿಂತಕರು ಆಕ್ಷೇಪ ವ್ಯಕ್ತಪಡಿಸಿದಾಗ, "ಚಪ್ಪಲಿ ನನ್ನ ಮನೆ ದೇವರು" ಎಂದು ಹೇಳಿರುವುದಾಗಿ ವರದಿಯಾಗಿದೆ. ಆದರೆ ಸಮಾಜದಲ್ಲಿ ಮಾನವೀಯತೆ ಹಾಗೂ ಪರಸ್ಪರ ಗೌರವದ ಮೌಲ್ಯಗಳನ್ನು ಕಾಪಾಡುವ ವ್ಯಕ್ತಿಯಾಗಿ ಇಂತಹ ನಡೆ ತಕ್ಕದ್ದು ಅಲ್ಲ ಎಂದು ಸಂಘಟನೆ ತಿಳಿಸಿದೆ.

ಇದಕ್ಕೂ ಮುನ್ನ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ನಡೆದ ಪೂಜೆ ಕಾರ್ಯಕ್ರಮದ ವೇಳೆ ಕೂಡ ಚಪ್ಪಲಿ ಧರಿಸಿರುವ ಕುರಿತು ಪ್ರಶ್ನೆಗಳು ಉದ್ಭವಿಸಿವೆ ಎಂದು ಅವರು ಹೇಳಿದರು. ಈ ಹಿನ್ನೆಲೆ ಬಾನು ಮುಸ್ತಾಕ್ ಅವರು ತಮ್ಮ ನಡೆಗೆ ಸಾರ್ವಜನಿಕವಾಗಿ ಸ್ಪಷ್ಟನೆ ನೀಡಬೇಕು ಅಥವಾ ಕ್ಷಮೆಯಾಚನೆ ಸಲ್ಲಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಕುರಿತು ಕರ್ನಾಟಕ ಸರ್ಕಾರವೂ ಸೂಕ್ತ ಗಮನಹರಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಕೆಡಿಎಸ್‌ಎಸ್ (ಭೀಮವಾದ) ಜಿಲ್ಲಾ ಸಂಚಾಲಕರಾದ ಸುನಿಲ್ ಸಂಗಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಡವರ ಅನಾಥ ಮಕ್ಕಳ ಬದುಕಿಗೆ ವರವಾದ ಅಬ್ದುಲ್ ಕಲಾಂ ಎಸ್.ಪಿ ಚಾರಿಟಬಲ್ ಪೌಂಡೇಷನ್: ವಾಮದೇವ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ



ತಾಲೂಕಿನ ಎಮ್ಮಿಗನೂರು ಗ್ರಾಮದ ಕೆನರಾ ಬ್ಯಾಂಕ್ ಬಳಿಯಲ್ಲಿ ಡಾ.ಅಬ್ದುಲ್ ಕಲಾಂ ಎಸ್.ಪಿ ಚಾರಿಟೇಬಲ್ ಪೌಂಡೇಷನ್ ಲೋಕಾರ್ಪಣೆಗೊಳ್ಳುವ ಜೊತೆಗೆ ಕೋಚಿಂಗ್ ಸೆಂಟರ್ ಅನ್ನು ಹಂಪಿ ಸಾವಿರ ದೇವರ ಮಹಾಂತ ಮಠದ ಶ್ರೀ ವಾಮದೇವ ಮಹಾಂತ ಶಿವಾಚಾರ್ಯ ಮಹಾಸ್ವಾಮಿ ಇವರು ದಿವ್ಯ ಸಾನಿಧ್ಯದೊಂದಿಗೆ ಭಾನುವಾರ ಸಂಜೆ ಉದ್ಘಾಟಿಸಿದರು. ಹಂಪಿ ಸಾವಿರ ದೇವರ ಮಹಾಂತ ಮಠದ ಶ್ರೀ ವಾಮದೇವ ಮಹಾಂತ ಶಿವಾಚಾರ್ಯ ಮಹಾಸ್ವಾಮಿ ದಿವ್ಯ ಸಾನಿಧ್ಯವಹಿಸಿ ಮಾತನಾಡಿ, ಬದುಕಿಗೆ ಮನುಷ್ಯ ಘನತೆ ನೀಡಬೇಕು. ಘನತೆ ನೀಡದಿದ್ದರೆ ಘನಕಾರ್ಯ ಮಾಡುವುದಿಲ್ಲ. ಅಬ್ದುಲ್ ಕಲಾಂ ಅವರನ್ನು ಜಗತ್ತು ಪ್ರೀತಿಸಿದೆ. ಜಗತ್ತಿನಲ್ಲಿ ಜ್ಞಾನದ ಹಸಿವನ್ನು ಕೈವಶ ಮಾಡಿಕೊಂಡಿದ್ದರು. ಶಿಕ್ಷಣದ ಮುಂದೆ ನಿಂತರೆ ಕೊಡ್ಡವರಾಗಲು ಸಾಧ್ಯ ನೆಲದ ಮೇಲಿನ ನಡೆಯಿಂದ ನೆಮ್ಮದಿಯ ಬದುಕು ಕಾಣಲು ಸಾಧ್ಯವಾಗಿದೆ. ಜ್ಞಾನದಿಂದ ನಾಡಿನಲ್ಲಿ ಬದುಕುವ ಸಂಸ್ಕೃತಿಯನ್ನು ಕಲಿಸಿಕೊಡುತ್ತದೆ. ಅದೃಷ್ಟದ ಮೇಲೆ ಹೋಗಬೇಡಿ, ಕಠಿಣ ಪರಿಶ್ರಮದಿಂದ ಹೋದರೆ ಜಗತ್ತು ಗುರುತಿಸುತ್ತದೆ. ಇಡೀ ವಿಶ್ವ ಮುಂದಿನ ದಿನದಲ್ಲಿ ಆರ್ಥಿಕವಾಗಿ ದಿವಾಳಿಯಾಗಲಿದೆ. ಮನೆಯ

ಮೂಲ ಘಟ್ಟಗಳ ಮೂಲಕ ಬದುಕು ಸಾಗಿಸುವ ಕಾಲ ಬರುತ್ತದೆ. ಯುವಕರು ಭಾರತ ದೇಶದ ಸಂಪತ್ತು. ಚಾರಿಟೇಬಲ್ ಸಂಸ್ಥೆಯು ಬಡವರ, ಅನಾಥ, ದಿನದಲಿತರ ಪರವಾಗಿ ತರಗತಿಗಳನ್ನು ನಡೆಸುತ್ತಿದೆ, ಈ ಸಂಸ್ಥೆ ಹೆಮ್ಮರವಾಗಿ ಬೆಳೆಯಲಿ ಎಂದು ಹಾರೈಯಿಸಿದರು.

ಪಿಎಸ್‌ಐ ಸುಪ್ರೀತ್ ವಿರುಪಾಕ್ಷಪ್ಪ ಮಾತನಾಡಿ, ಸಮಾಜ ಸೇವೆ ಮಾಡುವುದು ಸಂಸ್ಥೆಯ ಉದ್ದೇಶವಾಗಿದೆ. ಕಲಾಂ ಅವರ ಚಿಂತನೆ ಮತ್ತು ತತ್ವದಾರ್ಶಗಳೊಂದಿಗೆ ಸಂಸ್ಥೆಯನ್ನು ಕಟ್ಟಿದ್ದು, ಮುಂದಿನ ದಿನದಲ್ಲಿ ದೊಡ್ಡ ಮಟ್ಟದಲ್ಲಿ ರೂಪುಗೊಳ್ಳಲಿದೆ. ಜ್ಞಾನದ ಮಹತ್ವ ಅರಿತು-ಕೊಂಡು ನಡೆದಾಗ ಜೀವನ ಉತ್ತಮವಾಗಿರುತ್ತದೆ ಯುವಕರ ತಂಡಕ್ಕೆ ಶುಭವಾಗಲಿ ಎಂದರು.

ಡಾ.ಅಬ್ದುಲ್ ಕಲಾಂ ಎಸ್.ಪಿ ಚಾರಿಟೇಬಲ್ ಪೌಂಡೇಷನ್ ಸಂಸ್ಥಾಪಕ ಹೆಚ್.ಪೀರಾವಲಿ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರತಿಯೊಬ್ಬ ಮಕ್ಕಳಿಗೆ ಗುಣಾತ್ಮಕ ಶಿಕ್ಷಣದ ಜೊತೆಗೆ ಸಂಸ್ಕೃತಿ, ಸಂಸ್ಕಾರ ಕಲಿಸಿಕೊಡುವ ನಿಟ್ಟಿನಲ್ಲಿ ಪೋಷಕರು ಹೆಚ್ಚಿನ ಜಾಗೃತಿವಹಿಸಬೇಕು. ಬೌದ್ಧಿಕವಾಗಿ ಬೆಳೆಯುವ ಜೊತೆಗೆ ಶಿಕ್ಷಣವೂ ಪ್ರತಿಯೊಬ್ಬರ ಜೀವನಕ್ಕೆ ಅತ್ಯವಶ್ಯಕವಾಗಿದೆ ಇಂತಹ ಶಿಕ್ಷಣವನ್ನು ನಾವು ನೀಡಲು ಅನುಭವಿ ಶಿಕ್ಷಕರ ತಂಡ ಸಿದ್ದರಿದ್ದು ತಮ್ಮೆಲ್ಲರ ಸಹಕಾರ ಅತ್ಯಗತ್ಯ ಎಂದರು.

ಹೆಚ್.ವೀರಾಪುರದ ಜ್ಞಾನಜ್ಯೋತಿ ಶಿವಲಿಂಗ ಮಠದ ಜಡೇಶತಾತ, ಧರ್ಮಗುರುಗಳಾದ ಸೈಯದ್ ಶಬ್ಬಿರ್ ಖಾದಿ, ಹಫೀಜ್ ಮೊಹ್ಮದ್ ಆಜಂ ಷಹಾದ್,

ಸಾನಿಧ್ಯವಹಿಸಿದ್ದರು. ಡಾ.ಅಬ್ದುಲ್ ಕಲಾಂ ಎಸ್.ಪಿ ಚಾರಿಟೇಬಲ್ ಪೌಂಡೇಷನ್ ಅಧ್ಯಕ್ಷೆ ಹಂಚಿನಾಳ್ ಜಿ.ಜಬೀನ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು.

ನಂತರ ಕರಾಟೆ ಸೇರಿದಂತೆ ವಿವಿಧ ರಂಗದಲ್ಲಿ ಸಾಧನೆಗೈದ ಮಕ್ಕಳಿಗೆ ಹಾಗೂ ವೇದಿಕೆ ಮೇಲಿನ ಗಣ್ಯರಿಗೆ ಸನ್ಮಾನಿಸಿ ಗೌರವಿಸಿದರು. ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ ಮನಸೂರೆಗೊಂಡಿತು. ಕಾರ್ಯಕ್ರಮದಲ್ಲಿ ಪಾಸ್ಟರ್ ತೀಮೋತಿ, ಉಪಾಧ್ಯಕ್ಷ ರಾಜಣ್ಣ, ಸಮಾಜ ಸೇವಕ ಕನಕಪ್ಪ ಸುಣಗಾರ, ಮುಖಂಡರಾದ ಸದಾಶಿವಪ್ಪ, ಗಾದಲಿ ನಾಗರೆಡ್ಡಿ, ಗಾದಿಲಿಂಗಪ್ಪ, ಕೋನೆಮನೆ, ಶರಣಬಸವ, ಸಾಧಕಲಿ ಹುಸೇನಬಾಷಾ, ಕಡೆಮನೆ ಪೀರಾಸಾಬ್, ಎಂ.ಎಸ್.ಮೂಗಪ್ಪ, ಟಿ.ರಾಮು, ರಾಜಸಾಬ್, ವಿ.ವಿರೇಶ, ಪದ್ಮಾವತಮ್ಮ, ಹಂಪಾಪತಿ, ಬಸವರಾಜ್, ಮಲ್ಲೇಶ, ಪತ್ತಾರ ಮೌಲಾಸಬ್, ಸೇರಿದಂತೆ ಮುಖಂಡರು ಪಾಲ್ಗೊಂಡಿದ್ದರು. ಜಡೆಮ್ಮ ಹಾಗೂ ಭಾನುಬಿ ಪ್ರಾರ್ಥಿಸಿದರು, ಎಸ್. ರಾಮಪ್ಪ ಕಾರ್ಯಕ್ರಮ ನಿರೂಪಿಸಿದರು.

# ಬೈಕ್ ವೀಲಿಂಗ್ ಪ್ರಕರಣ ದಾಖಲಿಸಿ ಬೈಕ್ ವಶಕ್ಕೆ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಅಪಾಯಕಾರಿಯಾಗಿ ಬೈಕ್ ವೀಲಿಂಗ್ ಮಾಡಿದ್ದಲ್ಲದೆ ಇನ್ಸ್ಟಾಗ್ರಾಮ್‌ನಲ್ಲಿ ಅಪ್ ಲೋಡ್ ಮಾಡಿದ್ದ ಬೈಕ್ ಸವಾರರ ವಿರುದ್ದ ಪ್ರಕರಣ ದಾಖಲಿಸಿ ಬೈಕ್ ವಶಕ್ಕೆ ಪಡೆದಿರುವ ಘಟನೆ ಹುಣಸೂರು ನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಬಂಧಿತರನ್ನು ಹುಣಸೂರಿನ ಶಬ್ಬೀರ್ ನಗರದ ನಿವಾಸಿ ಲೇ. ಮುಬಾರಕ್ ಪಾಷಾ ಅವರ ಪುತ್ರ ಫುರ್ಸಾನ್ ಹಾಗೂ ಆತನ ಸ್ನೇಹಿತ ಎಂದು ಗುರುತಿಸಲಾಗಿದೆ.

ಹುಣಸೂರು ಮಡಿಕೇರಿ ಹೆದ್ದಾರಿಯ ಹಾಳಗೆರೆ ಬಳಿ ಬೈಕ್ ವೀಲಿಂಗ್ ಮಾಡಿದ್ದಲ್ಲದೆ ತನ್ನ ಇನ್ಸಾಗ್ರಾಮ್ ಖಾತೆಯಲ್ಲಿ ಅಪ್ಲೋಡ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು.

ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ನಗರ ಠಾಣೆ ಇನ್ಸ್ಪೆಕ್ಟರ್ ಸಂತೋಷ್ ಕಶ್ಯಪ್ ಮಾರ್ಗದರ್ಶನದಲ್ಲಿ ಎಸ್.ಐ.ತಾಜುದ್ದೀನ್ ನೇತೃತ್ವದ ತಂಡ ಇಬ್ಬರನ್ನು ಬಂಧಿಸಿ ಬೈಕ್ ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ.

ಮಾಹಿತಿ ನೀಡಿ ನಗರ ವ್ಯಾಪ್ತಿಯಲ್ಲಿ ಬೈಕ್ ವೀಲಿಂಗ್ ಮಾಡುವುದು ಕರ್ಕಶ ಶಬ್ದ ಹೊರ ಸೂಸುತ್ತಾ ವೇಗವಾಗಿ ವಾಹನಗಳನ್ನು ಓಡಿಸುವುದು ಅಕ್ರಮ ಮದ್ಯ ಸಾಗಾಟ, ನಿರ್ಜನ ಪ್ರದೇಶದಲ್ಲಿ ಮದ್ಯ ಸೇವನೆ, ಇಸ್ಪೀಟ್ ಆಟ ಕಂಡು ಬಂದಲ್ಲಿ 08222 253113 ಅಥವಾ 9480805034ಗೆ ಮಾಹಿತಿ ನೀಡುವಂತೆ ಪೊಲೀಸರಿಗೆ ಇನ್ಸ್ಪೆಕ್ಟರ್ ಸಂತೋಷ್ ಕಶ್ಯಪ್ ಮನವಿ ಮಾಡಿದ್ದಾರೆ.

# ರಾಷ್ಟ್ರೀಯ ಲೋಕಾದಲತ್: 1276 ಪ್ರಕರಣ 4.67 ಕೋಟಿ ರೂ.ಗೆ ಇತ್ಯಾರ್ಥ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು



ಹುಣಸೂರಿನ ನ್ಯಾಯಲಯದ ಅವರಣದಲ್ಲಿ ನಿನ್ನೆ ನಡೆದ ರಾಷ್ಟ್ರೀಯ ಲೋಕಾದಲತ್ ಕಾರ್ಯಕ್ರಮದಲ್ಲಿ ವ್ಯಾಜ್ಯ ಪೂರ್ವ ಮತ್ತು ಭಾಕಿ ಉಳಿದ 12630 ಪ್ರಕರಾಣಗಳ ಪೈಕಿ 1276 ಪ್ರಕರಣಗಳು ರೂ.4.67 ಕೋಟಿ ರೂ.ಗೆ ನ್ಯಾಯದೀಶರ ಸಮ್ಮುಖದಲ್ಲಿ ಇತ್ಯಾರ್ಥವಾಗಿದೆ.

ನಿನ್ನೆ ನಡೆದ ರಾಷ್ಟ್ರೀಯ ಲೋಕಾದಲತ್ ಕಾರ್ಯಕ್ರಮದಲ್ಲಿ 36 ಚೆಕ್ ಬೌನ್ಸ್ ಪ್ರಕರಣಗಳು ರೂ.86.83.851/-ಕ್ಕೆ ಇತ್ಯರ್ಥವಾದರೆ, ಹಣವಸೂಲಿ ಪ್ರಕರಣದಲ್ಲಿ 10 ಪ್ರಕರಣಗಳು ರೂ.40.63.320/-ಕ್ಕೆ ಇತ್ಯಾರ್ಥವಾಯಿತು. ಅಸ್ತಿವಿವಾದದಲ್ಲಿ 15 ದಾವೆಗಳು ಇತ್ಯಾರ್ಥವಾದರೆ, ಜನನ-ಮರಣದ 40 ಪ್ರಕರಣಗಳು ಇತ್ಯಾರ್ಥವಾಯಿತು. ಮೋಟಾರ್ ವಾಹನ ಕಾಯಿದೆ 1 ಪ್ರಕರಣ12 ಲಕ್ಷಕ್ಕೆ ಇತ್ಯಾರ್ಥವಾಯಿತು ಎಲ್ಲ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿ 1276 ಪ್ರಕರಣಗಳು ರೂ. 4.67 ಕೋಟಿಗೆ ಇತ್ಯಾರ್ಥವಾಗಿತು.

ಮಾರ್ಚ 1ರ 2026ಕ್ಕೆ 8ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ 2182 ಪ್ರಕರಣಗಳು, ಪ್ರಧಾನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಲಯದಲ್ಲಿ 2331, ಹೆಚ್ಚುವರಿ ಹಿರೀಯ ಶ್ರೇಣಿ ನ್ಯಾಯಲಯದಲ್ಲಿ 1421, ಪ್ರಧಾನ ಸಿವಿಲ್ ನ್ಯಾಯಲಯದಲ್ಲಿ 3773, ಹೆಚ್ಚುವರಿ ಸಿವಿಲ್ ನ್ಯಾಯಲಯದಲ್ಲಿ 2922 ಪ್ರಕರಣಗಳು ಸೇರಿ ಒಟ್ಟು 12630 ಪ್ರಕರಣಗಳು ಬಾಕಿ ಇದ್ದು, ಈ ಪೈಕಿ 4379 ಪ್ರಕರಣಗಳನ್ನು ರಾಷ್ಟ್ರೀಯ ಲೋಕಾದಲತ್ ಕಾರ್ಯಕ್ರಮದಲ್ಲಿ ಕೈಗೆತ್ತುಕೊಂಡು 1275 ಪ್ರಕರಣಗಳನ್ನು ರಾಜಿ ಮೂಲಕ ಇತ್ಯಾರ್ಥಗೊಳಿಸಲಾಯಿತು.

8ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ 100 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರೂ.701370 ಕ್ಕೆ ಇತ್ಯಾರ್ಥಗೊಳಿಸಿದರೆ, ಭಾಕಿ ಉಳಿದ 29 ಪ್ರಕರಣಗಳ ಪೈಕಿ 27 ಪ್ರಕರಣಗಳನ್ನು ರು.38.43.907 ಕ್ಕೆ ಇಲುತ್ಯಾರ್ಥ ಪಡಿಸಲಾಯಿತು. ಅದೆ ರೀತಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಲಯದಲ್ಲಿ 100 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರೂ.7.01367ಕ್ಕೆ ಇತ್ಯಾರ್ಥಗೋಳಿಸಿದರೆ ಬಾಕಿ ಉಳಿದ 265 ಪ್ರಕರಣಗಳ ಪೈಕಿ 229 ಪ್ರಕರಣಗಳನ್ನು ರು.1.98.35.555/-ಕ್ಕೆ ಇತ್ಯಾರ್ಥ ಪಡಿಸಲಾಯಿತು. ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಲಯದಲ್ಲಿ 1053 ವ್ಯಾಜ್ಯ ಪೂರ್ವ ಪ್ರಕರಣಗಳಲ್ಲಿ 111 ಪ್ರಕರಣಗಳನ್ನು ರೂ. 2400367 ಕ್ಕೆ ಇತ್ಯಾರ್ಥಗೊಳಿಸಿದರೆ, ಭಾಕಿ ಉಳಿದ 60 ಪ್ರಕರಣಗಳ ಪೈಕಿ 27 ಪ್ರಕರಣಗಳನ್ನು ರೂ. 13287000 ಕ್ಕೆ ಇತ್ಯಾರ್ಥ ಪಡಿಸಲಾಯಿತು.

ಅಲ್ಲದೆ ಪ್ರಧಾನ ಸಿವಿಲ್ ನ್ಯಾಯಲಯದಲ್ಲಿ 100 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರೂ.701367 ಕ್ಕೆ ಇತ್ಯಾರ್ಥಗೊಳಿಸಿದರೆ, ಭಾಕಿ ಉಳಿದ 342 ಪ್ರಕರಣಗಳ ಪೈಕಿ 323 ಪ್ರಕರಣಗಳನ್ನು ರು.2443914/-ಕ್ಕೆ ಇತ್ಯಾರ್ಥ ಪಡಿಸಲಾಯಿತು. ಹಾಗೂ ಪೂರ್ವ ವ್ಯಾಜ್ಯ ಪ್ರಕರಣಗಳಲ್ಲಿ 423 ಪ್ರಕರಣಗಳನ್ನು ರೂ,3145251ಕ್ಕೆ ಇತ್ಯಾರ್ಥ ಪಡಿಸಲಾಯಿತು ಹೆಚ್ಚುವರಿ ಸಿವಿಲ್ ನ್ಯಾಯಲಯದಲ್ಲಿ 100 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರೂ.701367ಕ್ಕೆ ಇತ್ಯಾರ್ಥಗೊಳಿಸಿದರೆ, ಭಾಕಿ ಉಳಿದ 270 ಪ್ರಕರಣಗಳ ಪೈಕಿ 259 ಪ್ರಕರಣಗಳನ್ನು ರು.2825370/-ಕ್ಕೆ ಇತ್ಯಾರ್ಥ ಪಡಿಸಲಾಯಿತು.

ಕಾರ್ಯಕ್ರಮದಲ್ಲಿ 8ನೇ ಹೆಚ್ಚುವರು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ. ಟಿ. ಗೋವಿಂದಯ್ಯ, ಹೆಚ್ಚುವರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾದೀಶರಾದ ಶ್ರೀಮತಿ. ಭಾಗ್ಯಮ್ಮ, ಪ್ರಧಾನ ಸಿವಿಲ್ ನ್ಯಾಯದೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಶ್ರೀಮತಿ. ಅಯಿಷಾಭಿ.ಪಿ.ವಜೀದ್, ಹೆಚ್ಚುವರಿ ಸಿವಿಲ್ ನ್ಯಾಯಾದೀಶರಾದ ಶ್ರೀಮತಿ.ನಮ್ರತಾ.ಎಸ್, ಹೊಸಮಠವಕಿಲರ ಸಂಘದ ಅದ್ಯಕ್ಷ ಶಿವಣ್ಣೆಗೌಡ, ಉಪದ್ಯಕ್ಷ ಹರೀಶ್ ಕುಮಾರ್, ಕಾರ್ಯದರ್ಶಿ ಸಂದಿಪ್ ಕುಮಾರ್, ಹಾಗೂ ವಕಿಲರು, ಕಕ್ಷಿದಾರರು ಉಪಸ್ಥಿತರಿದ್ದರು.

# ಕಟ್ಟಡ ಕಾರ್ಮಿಕರಿಗೆ ಆರೋಗ್ಯ ತಪಾಸಣಾ



• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಪಟ್ಟಣ ಪಂಚಾಯತ ಆವರಣದಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

ಶಿಬಿರದಲ್ಲಿ 30 ಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿ ರಕ್ತ ಪರೀಕ್ಷೆ, ರಕ್ತದೊತ್ತಡ (ಬಿಪಿ) ಪರೀಕ್ಷೆ ಹಾಗೂ ಕಣ್ಣಿನ ತಪಾಸಣೆ ಸೇರಿದಂತೆ ವಿವಿಧ ಆರೋಗ್ಯ ಪರೀಕ್ಷೆಗಳನ್ನು ಮಾಡಿಸಿಕೊಂಡರು. ವೈದ್ಯಕೀಯ ಸಿಬ್ಬಂದಿ ಕಾರ್ಮಿಕರ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಿ ಅಗತ್ಯ ಸಲಹೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಅರುಣಕುಮಾರ ಅವರು ಶಿಬಿರಕ್ಕೆ ಚಾಲನೆ ನೀಡಿದರು. ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷೆ ಭೀಮರಾಯ

ಹಳಿಮಣಿ, ಕಾರ್ಯದರ್ಶಿ ಮಿಂಟು ಮೇಸ್ತ್ರಿ, ಕಂದಾಯ ನಿರೀಕ್ಷಕಿ ಶ್ವೇತಾ ಶರಣು ಅಂಕಲಕೋಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕಾಲೇಜ್ ಮಂಜೂರಿಗೆ ಚಿಗಾನೂರ್ ಆಗ್ರಹ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ಮತಕ್ಷೇತ್ರದ ದೊರನಹಳ್ಳಿ ಗ್ರಾಮಕ್ಕೆ ಸರ್ಕಾರಿ ಪದವಿ ಪೂರ್ವ ಕಾಲೇಜು ಮಂಜೂರಾಗಿರುವುದು ಸ್ವಾಗತಾರ್ಹವಾದರೂ, ತಾಲ್ಲೂಕು ಕೇಂದ್ರವಾದ ವಡಗೇರಾ ಪಟ್ಟಣಕ್ಕೆ ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳನ್ನು ಮಂಜೂರು ಮಾಡದೆ ಶೈಕ್ಷಣಿಕವಾಗಿ ನಿರ್ಲಕ್ಷಿಸುತ್ತಿರುವುದು ಸರಿಯಲ್ಲ ಕೂಡಲೆ ಕಾಲೇಜುಗಳ ಮಂಜೂರು ಮಾಡುವಂತೆ ಕರ್ನಾಟಕ ರಕ್ಷಣಾ ವೇದಿಕೆಯ ವಡಗೇರಾ ತಾಲ್ಲೂಕು ಅಧ್ಯಕ್ಷ ಅಬ್ದುಲ್ ಚಿಗಾನೂರ್ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ದೊರನಹಳ್ಳಿಗೆ ಪಿಯು ಕಾಲೇಜು ಮಂಜೂರು ಮಾಡಿಸಿದ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರ ಕಾರ್ಯ ಶ್ಲಾಘನೀಯ ಆದರೆ, ವಡಗೇರಾ ಆದರೆ ಪಟ್ಟಣವು ತಾಲ್ಲೂಕು ಕೇಂದ್ರವೆಂದು ಘೋಷಣೆಯಾಗಿ ದಶಕಗಳೇ ಕಳೆದರೂ ಇಲ್ಲಿಯವರೆಗೆ ಒಂದು ಸರ್ಕಾರಿ ಪದವಿ ಕಾಲೇಜು ಮತ್ತು ಪದವಿ ಪೂರ್ವ ಕಾಲೇಜು ಇಲ್ಲದಿರುವುದು ಅತ್ಯಂತ ಖೇದಕರ ಸಂಗತಿ. ಈ ಭಾಗದ ಬಡ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಪರದಾಡುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನಮ್ಮ ವಡಗೇರಾ ತಾಲ್ಲೂಕು ಕೇಂದ್ರವಾಗಿದ್ದರೂ ಇಲ್ಲಿ ಉನ್ನತ ಶಿಕ್ಷಣದ ಕಾಲೇಜುಗಳಿಲ್ಲದಿರುವುದು ಶಾಸಕರ ನಿರ್ಲಕ್ಷವೋ ಅಥವಾ ಪಟ್ಟಣದ ಮೇಲಿನ ಅಸಡ್ಡೆಯೋ ಅರ್ಥವಾಗುತ್ತಿಲ್ಲ. ಕೂಡಲೇ ಸರ್ಕಾರ ಮತ್ತು ಶಾಸಕರು ಎಚ್ಚೆತ್ತುಕೊಂಡು ವಡಗೇರಾ ಪಟ್ಟಣ–ಕ್ಕೆ ನೂತನ ಪದವಿ ಪೂರ್ವ ಮತ್ತು ಪದವಿ ಮಹಾವಿದ್ಯಾಲಯ ಕಾಲೇಜುಗಳನ್ನು ಮಂಜೂರು ಮಾಡಿಸಿ ಪ್ರಸಕ್ತ ಜೂನ್ ತಿಂಗಳ ಶೈಕ್ಷಣಿಕ ವರ್ಷದಲ್ಲಿಯೇ ಕಾಲೇಜು ಮಂಜೂರು ಮಾಡಿಸಿ ಆರಂಭಿಸಿ ಈ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ಆಸರೆಯಾಗಬೇಕು ಒಂದು ವೇಳೆ ನಿರ್ಲಕ್ಷ ಬಯಸಿದ್ದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಉಗ್ರ ಹೋರಾಟ ಮಾಡುವುದಾಗಿ ಕರವೇ ತಾಲೂಕು ಅಧ್ಯಕ್ಷ ಅಬ್ದುಲ್ ಚಿಗಾನೂರ್ ಎಚ್ಚರಿಸಿದ್ದಾರೆ.

# ಪ್ರಕೃತಿ ಅರಣ್ಯ ಸಭಾಂಗಣ ಉದ್ಘಾಟನೆ



• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಗದಗ ಪ್ರಾದೇಶಿಕ ಅರಣ್ಯ ವಲಯದ ವತಿಯಿಂದ ಗದಗ ನಗರದಲ್ಲಿ ನೂತನವಾಗಿ ನಿರ್ಮಿಸಲಾದ 'ಪ್ರಕೃತಿ ಅರಣ್ಯ ಸಭಾಂಗಣ'**ವನ್ನು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಗದಗ ಸಮೀಪದ ಅಸುಂಡಿ ಬಳಿ ನಿರ್ಮಿಸಲಾಗುವ 'ತಿಮ್ಮಪ್ಪ ದೈವೀವನ' ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಪರಿಸರ ಸಂರಕ್ಷಣೆ ಹಾಗೂ ಅರಣ್ಯ ಸಂಪತ್ತಿನ ವೃದ್ಧಿ ಇಂದಿನ ಕಾಲಘಟ್ಟದಲ್ಲಿ ಅತ್ಯಂತ ಅವಶ್ಯಕವಾಗಿದೆ ಎಂದು ತಿಳಿಸಿದರು. ಅರಣ್ಯ ಇಲಾಖೆ ಕೈಗೊಳ್ಳುತ್ತಿರುವ ಇಂತಹ ಯೋಜನೆಗಳು ಪರಿಸರ ಜಾಗೃತಿ ಮೂಡಿಸಲು, ಜೀವ ವೈವಿಧ್ಯವನ್ನು ರಕ್ಷಿಸಲು ಹಾಗೂ ಮುಂದಿನ ಪೀಳಿಗೆಗೆ ಸಮೃದ್ಧ ಪ್ರಕೃತಿ ಸಂಪತ್ತನ್ನು ಉಳಿಸಲು ಸಹಕಾರಿಯಾಗಲಿವೆ ಎಂದರು.

ಗದಗ ನಗರದಲ್ಲಿ ನಿರ್ಮಿಸಲಾದ ಪ್ರಕೃತಿ ಅರಣ್ಯ ಸಭಾಂಗಣವು ಪರಿಸರ ಹಾಗೂ ಅರಣ್ಯ ಸಂಬಂಧಿತ ಜಾಗೃತಿ ಕಾರ್ಯಕ್ರಮಗಳು, ಸಭೆಗಳು ಮತ್ತು ತರಬೇತಿಗಳಿಗೆ ಪ್ರಮುಖ ಕೇಂದ್ರವಾಗಲಿದೆ. ಹಾಗೆಯೇ ಅಸುಂಡಿ ಬಳಿ ಅಭಿವೃದ್ಧಿಪಡಿಸಲಾಗುವ ತಿಮ್ಮಪ್ಪ ದೈವೀವನವು ವೃಕ್ಷಾರೋಪಣ ಮತ್ತು ಪರಿಸರ ಸಂರಕ್ಷಣೆಯ ಸಂಕಲ್ಪವನ್ನು ಬಲಪಡಿಸುವ ಪ್ರಮುಖ ಸ್ಥಳವಾಗಲಿದೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಜನಪ್ರತಿನಿಧಿಗಳು, ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

# ಪ್ರತ್ಯೇಕ ಅಪಘಾತದಲ್ಲಿ ಒಬ್ಬ ಸಾವು, ಇಬ್ಬರಿಗೆ ಗಾಯ





• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಗುರುಮಠಕಲ್, ಮಾ.16: ವಿಜಯಪುರ ಹೈದರಾಬಾದ್ ರಾಜ್ಯ ಹೆದ್ದಾರಿಯಲ್ಲಿ ಗುರುಮಠಕಲ್ ತಾಲೂಕಿನ ಬೂದುರು ಬೋರಬಂಡಾ ಮಧ್ಯದ ರಸ್ತೆಯಲ್ಲಿ ತಡರಾತ್ರಿ ಹಾಗೂ ನಸುಕಿನ ಜಾವ ಎರಡು ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಒಂದರಲ್ಲಿ ಲಾರಿ ಕ್ಲೀನರ್ ಮೃತಪಟ್ಟಿದ್ದು, ಮತ್ತೊಂದು ಅಪಘಾತದಲ್ಲಿ ಇಬ್ಬರಿಗೆ ಗಾಯಗಳಾಗಿವೆ.

ತೆಲಂಗಾಣ ರಾಜ್ಯದ ತಾಂಡುರ್‌ನಿಂದ ರಾಯಚೂರಿಗೆ ಸಿಮೆಂಟ್ ಸಾಗಿಸುತ್ತಿದ್ದ ಲಾರಿ ತಡರಾತ್ರಿ ನಿಯಂತ್ರಣ ತಪ್ಪಿ ಅಪಘಾತಕ್ಕೀಡಾಗಿದೆ. ಈ ಅಪಘಾತದಲ್ಲಿ ಲಾರಿಯ ಕ್ಲೀನರ್ ತಿಮ್ಮಪ್ಪ (28) ಮೃತಪಟ್ಟಿರುವುದಾಗಿ ಪೊಲೀಸ ಸಿಬ್ಬಂದಿ ತಿಳಿಸಿದ್ದಾರೆ.

ಅದೇ ಸ್ಥಳದಲ್ಲಿ ನಸುಕಿನ ಜಾವ ವೇಗವಾಗಿ ಬಂದ ಕಾರು ಕೂಡ ಅಪಘಾತಕ್ಕೀಡಾಗಿದ್ದು, ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಇಬ್ಬರಿಗೆ ಗಾಯಗಳಾಗಿವೆ. ಗಾಯಾಳುಗಳನ್ನು ಸಮೀಪದ ಸರಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ತಿಳಿದು ಬಂದಿದೆ.

# ಜೆಸ್ಕಾಂ ಸಿಬ್ಬಂದಿಗಳಿಗೆ ವಿದ್ಯುತ್ ಸುರಕ್ಷತಾ ಸಾಮಾಗ್ರಿಗಳ ವಿತರಣೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕಲಬುರಗಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಆದೇಶದ ಮೇರೆಗೆ ಕಾರ್ಯನಿರ್ವಾಹಕ ಅಭಿಯಂತರರ ಮುಂದಾಳತ್ವದಲ್ಲಿ

ಯಾದಗಿರಿ ಜೆಸ್ಕಾಂ ಸಿಬ್ಬಂದಿಗಳಿಗೆ ವಿದ್ಯುತ್ ಸುರಕ್ಷತಾ ಸಾಮಾಗ್ರಿಗಳನ್ನು ವಿತರಿಸಲಾಯಿತು.

ನಗರದ ಪಟ್ಟಣ ಶಾಖೆ –2 ರಲ್ಲಿನ ಸಿಬ್ಬಂದಿಗಳಿಗೆ ವಿದ್ಯುತ್ ಸುರಕ್ಷತಾ ಸಾಮಾಗ್ರಿಗಳಾದ ಇನ್ಸುಲೇಟೆಡ್ ಪರಿಕರಗಳು (ರಬ್ಬರ್ ಕೈಗವಸುಗಳು), ಖಖಖ ಗುರುತಿನ ಉಪಕರಣಗಳು, ಮತ್ತು ಆರ್‌ಸಿಡಿ (ಖಅಆ) (ಜೀವ ರಕ್ಷಕ), ಟೆಸ್ಟರ್, ಹೆಲ್ಮೆಟ್ ಸೇರಿದಂತೆ ಇನ್ನಿತರ ಪರಿಕರಗಳನ್ನು ವಿತರಿಸಲಾಗಿದೆ.

ಈ ಸಂದರ್ಭದಲ್ಲಿ ಪಟ್ಟಣ ಶಾಖೆ–2 ರ ಶಾಖಾಧಿಕಾರಿ ಸಹಾಯಕ ಅಭಿಯಂತರರಾದ ಅಶೋಕ ಚವ್ಹಾಣ, ಸಿಬ್ಬಂದಿಗಳಾದ ಸಿದ್ದಯ್ಯ, ಮಹೇಶ, ಮಲ್ಲಿಕಾರ್ಜುನ,

ವಿಶ್ವರಾಧ್ಯ, ಶಿವಪ್ಪ, ನಾಗರಾಜ, ಶ್ರೀಕಾಂತ, ಪ್ರವೀಣ, ಭೀಮಾಶಂಕರ, ಮಾರುತಿ, ಭಾಗಣ್ಣ, ಶಿವಾನಂದ, ತಿರುಪತಿ, ಪ್ರಕಾಶ ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು.

# ರೇವಣಸಿದ್ದೇಶ್ವರ ಗುರುಬಸವ ಶಿವಯೋಗಿಗಳ ಜಾತ್ರಾ ಮಹೋತ್ಸವ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜಿಲ್ಲೆಯ ಹುಣಸಗಿ ತಾಲೂಕಿನ ಅಗತಿರ್ಥ ಗ್ರಾಮದ ಶ್ರೀ ಮದ್ ಜಗದ್ಗುರು ರೇವಣಸಿದ್ದೇಶ್ವರ ಹಾಗೂ ಶ್ರೀ ಗುರುಬಸವ ಶಿವಯೋಗಿಗಳ ನಾಲ್ಕು ದಿನಗಳ ಕಾಲ ನಡೆಯುವ ಜಾತ್ರಾ ಮಹೋತ್ಸವ ಹಾಗೂ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮಕ್ಕೆ ಹಾಲುಮತ ಗುರುಪೀಠ ಸರೂರ ಅಗತೀರ್ಥದ ಪರಮ ಪೂಜ್ಯ ಶ್ರೀ ರೇವಣಸಿದ್ದೇಶ್ವರ ಶಾಂತಮಯ ಮಹಾಸ್ವಾಮಿಗಳು ಚಾಲನೆ ನೀಡಿ ಮಾತನಾಡಿದರು.

ಶ್ರೀ ರೇವಣಸಿದ್ದೇಶ್ವರ ಹಾಗೂ ಗುರುಬಸವ ಶಿವಯೋಗಿಗಳು ಭಕ್ತರ ಏಳಿಗೆಗೆ ಶ್ರಮಿಸಿದ ಮಹಾನ್ ಪುಣ್ಯ ಪುರುಷರು ಅವರ ತತ್ವಸಿದ್ಧಾಂತಗಳು ಇಂದಿಗೂ ಕೂಡ ಶ್ರೇಷ್ಠವಾಗಿವೆ ಹಾಲುಮತ ಸಮುದಾಯದ ಮೂಲ ಪರಂಪರೆಯು ತನ್ನದೇ ಆದ ಇತಿಹಾಸ ಹೊಂದಿದೆ ಭಂಡಾರ ಡೊಳ್ಳು ಕಂಬಳಿ ಈ ಮೂರು ಅತ್ಯಂತ ಪ್ರಮುಖ ಅವುಗಳು ಪರಮಾತ್ಮನಿಗೆ ಇಷ್ಟವಾದವುಗಳಾಗಿವೆ ಅವುಗಳನ್ನು ದಿನನಿತ್ಯ ಮನೆ ಪೂಜಿಸಿ ಹಣೆ ಮೇಲೆ ಭಂಡಾರ ಹಚ್ಚಿಕೊಳ್ಳಬೇಕು ಮೂಡನಂಬಿಕೆ ದುಶ್ಚಟಗಳಿಂದ ದೂರವಿದ್ದು ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಮಾಡಿ ಉತ್ತಮ ಶಿಕ್ಷಣ ಕೂಡಿಸುವಂತೆ ಹೇಳಿದರು. ಭಾನುವಾರದಂದು ಬೆಳಿಗ್ಗೆ 6:ಗಂಟೆಗೆ ಬ್ರಾಹ್ಮಿ ಮುಹೂರ್ತದಲ್ಲಿ ಶ್ರೀ ರೇವಣಸಿದ್ದೇಶ್ವರರು ಮತ್ತು ಗುರುಬಸವ ಶಿವಯೋಗಿಗಳ ಕರ್ತೃಗದ್ದಿಗೆಗೆ ಮಠದ ಶ್ರೀಗಳಿಂದ ಮಹಾರುದ್ರಾ ಅಭಿಷೇಕ ವಿವಿಧ ಪೂಜಾ ಕಾರ್ಯಕ್ರಮಗಳು ಜರುಗಿದವು ನಂತರ ಹಾಲುಮತ ಧರ್ಮದ ಧ್ವಜಾರೋಹಣ ಕಾರ್ಯಕ್ರಮ ನೆರವೇರಿತು. ಈ ಕಾರ್ಯಕ್ರಮದಲ್ಲಿ ಪರಮಪೂಜ್ಯ ಶ್ರೀ ಸದಾ ಲಿಂಗೇಶ್ವರ ಸ್ವಾಮಿಗಳು ಖಾಜಾಬಿಳಗಿ, ಪರಮ ಪೂಜ್ಯ ಶ್ರೀ ಮಾದಯ್ಯ ಗುರುಗಳು ತುರುವಿಹಾಳ, ಶ್ರೀ ಅನಂತಾನಂದ ಶರಣರು, ಶ್ರೀ ಅಮೋಗೆಪ್ಪ ಶಾಸ್ತ್ರಿಗಳು ಬಸ್ತಿಹಾಳ, ಶ್ರೀ ಬೀರಲಿಂಗೇಶ್ವರ ಸ್ವಾಮೀಜಿ ನಾಗನೂರು, ಸಂಗಮೇಶ್ ವಾಲಿಕರ್ ಪಶು ಮಿನಗಾರಿಕೆ ವಿಶ್ವವಿದ್ಯಾಲಯ ನಿರ್ದೇಶಕರು, ಗಂಗಾಧರ್ ಜೋಗುಡ್ಡ ಜಿಲ್ಲಾಧ್ಯಕ್ಷರು, ಚಂದಲಿಂಗ ಹಡಗರಗಲ, ನೀಲಕಂಠ ಕುಂಟೋಜಿ, ಶಿವಪುತ್ರ ಬಂಗಾಳಿ, ಸಮಾಜದ ಮುಖಂಡರು ಹಾಗೂ ಹಾಲುಮತ ಪರಂಪರೆಯ ಪೂಜ್ಯರು ಒಡೆಯರು ಪಟ್ಟದ ಪೂಜಾರಿಗಳು ಗ್ರಾಮದ ಭಕ್ತಾದಿಗಳು ಹಾಗೂ ಇನ್ನಿತರರು ಭಾಗವಹಿಸಿದ್ದರು.

# ಬಡ, ದಲಿತ ವಿದ್ಯಾರ್ಥಿಗಳಿಗೆ ವಸತಿ ನಿಲಯ ಆರಂಭ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ




ಶ್ರೀ ಶಿವಯೋಗಿ ಸ್ವಾಮಿ ಸ್ಮಾರಕ ವಿದ್ಯಾವರ್ಧಕ ಸಂಸ್ಥೆಯ ವತಿಯಿಂದ ಹುಣಸಗಿ ತಾಲೂಕಿನ ಮೂದನೂರು (ಕೆ) ಗ್ರಾಮದಲ್ಲಿ ಬಡ, ದಲಿತ ಹಾಗೂ ಪರಿಶಿಷ್ಟ ಜನಾಂಗದ ವಿದ್ಯಾರ್ಥಿಗಳಿಗೆ ವಸತಿ ನಿಲಯ ಆರಂಭಿಸುವುದಾಗಿ ಸಂಸ್ಥೆಯ ಉಪಾಧ್ಯಕ್ಷ ಶಂಕರ್ ಕೊಡ್ಲಾ ಅವರು ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು. 2025ರ 26ನೇ ಸಾಲಿಗೆ ಶ್ರೀ ಶಿವಯೋಗಿ ಸ್ವಾಮಿ ಸ್ಮಾರಕ ವಿದ್ಯಾ ವರ್ಧಕ ಸಂಸ್ಥೆಯ ಅಧ್ಯಕ್ಷರಾಗಿ ಜ್ಞಾನ ಪ್ರಕಾಶ್ ಸ್ವಾಮೀಜಿ ಆಯ್ಕೆಯಾಗಿದ್ದು, ಅವರ ಮಾರ್ಗದರ್ಶನದಲ್ಲಿ ಶಿಕ್ಷಣ ಹಾಗೂ ಸಮಾಜ ಸೇವಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಸಂಸ್ಥೆಯ ವತಿಯಿಂದ ದಿವಂಗತ ಶಾಂತಗೌಡ ಅವರ ಸ್ಮರಣಾರ್ಥ ವೀಣಾ ದಿವಂಗತ ಶಾಂತಗೌಡ ಹೆಣ್ಣು ಮಕ್ಕಳ ವಸತಿ ನಿಲಯ ಹಾಗೂ ದರ್ಶನಾಪುರ ಬಾಪುಗೌಡ ಅವರ ಹೆಸರಿನಲ್ಲಿ ಬಾಲಕರ ವಸತಿ ನಿಲಯವನ್ನು ಮೂದನೂರು (ಕೆ) ಗ್ರಾಮದಲ್ಲಿ ಪ್ರಾರಂಭಿಸಲಾಗುತ್ತಿದೆ.

ಪ್ರಾರಂಭಿಕ ಹಂತದಲ್ಲಿ 25 ಹೆಣ್ಣು ಮಕ್ಕಳು ಹಾಗೂ 25 ಗಂಡು ಮಕ್ಕಳಿಗೆ 5ನೇ ತರಗತಿಯಿಂದ 10ನೇ ತರಗತಿ ವರೆಗೆ ವಸತಿ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಇದಲ್ಲದೆ ಮದನೂರು (ಕೆ) ಗ್ರಾಮದಲ್ಲಿ ದಿವಂಗತ ಶಾಂತಗೌಡ ಅವರ ಹೆಸರಿನಲ್ಲಿ ಕನ್ನಡ ಕಾನ್ವೆಂಟ್ ಶಾಲೆ ಆರಂಭಿಸಲು ಸರ್ಕಾರದಿಂದ ಅನುಮತಿ ಪಡೆಯಲಾಗಿದೆ. ಇದರಿಂದ ಹುಣಸಗಿ ತಾಲೂಕಿನ ಬಡ ಮತ್ತು ಹಿಂದುಳಿದ ವರ್ಗದ ಮಕ್ಕಳಿಗೆ ಶಿಕ್ಷಣದ ಉತ್ತಮ ಅವಕಾಶ ದೊರೆಯಲಿದೆ.

ಈ ಯೋಜನೆಗೆ ಹಿನ್ನೆಲೆ ದಿವಂಗತ ಶಾಂತಗೌಡ ಪಾಟೀಲ್ ಅವರ ಆಶಯವಾಗಿದೆ.

ಅವರಿಗೆ ಸಂತಾನ ಇಲ್ಲದ ಕಾರಣ ತಮ್ಮ ಆಸ್ತಿಯಿಂದ ಬರುವ ಆದಾಯವನ್ನು ಗ್ರಾಮದ ಮಕ್ಕಳ ಶಿಕ್ಷಣ ಮತ್ತು ವಸತಿ ನಿಲಯಗಳಿಗಾಗಿ ಬಳಸಬೇಕೆಂದು ಅವರು ಬಯಸಿದ್ದರು.

ಅವರ ನಿಧನದ ನಂತರ ಅವರ ಪತ್ನಿಯವರು ಗಂಡನ ಆಶಯವನ್ನು ಗೌರವಿಸಿ ತಮ್ಮ ಪಾಲಿಗೆ ಬರುವ ಆಸ್ತಿಯನ್ನು ಉರಿಲಿಂಗ ಪೆದ್ದಿ ಮಠ ಕೊಡ್ಲಾ ಗ್ರಾಮದ ಜ್ಞಾನ ಪ್ರಕಾಶ್ ಸನಿಧಾನಕ್ಕೆ ಕಾನೂನುಬದ್ಧ ವಿಲ್ ಮೂಲಕ ನೋಂದಣಿ ಮಾಡಿ ಒಪ್ಪಿಸಿದ್ದಾರೆ.

ಆಸ್ತಿಯ ದುರುಪಯೋಗವಾಗದಂತೆ ಹಾಗೂ ಮನೆತನದ ಗೌರವ ಉಳಿಯುವಂತೆ ಜ್ಞಾನ ಪ್ರಕಾಶ್ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಮೂದನೂರು (ಕೆ) ಗ್ರಾಮದಲ್ಲಿ ವಿದ್ಯಾರ್ಥಿಗಳಿಗೆ ವಸತಿ ನಿಲಯ ಹಾಗೂ ಶಿಕ್ಷಣ ಸೌಲಭ್ಯಗಳನ್ನು ಆರಂಭಿಸುವ ನಿರ್ಧಾರ ಕೈಗೊಳ್ಳಲಾಗಿದೆ.

ಹುಣಸಗಿ ತಾಲೂಕಿನ ಬಡ ಹಾಗೂ ದಲಿತ ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಂಸ್ಥೆ ಮನವಿ ಮಾಡಿದೆ. ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ಸಂಸ್ಥೆಯ ಸಂಚಾಲಕರಾದ ಶ್ರೀ ಚಂದ್ರಕಾಂತ್ ಅವರ ವಿಳಾಸ ನಂ.ಟಿ೦ 1233 ಕೊಟಗೇರವಾಡ ಯಾದಗಿರಿ ನಗರ ಇಲ್ಲಿ ಸಲ್ಲಿಸಬಹುದಾಗಿದೆ ಎಂದು ತಿಳಿಸಲಾಗಿದೆ.

# ಧೈರ್ಯದಿಂದ ಪರೀಕ್ಷೆ ಬರೆಯಿರಿ: ಭೀಮಾ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಇದೆ ಮಾರ್ಚ್ 18 ರಂದು ನಡೆಯುವ ಹತ್ತನೇ ತರಗತಿಯ ಪರೀಕ್ಷೆ ಬರೆಯುತ್ತಿರುವ ಸಹೋದರ ಸಹೋದರಿಯರವರಿಗೆ ತಾವು ಭಯ, ಆತಂಕ, ಅವಸರ ಪಡೆಯದೆ ನಿಧಾನವಾಗಿ ತಮ್ಮ ಆಲೋಚನೆ ತಕ್ಕಹಾಗೆ ಉತ್ತರವನ್ನು ಬರೆದು ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಪ್ರಥಮ ಕೇಂದ್ರ ಘಟ್ಟವಾಗಿದೆ ಎಂದು ಎಂ ಕೆ ಭೀಮ ಬಳಿಚಕ್ರ ರವರು ಪ್ರಕಟಣೆಗೆ ತಿಳಿಸಿದ್ದಾರೆ.

ವಿದ್ಯಾರ್ಥಿ ಜೀವನದ ಬಹು ಮಹತ್ವದ ಘಟ್ಟ, ಪರೀಕ್ಷೆ ಅಂಕಗಳು ಶಿಕ್ಷಣದಲ್ಲಿ ಮುಖ್ಯವಾದರೂ ನಿಮ್ಮ ಭವಿಷ್ಯದಲ್ಲಿ ಜೀವನ ಹಾಗೂ ನಿಮ್ಮ ಬೌದ್ಧಿಕ ಸಾಮರ್ಥ್ಯದ ಅಳತೆ ಅಳಿಯದಿರಲಿ,

ಮುಂದಿನ ಸವಾಲುಗಳ ಬಗ್ಗೆ ಚಿಂತಿಸಿದಿರಿ ಅಂಜಿಕೆ ಆತಂಕಗಳಿಗೆ ಒಳಗಾಗದೆ ಆತ್ಮವಿಶ್ವಾಸದಿಂದ ಪರೀಕ್ಷೆ ಬರೆದು ತಮ್ಮ ಉತ್ತಮವಾದ ಬಹುಷ್ಯವನ್ನು ರೂಪಿಸಿಕೊಳ್ಳಲು ಒಂದು ಸುವರ್ಣ ಅವಕಾಶ ನಿಮ್ಮದಾಗಿದೆ, ಪರೀಕ್ಷೆಯಲ್ಲಿ ಫೇಲಾದರೂ ಜೀವನದಲ್ಲಿ ಫೇಲಾಗಬಾರದು, ಏನೇ ಆದರೂ ಗಟ್ಟಿ ಮನಸ್ಸು ಮಾಡಿ ಜೀವನ ಸಾಗಿಸಬೇಕು, ಅನವಶ್ಯಕ ವಿಚಾರಗಳಿಗೆ ಕಿವಿ ಕೊಡಬೇಡಿ, ನಿಮ್ಮ ಪರೀಕ್ಷೆ ಯಶಸ್ವಿಯಾಗಲಿ ಎಂದು ಶುಭ ಹಾರೈಕೆ ನಮ್ಮದಾಗಿರುತ್ತದೆ ಎಂದು ಹೇಳಿದರು.

# ಕರ ವಸೂಲಿಯಲ್ಲಿ ಮೊದಲು, ಸ್ವಚ್ಛತೆಯಲ್ಲಿ ಕೊನೆ, ಚಂಡರಿಕಿ ಪಂಚಾಯತಿ ಸಾಧನೆ



ಹರ್ಷವರ್ಧನರೆಡ್ಡಿ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲೂಕಿನ ಚಂಡರಿಕಿ ಗ್ರಾಮದಲ್ಲಿ ಕರ ವಸೂಲಿಯಲ್ಲಿ ಮೊದಲ ಅಧ್ಯತೆ ನೀಡುವ ಗ್ರಾಮ ಪಂಚಾಯಿತಿ ಸ್ವಚ್ಛತೆಯ ವಿಷಯದಲ್ಲಿ ಮಾತ್ರ ಸಂಪೂರ್ಣ ವಿಫಲವಾಗಿದೆ ಎಂಬ ಆರೋಪಗಳು ಗ್ರಾಮಸ್ಥರಿಂದ ಸೋಮವಾರ ಕೇಳಿ ಬಂದವು.

ಗ್ರಾಮದಲ್ಲಿ ರಸ್ತೆಗಳ ಪಕ್ಕದಲ್ಲಿ ಕಸ ರಾಶಿಗಳು ತುಂಬಿಕೊಂಡಿದ್ದು, ಎಲ್ಲೆಂದರಲ್ಲಿ ಕಸ ತ್ಯಾಜ್ಯ ಹರಡಿರುವುದರಿಂದ ದುರ್ವಾಸನೆ ಹಾಗೂ ಅಸ್ವಚ್ಛತೆ ವ್ಯಾಪಕವಾಗಿದೆ. ಗ್ರಾಮ ಪಂಚಾಯಿತಿ ವತಿಯಿಂದ ಮನೆಮನೆಗೆ ತೆರಳಿ ಕರ ವಸೂಲಿ ಮಾಡುವಲ್ಲಿ ಹೆಚ್ಚಿನ ಒತ್ತಡ ನೀಡಲಾಗುತ್ತಿದ್ದು, ಅದೇ ಮಟ್ಟದಲ್ಲಿ ಗ್ರಾಮ ಸ್ವಚ್ಛತೆ ಮತ್ತು ತ್ಯಾಜ್ಯ ನಿರ್ವಹಣೆಗೆ ಆದ್ಯತೆ ನೀಡಲಾಗುತ್ತಿಲ್ಲ, ಬಹು ದಿನಗಳಿಂದ ಬ್ಲೀಚಿಂಗ್ ಪೌಡರ್ ಸಹ ಸಿಂಪಡನೆ ಮಾಡಿಲ್ಲ ಎಂದು ಗ್ರಾಮಸ್ಥರಾದ ಹರ್ಷವರ್ಧನರೆಡ್ಡಿ ಸೋಮವಾರ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಸ್ತೆ ಬದಿಗಳಲ್ಲಿ ಹಾಗೂ ಕಾಲುವೆಗಳಲ್ಲಿ ಕಸ ತುಂಬಿಕೊಂಡಿರುವುದರಿಂದ ನೀರು ಸರಿಯಾಗಿ ಹರಿಯದೇ ಪರಿಸರ ಅಸ್ವಚ್ಛವಾಗುತ್ತಿದೆ. ಇದ–ರಿಂದ ರೋಗಗಳ ಭೀತಿ ಕೂಡ ಹೆಚ್ಚಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಈ ಕುರಿತು ಸಂಬಂಧಪಟ್ಟ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಗೀತಾ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದೆ ಇದ್ದು, ಸಾರ್ವಜನಿಕರಿಗೆ ಸರಿಯಾಗಿ ಉತ್ತರಿಸುತ್ತಿಲ್ಲ ಎಂದು ತಿಳಿಸಿದ್ದಾರೆ.

ಗ್ರಾಮದಲ್ಲಿ ಸ್ವಚ್ಛತಾ ವ್ಯವಸ್ಥೆಯನ್ನು ಸುಧಾರಿಸಿ, ಸಾರ್ವಜನಿಕರ ಆರೋಗ್ಯದ ಕಡೆ ಗಮನ ನೀಡಲು ಹಾಗೂ ತಕ್ಷಣ ಸ್ವಚ್ಛತಾ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಗ್ರಾಮಸ್ಥರು ತರಾಟೆಗೆ ತೆಗೆದು–ಕೊಂಡರು.

# ಅರ್ಥಾತ್ ಕೀಚಕನ ವದೆ ಬಯಲಾಟ ಪ್ರದರ್ಶನ



ಬಳ್ಳಾರಿ, : ಬಂಡ್ರಾಳ್ ಗ್ರಾಮದಲ್ಲಿ ಶ್ರೀ ಪೊಂಪಯ್ಯ ತಾತನವರ 34ನೇ ಪುಣ್ಯ ಸ್ಮರಣೆ, ಅಂಗವಾಗಿ ಶ್ರೀ ಪೊಂಪಯ್ಯತಾತ ಸೇವಾ ಟ್ರಸ್ಟ್ ವತಿಯಿಂದ, ಬಂಡ್ರಾಳ್ ಗ್ರಾಮದ ಸದ್ಭಕ್ತ ರಿಂದ ಪಾಂಡು ವಿಜಯ ಅರ್ಥಾತ್ ಕಿಚಕನ ವದೆ ಬಯಲಾಟ ನಾಟಕ ನೆಡೆಯಿತು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಂಡ್ರಾಳ್ ಎಂ ಮೃತ್ಯುಂಜಯ ಸ್ವಾಮಿ ವಕೀಲರು ವಹಿಸಿದ್ದರು ಅವರು ಮಾತನಾಡಿ ಬೈಲಾಟ ಬಳ್ಳಾರಿ ಜಿಲ್ಲೆಯ ಗಂಡು ಮೆಚ್ಚಿನ ಕಲೆಯಾಗಿದ್ದು, ಬೈಲಾಟಗಳಿಗೆ ಸಮಾಜವನ್ನು ತಿದ್ದುವ ಶಕ್ತಿ ಇದೆಶಕ್ತಿ ಇದೆ, ಬೈಲಾಟಗಳ ಮೂಲಕ ಹಲವಾರು ಗ್ರಾಮೀಣ ಭಾಗದ ಅನಕ್ಷರಸ್ಥ ಪ್ರತಿವಾಂತ ಕಲಾವಿದರು ಬೈಲಾಟಗಳನ್ನು ಕಲಾವಿದರಾಗಿ ಹೊರಹೊಮ್ಮಿದ್ದಾರೆ, ಸರ್ಕಾರ ಬಯಲಾಟ ಕಲಾವಿದರಿಗೆ ಪ್ರೋತ್ಸಾಹಿ ಕೊಡಬೇಕು ಶ್ರೀ ಪೊಂಪಯ್ಯತಾತನವರ ಪುಣ್ಯಸ್ಮರಣೆ ಅಂಗವಾಗಿ ಬಯಲಾಟ ನೆಡೆದಿರುವು ನಮಗೆ ಸಂತಸವಾಗಿದೆ ಎಂದು ತಿಳಿಸಿದರು, ಕಾರ್ಯಕ್ರಮವನ್ನು ಆರ್ ಸದಾಶಿವ ಸಮಾಜ ಸೇವಕರು ಉದ್ಯಮಿದಾರರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು ಇವರು ಮಾತನಾಡಿ ಬೈಲಾಟಗಳು ಮಹಾಭಾರತ ಮತ್ತು ರಾಮಾಯಣದಂತ ಇತಿಹಾಸವುಳ್ಳ ಕಥೆಗಳನ್ನು ಹೊಂದಿದ್ದು ಇವುಗಳು ಪ್ರಸ್ತುತ ದಿನಮಾನದಲ್ಲಿ ಜನರ ಮೇಲೆ ಬಹಳ ಪ್ರಭಾವ ಬಿರುತ್ತವೆ ಎಲ್ಲರೂ ಬೈಲಾಟಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಈ ಕಲೆಯನ್ನು ಉಳಿಸಿ, ಬೆಳೆಸಬೇಕಾಗಿದೆ ಎಂದರು ತ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಿವೃತ್ತ ಶಿಕ್ಷಕರಾದ ನರಸಿಂಹ ಜೋಶಿ ಮತ್ತು ವೆಂಕಟೇಶ್ ಅವರು ಭಾಗವಹಿಸಿದ್ದರು ಊರಿನ ಪ್ರಮುಖರಾದ ಮರೆಗೌಡ ತಾ ಪಂಚಾಯತ್ ಸದಸ್ಯರಾದ ಮಾಜಿ ಸದಸ್ಯರು, ಹನುಮಯ್ಯ, ಸಣ್ಣಪ್ಪ ದಬಾಡಿ ಮಲ್ಲಯ್ಯ, ವೆಂಕಟೇಶ್ ರೆಡ್ಡಿರು ಬಸವರಾಜ್ ಮುಂತಾದವರು ಭಾಗವಹಿಸಿದ್ದರು.

# ಮಹಿಳೆ ಕಾಣೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ದುರ್ಗಮ್ಮ ಬುಡ್ಡಪ್ಪ ಆಗ್ರಾ.

ಊರು :ಕಡೇಚೂರು ಗ್ರಾಮ ವಲಯ ಸೈದಾಪುರ ತಾಲೂಕು & ಜಿಲ್ಲೆ ಯಾದಗಿರಿ. ಇವರ ಮುಖದ ಚೆಹರೆ ಉದ್ದವಾಗಿದ್ದು, ನೇರವಾದ ಮೂಗು, ಕಂದು ಬಣ್ಣ, ಕಿವಿಯೋಲೆ ಬಂಗಾರದಿಂದ ಕೂಡಿದ್ದು, ಸೀರೆ ಉಟ್ಟಿರುತ್ತಾರೆ.

ಎತ್ತರ : 5̊6 ಕಾಲಲ್ಲಿ ಚಪ್ಪಲಿ, ಕೊರಳಲ್ಲಿ ಮಂಗಳ ಸೂತ್ರ ಇರುತ್ತದೆ. ದಿನಾಂಕ 22.12.2025 ರಂದು ಮಹಾರಾಷ್ಟ್ರದ ಪುಣೆ ನಗರದ ರೈಲ್ವೆ ಸ್ಟೇಷನ್ ಫ್ಲಾಟ್ ಫಾರ್ಮ್ ನಂಬರ್ 2 ರಲ್ಲಿ ಲೋಕಮಾನ್ಯ ತಿಲಕ್ ಟರ್ಮಿನಲ್–– ಚೆನ್ನೈಗೆ ಹೊರಡುವ ಎಕ್ಸ್ ಪ್ರೆಸ್ ರೈಲಿನಿಂದ ಹತ್ತಿದ್ದು, ಇಲ್ಲಿವರೆಗೂ ಸಿಕ್ಕಿರುವುದಿಲ್ಲ. ಹುಡುಕಿ ಕೊಟ್ಟರೆ 10.000 ಸಾವಿರ ರೂಪಾಯಿಗಳು ನೀಡಲಾಗುವುದು ಎಂದು ತಿಳಿಸಲಾಗಿದೆ. ಕಾರಣ ಸಾರ್ವಜನಿಕರಲ್ಲಿ ಮನವಿ ಮಾಡುವುದೇನೆಂದರೆ ಈ ಮಹಿಳೆ ಎಲ್ಲಿಯಾದರು ಕಂಡರೆ ಕೆಳಗಿನ ಮೊಬೈಲ್ ನಂಬರ್ ಗಳಿಗೆ ಕರೆ ಮಾಡಲು ವಿನಂತಿಸುವವರು. ಯಲ್ಲೇಶ್ ಆಗ್ರಾ, 9036600318. ಪರಶುರಾಮ ಆಗ್ರಾ 9148111826.

# ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಕೊಪ್ಪಳ ಜಿಲ್ಲಾ ಸಮಿತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ರಾಜ್ಯದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆ ಹಾಗೂ ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಅಂದಾಜು 2.80 ಲಕ್ಷ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಕರ್ನಾಟಕ ರಾಷ್ಟ್ರ ಸಮಿತಿಪಕ್ಷದ ಜಿಲ್ಲಾ ಘಟಕದ ವತಿಯಿಂದ ಕೊಪ್ಪಳ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ರಾಜ್ಯದ ಲಕ್ಷಾಂತರ ನಿರುದ್ಯೋಗಿ ಯುವಕರು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯ ಅಭ್ಯರ್ಥಿಗಳು ಎದುರಿಸುತ್ತಿರುವ ಸಂಕಷ್ಟವನ್ನು ಮನಗಂಡು ಈ ಮನವಿಯನ್ನು ಸಲ್ಲಿಸಲಾಗಿದೆ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ. ಇತ್ತೀಚೆಗೆ ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳು ನಡೆಸುತ್ತಿರುವ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ಏಖಖ ಪಕ್ಷ ಘೋಷಿಸಿದೆ. ಈ ವೇಳೆ ಸರ್ಕಾರವು ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳ ಸಂಪೂರ್ಣ ಮಾಹಿತಿಯನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು ಎಂದು ಆಗ್ರಹಿಸಲಾಯಿತು. ಜೊತೆಗೆ ಪ್ರತಿ ವರ್ಷ ಸರ್ಕಾರಿ ನೇಮಕಾತಿಗೆ ಸ್ಪಷ್ಟವಾದ ವಾರ್ಷಿಕ ನೇಮಕಾತಿ ಕ್ಯಾಲೆಂಡರ್ ಪ್ರಕಟಿಸಿ, ಯಾವ ಇಲಾಖೆಗಳಲ್ಲಿ ಯಾವ ಸಮಯದಲ್ಲಿ ಪರೀಕ್ಷೆಗಳು ನಡೆಯುತ್ತವೆ ಎಂಬುದನ್ನು ವಿದ್ಯಾರ್ಥಿಗಳಿಗೆ ಮುಂಚಿತವಾಗಿ ತಿಳಿಸಬೇಕು ಎಂದು ಮನವಿ ಮಾಡಿದರು .

ಇದಲ್ಲದೆ ನೇಮಕಾತಿ ಪ್ರಕ್ರಿಯೆಯಲ್ಲಿ ಅರ್ಜಿ ಸಲ್ಲಿಕೆ, ಲಿಖಿತ ಪರೀಕ್ಷೆ, ಸಂದರ್ಶನ ಹಾಗೂ ದಾಖಲೆ ಪರಿಶೀಲನೆ ಸೇರಿದಂತೆ ಎಲ್ಲಾ ಹಂತಗಳನ್ನು ನಿಗದಿತ ವೇಳಾಪಟ್ಟಿಯೊಳಗೆ ಪೂರ್ಣಗೊಳಿಸಿ, ಗರಿಷ್ಠ ಆರು ತಿಂಗಳೊಳಗೆ ನೇಮಕಾತಿ ಪತ್ರಗಳನ್ನು ನೀಡಬೇಕು ಎಂದು ಒತ್ತಾಯಿಸಲಾಯಿತು. ನೇಮಕಾತಿ ಪ್ರಕ್ರಿಯೆ ಸಂಪೂರ್ಣವಾಗಿ ಪಾರದರ್ಶಕವಾಗಿ ಮತ್ತು ಕಾನೂನುಬದ್ಧವಾಗಿ ನಡೆಯಬೇಕು. ನೇಮಕಾತಿ ಹಗರಣಗಳಿಂದ ಹತಾಶರಾಗಿರುವ ಅಭ್ಯರ್ಥಿಗಳಿಗೆ ಸರ್ಕಾರ ವಿಶ್ವಾಸ ತುಂಬುವ ಕ್ರಮ ಕೈಗೊಳ್ಳಬೇಕು ಎಂದು ಏಖಖ ಪಕ್ಷದ ಮುಖಂಡರು ಹೇಳಿದರು.

ಇದರ ಜೊತೆಗೆ ಪ್ರಸ್ತುತ 700 ರಿಂದ 800 ರೂಪಾಯಿವರೆಗೆ ಇರುವ ಅರ್ಜಿ ಶುಲ್ಕವನ್ನು ಕೇವಲ 100 ರೂಪಾಯಿಗೆ ಇಳಿಸಬೇಕು, ಇದರಿಂದ ಉದ್ಯೋಗಾಕಾಂಕ್ಷಿಗಳು ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅನುಕೂಲವಾಗುತ್ತದೆ ಎಂದು ಮನವಿ ಮಾಡಲಾಗಿದೆ. ಅದೇ ವೇಳೆ ಉದ್ಯೋಗಾಕಾಂಕ್ಷಿಗಳ ಪ್ರತಿಭಟನೆಯಲ್ಲಿ ಭಾಗವಹಿಸಿದ್ದವರ ಮೇಲೆ ದಾಖಲಾಗಿರುವ ಪೊಲೀಸ್ ಪ್ರಕರಣಗಳನ್ನು ಕೂಡಲೇ ಹಿಂಪಡೆಯಬೇಕು ಎಂದು ಕೂಡ ಸರ್ಕಾರಕ್ಕೆ ಆಗ್ರಹಿಸಲಾಗಿದೆ.

ಈ ಕುರಿತು ಕೊಪ್ಪಳ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ನಿರುದ್ಯೋಗಿ ಯುವಕರ ಸಮಸ್ಯೆಗೆ ತ್ವರಿತ ಪರಿಹಾರ ಒದಗಿಸಬೇಕು ಎಂದು ಏಖಖ ಪಕ್ಷದ ಜಿಲ್ಲಾ ಘಟಕ ಒತ್ತಾಯಿಸಿದೆ. ಈ ಸಂದರ್ಭದಲ್ಲಿ ರಾಷ್ಟ್ರ ಸಮಿತಿ ಪಕ್ಷದ ಸರ್ವ ಸದಸ್ಯರು ಪಾಲ್ಗೊಂಡಿದ್ದರು.

# ಬಸ್ ನಿಲ್ದಾಣದಲ್ಲಿ ಬಸ್ ಡಿಕ್ಕಿ ಸ್ಥಳದಲ್ಲೇ ಮಹಿಳಾ ಸ್ಥಳದಲ್ಲಿ ಸಾವು



• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ಇಂದು ಸೋಮವಾರ ನಗರದ ಬಸ್ ನಿಲ್ದಾಣದಲ್ಲಿ ಮಹಿಳೆಗೆ ಬಸ್ ಡಿಕ್ಕಿ ಹೊಡೆದು ಓರ್ವ ಮಹಿಳೆ ಸ್ಥಳದಲ್ಲಿ ಸಾವನ್ನಪ್ಪಿದ್ದು. ಬಸ್ ರಾಯಚೂರು ಡಿಪೋ ಗೆ ಸಂಬಂಧಪಟ್ಟಿದ್ದು ಎಂಬ ಮಾಹಿತಿ ಇದೆ.

ಕಾರಟಗಿ ಪಟ್ಟಣದಿಂದ ಸಿಂಧನೂರು ತಾಲೂಕಿನ ಜವಳಗೇರಾ ತಮ್ಮ ಸಂಬಂಧಿಕರ ಮನೆಗೆ ಹೋಗಿದ್ದು ಅಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ಒಳ್ಳೆ ಬರುವಾಗ ಸಿಂಧನೂರು ನಗರದ ಬಸ್ ನಿಲ್ದಾಣದಲ್ಲಿ ಇಳಿದು ತಮ್ಮ ಊರಿಗೆ ಹೋಗುವ ಬಸ್ ನಿಲ್ಲುವ ಸ್ಥಳಕ್ಕೆ ಹೋಗುವಾಗ ರಾಯಚೂರು ನಿಂದ ಬಳ್ಳಾರಿ ಬಸ್ ತೆರಳುವಾಗ ನಿಲ್ದಾಣ ಒಳಗೆ ಬರುವಾಗ ಬಸ್ (ಕೆಎ 36.1415 )ಈರಮ್ಮ ಗಂಡ ಬಸಣ್ಣ ಕಾರಟಗಿ ಪಟ್ಟಣದ ಬೇವಿನಾಳ ಮಹಿಳಾ (48 ವರ್ಷ) ಡಿಕ್ಕಿ ಹೊಡೆದು ಸ್ಥಳದಲ್ಲಿ ಸಾವನ್ನಪ್ಪಿದ್ದು. ಬಸ್ ನಿಲ್ದಾಣದಲ್ಲಿ ಫುಲ್ ಟ್ರಾಫಿಕ್ ಜಾಮ್ ಆಗಿತ್ತು. ಈ ವಿಷಯ ತಿಳಿದ ಟ್ರಾಫಿಕ್ ಪೊಲೀಸ್ ಠಾಣೆ ಪಿಎ□□□ ಚಂದ್ರಶೇಖರ್ ಹಿರೇಮಠ ಹಾಗೂ ಪೊಲೀಸ್ ಸಿಬ್ಬಂದಿ ವರ್ಗದವರು ಸೇರ ಶವವನ್ನು ನಗರದ ಸರ್ಕಾರಿ ಆಸ್ಪತ್ರೆಗೆ ತಂದು ಮರಣೋತ್ತರ ಪರೀಕ್ಷೆ ನಡೆಸಲು ಕುಟುಂಬಸ್ಥರಿಗೆ ಮಾಹಿತಿ ನೀಡಿದರು. ಸರ್ಕಾರಿ ಆಸ್ಪತ್ರೆಯ ಮುಂದೆ ಜನರನ್ನು ಚದುರಿಸಿ ಪೊಲೀಸ್ ಇಲಾಖೆ ಹರಸಾಹಸ ಪಡಬೇಕಾಯಿತು.

# ಸಂಸ್ಕಾರಯುತ ಶಿಕ್ಷಣ ಅಗತ್ಯ: ಭಾಲ್ಕಿ ಶ್ರೀ



ಶಿಕ್ಷಣ ವ್ಯಕ್ತಿಯ ಘನತೆ ಹೆಚ್ಚಿಸುತ್ತದೆ.ವಸಂತರಾವ ಪಾಟೀಲ್ ಉಸ್ತುವಾರಿಯಲ್ಲಿ ನಡೆಯುತ್ತಿರುವ ಶಾರದಾ ಸ್ಕೂಲ್ ಗ್ರಾಮೀಣ ಭಾಗದ ಬಡ ಕುಟುಂಬದ ಮಕ್ಕಳಿಗೆ ಕೌಶಲ್ಯಭರಿತ ಶಿಕ್ಷಣ ನೀಡುತ್ತಿರುವ ಕಾರ್ಯ ಇತರರಿಗೆ ಮಾದರಿಯಾಗಿದೆ.ಇಲ್ಲಿ ಕಲಿತ ಅದೇಷ್ಟೋ ಮಕ್ಕಳು ರಾಷ್ಟ್ರ ಮಟ್ಟದಲ್ಲಿ ಮಿಂಚುತ್ತಿರುವುದು ಹೆಮ್ಮೆಯ ವಿಷಯ.

• **ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಭಾಲ್ಕಿ.**

" ವಿದ್ಯಾರ್ಥಿಗಳು ಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ಅಂದಿನ ಅಭ್ಯಾಸವನ್ನು ಅಂದೇ ಮಾಡಬೇಕು. ಅಭ್ಯಾಸದಲ್ಲಿ ಗೊಂದಲಗಳಿದ್ದರೆ ಪರಿಹರಿಸಿಕೊಳ್ಳಬೇಕು. ಪಾಠದ ಮುಖ್ಯಾಂಶಗಳನ್ನು ಟಿಪ್ಪಣಿ ರೂಪದಲ್ಲಿ ಬರೆದಿಟ್ಟುಕೊಳ್ಳಬೇಕು.

• **ಮಹಾದೇವ ಪಟ್ನೆ , ಆಡಳಿತಾಧಿಕಾರಿಗಳು, ಶಾರದಾ ಪಬ್ಲಿಕ್ ಸ್ಕೂಲ್ ಭಾಲ್ಕಿ.**

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ನಿರಂತರ ಅಧ್ಯಯನ ಯಶಸ್ಸಿನ ಗುಟ್ಟು. ಬಾಲ್ಯದಲ್ಲಿ ಕಲಿತ ಶಿಕ್ಷಣ ಜೀವನದ ಕೊನೆಯುಸಿರಿನವರೆಗೂ ಇರುತ್ತದೆ.ಆದಕಾರಣ ಪ್ರಾಥಮಿಕ ಹಂತದಲ್ಲಿ ಸಂಸ್ಕಾರಭರಿತ ಗುಣಮಟ್ಟದ ಶಿಕ್ಷಣ ಮಕ್ಕಳಿಗೆ ದೊರಕುವ ಹಾಗೆ ಪಾಲಕ–ಶಿಕ್ಷಕರು ನಿಗಾವಹಿಸಬೇಕು ಎಂದು ಬ.ಕಲ್ಯಾಣ ಅನುಭವ ಮಂಟಪ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ತಾಕೀತು ಮಾಡಿದರು.

ಪಟ್ಟಣದ ಶಾರದಾ ಸ್ಕೂಲ್‌ನಲ್ಲಿ ಹಮ್ಮಿಕೊಂಡಿರುವ 15ನೇ ಶಾಲಾ ವಾರ್ಷಿಕೋತ್ಸವ ಸಮಾರಂಭದ ದಿವ್ಯಸಾನಿಧ್ಯ ವಹಿಸಿ ಮಾತನಾಡಿದ ಪೂಜ್ಯರು,ಇತ್ತೀಚಿನ ಮಕ್ಕಳು ಮೊಬೈಲ್,ಟಿವಿಯಲ್ಲಿ ಕಾಲ ಹಗರಣ ಮಾಡುವುದನ್ನು ತಡೆಗಟ್ಟಬೇಕು.ಬದಲಾದ ಶಿಕ್ಷಣ ವ್ಯವಸ್ಥೆಗೆ ಹೊಂದಿಕೊಂಡು ಶಿಕ್ಷಕರು ಪರೀಕ್ಷೆಗೆ ಅಣಿಗೊಳಿಸಬೇಕು ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ ಮಾತನಾಡಿ,ಪ್ರತಿ ವರ್ಷ ಇಲಾಖೆ ವತಿಯಿಂದ ನಡೆಯುತ್ತಿರುವ ಭಾಷಣ ಸ್ಪರ್ಧೆ,ಕ್ರೀಡೆ,ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಶಾರದಾ ಶಾಲೆಯ ಮಕ್ಕಳು ಮೊದಲ ಸ್ಥಾನ ಪಡೆಯುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಹೇಳಿದರು.

ಖ್ಯಾತ ಮಕ್ಕಳ ತಜ್ಞರಾದ ಡಾ.ದಿನಕರರಾವ ಮೋರೆ ಮಾತನಾಡಿ,ಮಕ್ಕಳು ಮಾನಸಿಕ, ದೈಹಿಕವಾಗಿ ಆರೋಗ್ಯವಂತರಾಗಿರಬೇಕಾದರೆ ನಿಯಮಿತ ನಿದ್ರೆ,ವ್ಯಾಯಾಮ,ಸಮತೋಲಿತ ಆಹಾರ ಸೇವನೆ ಮಾಡುವುದು ಅಗತ್ಯ ಎಂದರು.ಹೈದ್ರಾಬಾದನ ದತ್ತಗಿರಿ ಮಹಾರಾಜರು ಆಶೀರ್ವಚನ ನೀಡಿದರು.ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಸಂತರಾವ ಪಾಟಿಲ್ ಅಧ್ಯಕ್ಷತೆವಹಿಸಿ ಮಾತನಾಡಿದರು. ವೇದಿಕೆಯ ಮೇಲೆ ಪುರಸಭೆ ಉಪಾಧ್ಯಕ್ಷ ವಿಜಯಕುಮಾರ ರಾಜಭವನ,ಮುಖಂಡರಾದ ಶಿವು ಲೋಖಂಡೆ,ಜನಾರ್ಧನರಾವ ಬಿರಾದಾರ,ಆರ್.ಡಿ.ಬಿರಾದಾರ,ರಾವ 'ಸಾಹೇಬ ಬಿರಾದಾರ,ಜೈಕಿಶನ ಬಿಯಾಣಿ,ಡಾ.ಸುಧಾಕರ,ಶೇಖರ ವಂಕೆ,ಕಿರಣ ಡಾವರಗಾವೆ,ದಯಾನಂದ ಪವಾರ,ಯೋಗೇಶ ಉಮಾಜಿ,ಸಿಆರ್‌ಪಿ ಪ್ರಭು ಡಿಗ್ಗೆ,ಡಾ.ಗುಂಡೆರಾವ ಶೆಡೋಳೆ,ಗಣಪತಿ ಬೋಚರೆ,ಅಶೋಕ ರಾಜೋಳೆ,ವಿಜಯಕುಮಾರ ಪರ್ಮಾ,ದೀಪಕ ಥಮಕೆ, ಆಡಳಿತಾಧಿಕಾರಿ ಮಹಾದೇವ ಪಟ್ನೆ ಸೇರಿದಂತೆ ಅನೇಕರಿದ್ದರು.

ಮಕ್ಕಳಿಂದ ನಡೆದ ದೇಶಭಕ್ತಿ ನೃತ್ಯ ಎಲ್ಲರಿಗೆ ಆಕರ್ಷಿತವಾಗಿತ್ತು.ಪ್ರತಿಭಾ ಪಾಟೀಲ್ ಸ್ವಾಗತಿಸಿದರು.ಸಂತೋಷ ಕಾಮೆನೂರ ನಿರೂಪಿಸಿದರು. ಮುಖ್ಯಗುರು ಶಹನಾಜ ಬೇಗಂ ವಂದಿಸಿದರು.

# ಅಳಿಯುವ ಹೆಸರಿಗಿಂತ ಹೃದಯದಲ್ಲಿ ಉಳಿಯುವ ಹೆಸರಾಗಬೇಕು: ಶಿವಶಾಂತವೀರ ಶ್ರೀಗಳು




ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಸಮುದ್ರದ ಮರಳಿನಲ್ಲಿ ಬರೆವ ಹೆಸರು ಅಲೆಗಳು ಬಂದರೆ ಅಳಿಸಿ ಹೋಗುತ್ತದೆ. ಮರದಲ್ಲಿ ಬರೆದ ಹೆಸರು ಸ್ವಲ್ಪ ಕಾಲಕ್ಕೆ ಮರ ಬಿದ್ದು ಅಳಿಸಿ ಹೋಗುತ್ತದೆ. ರಾಜ ಮಹಾರಾಜರ ಕಾಲದಿಂದಲೂ ಶಾಸನಗಳಲ್ಲಿ ಕೆತ್ತಿದ ಹೆಸರು ಭೂಮಿಯಲ್ಲಿ ಹುದುಗಿ ಹೋಗಿವೆ. ಇನ್ನೂ ಉತ್ಖನನ ಮಾಡುತ್ತಲೇ ಇದ್ದೇವೆ. ಎಲ್ಲರಿಗೂ ಹೆಸರು ಮಾಡಬೇಕೆಂಬ ತುಡಿತ ಸಹಜ. ಆ ಹೆಸರು ಅಳಿಸಲಾಗದ ಹೆಸರಾಗಬೇಕಾದರೆ ಸಕಲರ ಹೃದಯದಲ್ಲಿ ಅಚ್ಚಳಿಯದೇ ಉಳಿಯುವ ಹೆಸರಾಗಿರಬೇಕು ಎಂದು ಬಿಸರಹಳ್ಳಿಯ ಶಾಖಾ ಗವಿಮಠದ ಪರಮ ಪೂಜ್ಯ ಶ್ರೀ ಶಿವಶಾಂತವೀರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ಕೊಪ್ಪಳ ಕರ್ನಾಟಕ ವಾರಿಯರ್ಸ್ ಕ್ರೀಡಾ ಹಾಗೂ ಸಾಂಸ್ಕೃತಿಕ ಸಂಘದಿಂದ ಆಯೋಜಿಸಿದ ಗವಿಶ್ರೀ ಟ್ರೋಫಿ ಕ್ರಿಕೆಟ್ ಟೂರ್ನಮೆಂಟ್ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ಕಾರ್ಯಕ್ರಮ ಎಂದ ಮೇಲೆ ಉದ್ಘಾಟನೆ ಇದ್ದೇ ಇರುತ್ತದೆ. ಉದ್ಘಾಟನೆ ಸಹಜವಾಗಿ ದೀಪ ಬೆಳಗುವ, ಸಸಿಗೆ ನೀರೆರೆಯುವ ಸಂಪ್ರದಾಯ ಎಲ್ಲೆಡೆ ಇದೆ. ಆದರೆ ಈ ಸಂಸ್ಥೆ ಬೇಸಿಗೆಯಲ್ಲಿ ಬಾಯಾರಿದ ಮೂಕ ಹಕ್ಕಿಗಳಿಗೆ ನೀರುಣಿಸಲು ಕಟ್ಟಿದ ಸಣ್ಣ ತೊಟ್ಟಿಗೆ ನೀರು ಹಾಕುವ ಮೂಲಕ ಕ್ರಿಕೆಟ್ ಪಂದ್ಯಾವಳಿ ಪ್ರಾರಂಭಿಸಿದ್ದು ಸಮಾಜಮುಖಿ ಕಾಳಜಿಗೆ ಹಿಡಿದ ಕನ್ನಡಿ ಎಂದು ಶ್ಲಾಘಿಸಿದರು. ಬದಲಾವಣೆ ಜಗದ ನಿಯಮ. ಸಕಾರಾತ್ಮಕವಾಗಿ ಬದಲಾಗಬೇಕು, ಬೆಳೆಯಬೇಕು, ಬೆಳಕಾಗಬೇಕು. ಗಂಡುಮಕ್ಕಳು ಹೆಣ್ಣುಮಕ್ಕಳ ಥರ, ಗಂಡು ಮಕ್ಕಳು ಹೆಣ್ಣು ಮಕ್ಕಳ ರೀತಿ ವೇಷಭೂಷಣ ಮಾಡಿಕೊಳ್ಳುವುದು ಯುವಜನತೆಯ ಇಂದಿನ ಫ್ಯಾಶನ್ ಆಗಿದೆ. ಹೆತ್ತವರ ಹಣದಲ್ಲಿ ಶೋಕಿ ಮಾಡುವವರಿಗಿಂತ ಹೆತ್ತವರನ್ನು ಶೋಕಸಾಗರದಿಂದ ದೂರ ಇಡುವವರೇ ನಿಜವಾದ ಯುವಜನತೆ ಎಂದು ಕಿವಿಮಾತು ಹೇಳಿದರು. ಆಟಕ್ಕೆ ನಿಯಮ ಇರುತ್ತದೆ. ಹಾಗೆಯೇ ಬದುಕಿಗೂ ನಿಮಯಗಳಿರುತ್ತವೆ. ಕ್ರಿಕೆಟ್‌ಗೆ ಅಂಪೈರ್ ಇರುವಂತೆ, ಭಗವಂತ ಮನುಷ್ಯನ ಬದುಕಿಗೆ ತೀರ್ಪುಗಾರ. ಭೂಮಿ ಎಂಬ ಕ್ರೀಡಾಂಗಣ–ಕ್ಕೆ ಭಗವಂತ ಎಂಬ ಅಂಪೈರ್, ಆಟಗಾರರು ಎಂಬಂತೆ ನಮ್ಮನ್ನು ಕಳಿಸುತ್ತಾನೆ.

ಆತನ ನಿರ್ಣಯದಂತೆ ಎಲ್ಲವೂ ನಡೆಯುತ್ತದೆ. ಸಿಕ್ಸ್, ಫೋರ್ ಕೊಡುವಾಗಲೂ ಆತನದ್ದೇ ತೀರ್ಪು. ಔಟ್ ಆದಾಗಲೂ ಆತನದ್ದೇ ನಿರ್ಣಯ ಎಂದು ಮಾರ್ಮಿಕವಾಗಿ ನುಡಿದರು.

ಭಾಗ್ಯನಗರದ ಶ್ರೀ ಶಂಕರಾಚಾರ್ಯ ಮಠದ ಪೂಜ್ಯರು ಆಶೀರ್ವಚನ ನೀಡಿದರು. ಸಮಾರಂಭದಲ್ಲಿ ರೆಡ್ ಕ್ರಾಸ್ ಸಂಸ್ಥೆಯ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ ಹ್ಯಾಟಿ, ಸಂಗೀತ ವಿದ್ವಾಂಸರು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶಂಕರ್ ಬಿನ್ನಾಳ, ಸಹಕಾರ ಉಪ ನಿಬಂಧಕರು ಹಾಗೂ ಸಂಘ–ಸಂಸ್ಥೆ ನೋಂದಣಾಧಿಕಾರಿ ರಮೇಶ ಬಗಲಿ, ಆಹಾರ ನಿರೀಕ್ಷಕ ಮಂಜುನಾಥ ಮ್ಯಾಗಳಮನಿ, ವಾಣಿಜ್ಯೋದ್ಯಮಿ ಗ್ಯಾನೇಶ್ ಹ್ಯಾಟಿ, ಸಂಜೀವಿನಿ ರಕ್ತ ಭಂಡಾರದ ಜಿಲಾನಿ, ಅಕ್ಷರ ದಾಸೋಹ ಅಧಿಕಾರಿ ಎಸ್.ಬಿ.ಕುರಿಯವರು ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಮಾರುತಿ ಮ್ಯಾಗಳಮನಿ ನಿರೂಪಿಸಿದರು. ಶಂಕರ ಬಿನ್ನಾಳ ಪ್ರಾರ್ಥಿಸಿದರು. ಬಸವರಾಜ ಕರುಗಲ್ ಪ್ರಾಸ್ತಾವಿಕ ಮಾತನಾಡಿದರು. ಈರಣ್ಣ ಪಗಡಾಲ ಅಧ್ಯಕ್ಷತೆ ವಹಿಸಿದ್ದರು. ಚಂದ್ರಕಾಂತ ದೇಶಪಾಂಡೆ ಸ್ವಾಗತಿಸಿದರು. ವಿನೋದ ಚೆನ್ನಿನಾಯ್ಕರ್ ವಂದಿಸಿದರು. ಈ ಸಂದರ್ಭದಲ್ಲಿ ಕ್ಲಬ್‌ನ ಹಿರಿಯರಾದ ಗಿರೀಶ ಮುಂದಡಾ, ಡಾ.ಸತೀಶ ಜಾಲಿಹಾಳ, ಶ್ರೀನಿವಾಸ ಗೋಂಧಳಿ, ಮೌನೇಶ ಅರಕಲ್,

ಅಮರೇಶ ಹುಬ್ಬಳ್ಳಿ, ಗೌರವಾಧ್ಯಕ್ಷ ಮಂಜುನಾಥ ಸ್ವಾಮಿ, ಉಪಾಧ್ಯಕ್ಷ ಶಿವಕುಮಾರ ನಾಲ್ವಾಡ್, ಪ್ರಧಾನ ಕಾರ್ಯದರ್ಶಿ ಲೋಕೇಶ್, ಖಜಾಂಚಿ ಚಿನ್ನು ಅಡ್ಡೇದಾರ್, ಸಿದ್ದು, ಸುರೇಶ, ಪುಲ್ಲಾರಡ್ಡಿ, ಮುರ್ತುಜಾ, ವಿರೇಶ್, ನಂಜುಂಡಿ ಮತ್ತಿತರರು ಇದ್ದರು.

## ಸಾಧಕರಿಗೆ ಸನ್ಮಾನ:

" ಯೋಗ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಜಿಲ್ಲೆಯ ರೇಷ್ಮಾ ವಡ್ಡಟ್ಟಿ, 46ನೇ ಜ್ಯುನಿಯರ್ ರಾಷ್ಟ್ರೀಯ ವಾಲಿಬಾಲ್ ಕ್ರೀಡೆಯಲ್ಲಿ ಸಾಧನೆ ಮಾಡಿರುವ 9ನೇ ತರಗತಿಯ ಮೋಹಮ್ಮದ್ ಶೇಖ್, 8ನೇ ತರಗತಿಯ ಕಾವೇರಿ, ಲತಾ, ರಾಜ್ಯಮಟ್ಟದ ಅಥ್ಲೇಟಿಕ್ಸ್‌ನ ವ್ಯಯಕ್ತಿಕ ವಿಭಾಗದಲ್ಲಿ ಸಾಧನೆ ಮಾಡಿರುವ ಭರತ್, ಶಂಕರ್, ಸುಷ್ಮಿತಾ, ಯಶವಂತ್, ದೀಕ್ಷಿತ್ ಹಾಗೂ ನಗರದ ಗಡಿಯಾರ ಕಂಬದ ಬಳಿ 10ರೂಪಾಯಿಯಲ್ಲೇ ಉಪಹಾರದ ಮೂಲಕ ಬಡವರ ಹಸಿವು ನೀಗಿಸುವ ರವಿ ಕನಕಗಿರಿಯವರನ್ನು ಗುರುತಿಸಿ ಕೊಪ್ಪಳ ಕರ್ನಾಟಕ ವಾರಿಯರ್ಸ್ ಕ್ರೀಡಾ ಹಾಗೂ ಸಾಂಸ್ಕೃತಿಕ ಸಂಸ್ಥೆ ಸನ್ಮಾನಿಸಿ, ಗೌರವಿಸಿತು.

# ಪ್ರಜಾಪ್ರಭುತ್ವಕ್ಕು, ಕಲಾಲೋಕಕ್ಕೂ ಮಾಲಿನ್ಯ : ತರಿಕೆರಿ



• **ಮಲ್ಲಮ್ಮ ನುಡಿವಾರ್ತೆ ಕೊಪ್ಪಳ**

ಒಂದು ಕಾಲಕ್ಕೆ ಗೋಡೆಗಳ ಮೇಲೆ ವಿಜಯನಗರದ ಉಕ್ಕು ನಮ್ಮ ಹಕ್ಕು ಎನ್ನುವ ಘೋಷಣೆಗಳನ್ನು ಕೇಳುತ್ತಿದ್ದೇವು. ಮೂರು ದಶಕಗಳಲ್ಲಿ ಎಂತಹ ನಾಟಕೀಯ ಬದಲಾವಣೆಗಳಾಗಿವೆ. ಯಾವ ಕಾರ್ಖಾನೆಗಳು ದೇವರಂತೆ ಬಂದು ನಮ್ಮನ್ನು ಉದ್ದರಿಸಬೇಕು ಎಂದು ಯೋಚಿಸಿದ್ದೆವೋ ಅವು ಈಗ ಶಾಪಗ್ರಸ್ತವಾಗಿವೆ. ಮಕ್ಕಳಿಗೆ ಸಿಗುತ್ತಿರುವುದು ದೂಳು ಮಲೀನ. ಸರಕಾರವನ್ನು ಜಗತ್ತನ್ನು ಆಳುತ್ತಿರುವುದು ಕಾರ್ಪೋರೇಟ್. ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು ಹಂಪಿ ವಿ.ವಿ. ನಿವೃತ್ತ ಪ್ರಾಧ್ಯಾಪಕರು ಮತ್ತು ಸಂಸ್ಕೃತಿ ಚಿಂತಕರು ಹಿರಿಯ ಸಂಶೋಧಕ ಚಿಂತಕ ಡಾ.ರಹಮತ್ ತರಿಕೆರಿ ಹೇಳಿದರು.

ನಗರದ ಗಾಣಿಗೇರ ಭವನದಲ್ಲಿ ತಿರುಳನ್ನಡ ಸಾಹಿತಿಗಳ ಸಹಕಾರ ಸಂಘ ನಿ.ಕೊಪ್ಪಳ, ಗಾಣದ ಕಣ್ಣಪ್ಪ ಪತ್ತಿನ ಸಹಕಾರ ಸಂಘ ನಿ.ಕೊಪ್ಪಳ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕೊಪ್ಪಳ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಪ್ರೊ ಕೋರಗಲ್ ವಿರೂಪಾಕ್ಷಪ್ಪನವರ ಎರಡು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಸಸಿಗೆ ನೀರು ಎರೆಯುವುದರ ಬದಲು ಸಸಿಯ ಮೇಲೆ ಕುಳಿತ ದೂಳನ್ನು ನೀರು ಹಾಕಿ ತೊಳೆಯುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಮಾಲಿನ್ಯ ಇದು ಗಾಳಿಗೆ ಸಂಬಂಧಿಸಿದ್ದಲ್ಲ ಇದು ಪ್ರಜಾಸತ್ತೆಯ ಮಾಲಿನ್ಯ ಇದು. ಯಾವುದೇ ಪುಸ್ತಕಗಳ ಬಿಡುಗಡೆ ಯ ಕಾರ್ಯಕ್ರಮದಲ್ಲಿ ಊರಿನ ಸಮಸ್ಯೆಯು ಅದರ ತಲೆಬರಹವಾಗಿ ಬಂದಿದ್ದು ಇದೆ ಮೊದಲು ಇರಬೇಕು.ಬರಹ ಎನ್ನುವುದು ಮದ್ಯಮ ವರ್ಗದವರ ವಿಲಾಸ ಅಲ್ಲ. ಜನರ ನೋವಿಗೆ ಮೀಡಿಯದಿದ್ದರೆ ಅದಕ್ಕೆ ಅರ್ಥವಿಲ್ಲ. ಕೊಪ್ಪಳ ನನ್ನನ್ನು ವೈಚಾರಿಕವಾಗಿ ಬೆಳೆಸಿದ ಕರ್ಮಭೂಮಿ. ಪುಸ್ತಕಗಳು ಬಹಳಷ್ಟಿವೆ. ಆದರೆ ವೈಚಾರಿಕ ಸ್ಪಷ್ಟತೆ ಮುಖ್ಯ. ಪ್ರಜಾಪ್ರಭುತ್ವಕ್ಕಷ್ಟೇ ಅಲ್ಲ ಇಂದಿನ ದಿನಗಳಲ್ಲಿ ಕಲಾಲೋಕಕ್ಕೂ ಮಾಲಿನ್ಯ ಆವರಿಸಿದೆ.

ಕೊಪ್ಪಳದ ಹಿರಿಯ ಬರಹಗಾರರು ಚಳುವಳಿಗಳ ಗೆಳೆಯರು ಎಲ್ಲರು. ಚಳುವಳಿ ಹೊಸಪೇಟೆ ಹಾಗೂ ಕೊಪ್ಪಳವನ್ನು ಬೆಸೆದಿದೆ. ವಿರುಪಾಕ್ಷಪ್ಪ ಕೊರಗಲ್ ಅವರ ಬರಹಗಳಲ್ಲಿ ಚಳುವಳಿಯ ಅಂತಃಸತ್ವವಿದೆ. ,ಸೋಗಿಲ್ಲದ ಭಾಷೆ ಅವರದು. ಕೇವಲ ಕೊಪ್ಪಳ ಅಷ್ಟೇ ಅಲ್ಲದೇ ನಿಪ್ಪಾಣಿ ಹಾಗೂ ಹಾವೇರಿಯ ಭಾಷೆ ಇದೆ. ಕಣ್ಣಿಗೆ ಕಟ್ಟುವಂತೆ ಬರೆಯುತ್ತಾರೆ. 86 ವರ್ಷದಲ್ಲೂ ಸೃಜನಶೀಲರಾಗಿ ಬರೆಯುತ್ತಿದ್ದಾರೆ. ಬೌದ್ಧಿಕ ಎಚ್ಚರವನ್ನು ಇಷ್ಟು ವರ್ಷ ಕಾದಿಟ್ಟುಕೊಂಡಿದ್ದಾರೆ. ಮನುಷ್ಯರು ಸ್ಥಾನ ಬಲದಿಂದ ಅಲ್ಲ ಸಹಜ ಮಾನವೀಯ ವರ್ತನೆಗಳಿಂದ ದೊಡ್ಡವರಾಗಿರುವವರ ಬಗ್ಗೆ ಬರಹವಿದೆ. ಅಂತಃಕರಣದ ಸಾಹಿತಿ ವಿರುಪಾಕ್ಷಪ್ಪ ಕೊರಗಲ್. ಮನುಷ್ಯತ್ವದ ವಿಶ್ವಕೋಶವನ್ನು ತಮ್ಮ ಪುಟ್ಟ ಕೃತಿಯಲ್ಲಿ ನೀಡಿದ್ದಾರೆ. ಎಲ್ಲರೊಳಗೂ ದೊಡ್ಡ ಚೈತನ್ಯವಿದೆ. ಆ ಚೈತನ್ಯವನ್ನು ಗುರುತಿಸುವ ಬರಹಗಾರ ಕೊರಗಲ್. ಇದು ಫಿಲಾಸಫಿ ಎಂದು ಹೇಳಿದರು.

ಇದಕ್ಕೂ ಮೊದಲು ರೇಷ್ಮೆ ಕೌದಿ (ವೈಚಾರಿಕ ಬರಹಗಳು) ಕುರಿತು ಹಿರಿಯ ಸಾಹಿತಿ ಎ.ಎಂ.ಮದರಿ ಮಾತನಾಡಿದರು. ವೈತರಣಿಯಲ್ಲಿ ಹೆಣ್ಣು (ಕಥಾ ಸಂಕಲನ) ಕುರಿತು ಶ್ರೀಮತಿ ಸಾವಿತ್ರಿ ಮುಜುಮದಾರ ಮಾತನಾಡಿದರು. ಅಧ್ಯಕ್ಷತೆಯನ್ನು ಪ್ರೊ ಅಲ್ಲಮಪ್ರಭು ಬೆಟ್ಟದೂರು ವಹಿಸಿಕೊಂಡಿದ್ದರು. ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹೆಚ್ ಎಸ್ ಪಾಟೀಲ್,ಹಿರಿಯ ಸಾಹಿತಿ ಡಾ.ಕೆ.ಬಿ.ಬ್ಯಾಳಿ, ಜಿಲ್ಲಾ ಗಾಣಿಗ ಸಮಾಜದ ಅಧ್ಯಕ್ಷ ತೋಟಪ್ಪ ಕಾಮನೂರ , ಕೊಪ್ಪಳ ವಿಶ್ವವಿದ್ಯಾಲಯ ಅತಿಥಿ ಉಪನ್ಯಾಸಕ ಡಾ ಪ್ರವೀಣ ಪೋಲೀಸ ಪಾಟೀಲ ಸಂಗನಗೌಡರು ಬಿ.ಟಿ ಪಾಟೀಲ ಅಧ್ಯಕ್ಷರು ಪಿ.ಎಲ್.ಡಿ.ಬ್ಯಾಂಕ ಕೊಪ್ಪಳ ಉಪಸ್ಥಿತರಿದ್ದರು. ಲೇಖಕ ವಿರುಪಾಕ್ಷಪ್ಪ ಕೊರಗಲ್ ತಮ್ಮ ಕೊಪ್ಪಳದ ಸಾಹಿತ್ಯ ಬಳಗದ ಬದುಕಿನ ಒಡನಾಟವನ್ನು ಆತ್ಮೀಯವಾಗಿ ಸ್ಮರಿಸಿಕೊಂಡರು.

ಸ್ವಾಗತವನ್ನು ಅರುಣಾ ನರೇಂದ್ರ ಹಾಗೂ ನಿರೂಪಣೆಯನ್ನು ನಿವೃತ್ತ ಉಪನ್ಯಾಸಕ ಶಂಭುಲಿಂಗಪ್ಪ ಹರಗೇರಿ ನೆರವೇರಿಸಿದರು.

ವಿರುಪಾಕ್ಷಪ್ಪ ಕೊರಗಲ್ ರ ಕುಟುಂಬಸ್ತರು, ಬರಹಗಾರರು, ಸಾಹಿತ್ಯ ಅಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಕಾಲೇಜ ಮಂಜೂರಾಗಲು ಶ್ರಮಿಸಿದ ಬೆಲ್ದಾಳೆ ಅವರಿಗೆ ಕನ್ನಡ ಸೇನೆಯಿಂದ ಅಭಿನಂದನೆ

• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ತಾಲೂಕಿನ ಮನ್ನಾಎಖ್ಖೇಳ್ಳಿ ಗ್ರಾಮದಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜು ಮಂಜೂರಾಗಬೇಕೆಂದು ಸುಮಾರು ವರ್ಷಗಳಿಂದ ಸತತವಾಗಿ ಕನ್ನಡ ಸೇನೆ ಹೋರಾಟ ಮಾಡಿಕೊಂಡು ಬಂದಿದೆ.

ಈ ನಮ್ಮ ಮನವಿಗೆ ಸ್ಪಂದಿಸಿ, ಬೀದರ್ ದಕ್ಷಿಣ ಕ್ಷೇತ್ರದ ಶಾಸಕ



ಡಾ. ಶೈಲೇಂದ್ರ ಬೆಲ್ದಾಳೆ ಅವರು ವಿಧಾನ ಸಭೆಯಲ್ಲಿ ಹಲವಾರು ಬಾರಿ ಧ್ವನಿ ಎತ್ತಿದ್ದ–ಕ್ಕೆ, ಮನ್ನಾಎಖ್ಖೇಳ್ಳಿ ಗ್ರಾಮದಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜು ಮಂಜೂರಾಗಿದಕ್ಕಾಗಿ ಕನ್ನಡ ಸೇನೆ ಕರ್ನಾಟಕ ಸಂಘಟನೆಯ ಪರವಾಗಿ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರಿಗೆ ಅಭಿನಂದನೆಗಳು ಸಲ್ಲಿಸುತ್ತೇವೆ ಎಂದು ಕನ್ನಡ ಸೇನೆ ಕರ್ನಾಟಕ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಡಾ. ರವಿ ಸ್ವಾಮಿ ನಿರ್ಣಾ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಂಜಾನ್ ಹಬ್ಬದ ಶಾಂತಿ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಸಿರುಗುಪ್ಪ**



ನಗರದ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪಾಧೀಕ್ಷಕ ಮಾಲತೇಶ್ ಕೂನಬೇವ ಅವರು ನೇತೃತ್ವದಲ್ಲಿ ರಂಜಾನ್ ಹಬ್ಬದ ಶಾಂತಿ ಸಭೆ ಜರುಗಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಡಿ.ಎಸ್.ಪಿ ಮಾಲತೇಶ್ ಕೂನಬೇವ ಅವರು ಹಬ್ಬವನ್ನು ಶಾಂತಿ ಸುವ್ಯವಸ್ಥೆಯಿಂದ ಆಚರಿಸಬೇಕು. ಆಚರಣೆ ಪೊಲೀಸ್ ಇಲಾಖೆಯಿಂದ ಭದ್ರತೆಯನ್ನು ಒದಗಿಸುತ್ತದೆ. ಯಾರೋ ಒಬ್ಬ ಅಥವಾ ಇಬ್ಬರು ಮಾಡುವ ಕಿಡಿಗೇಡಿತನಕ್ಕೆ ಕಿವಿಗೊಡದೆ ಸಂಬಂಧಿಸಿದ ಇಲಾಖೆ ಗಮನಕ್ಕೆ ತರಬೇಕು ಎಂದು ತಿಳಿಸಿದರು.

ಇದೇ ವೇಳೆ ಸಿಪಿಐ ಹನುಮಂತಪ್ಪ. ಪಿಎ□□□. ಪರಶುರಾಮ ಪೊಲೀಸ್ ಅಧಿಕಾರಿಗಳು,ಮುಸ್ಲಿಂ ಸಮುದಾಯದ ಮುಖಂಡರು ಇದ್ದರು.

# ಶ್ರೀ ಬನ್ನಮ್ಮ ದೇವಿಯ ರಥೋತ್ಸವ ಅದ್ದೂರಿ



ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ತಾಲೂಕಿನ ಬನ್ನಿಕುಪ್ಪೆ ಗ್ರಾಮದ ಗ್ರಾಮದೇವತೆ ಶ್ರೀ ಬನ್ನಮ್ಮ ದೇವಿಯ ದೊಡ್ಡ ರಥೋತ್ಸವ ಭಕ್ತಿಭಾವದಿಂದ ಹಾಗೂ ವಿಜೃಂಭಣೆಯಿಂದ ನೆರವೇರಿತು.

ಕಾರ್ಯಕ್ರಮಕ್ಕೆ ಉಕ್ಕಿನ ಕಂತೆ ಮಾದಳ್ಳಿ ಮಠದ ಶ್ರೀ ಸಾಂಬ ಸದಾಶಿವ ಸ್ವಾಮೀಜಿ ಆಶೀರ್ವಾದ ನೀಡಿದರು. ಹುಣಸೂರು ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಡಿ. ಹರೀಶ್ ಗೌಡ ಹಾಗೂ ಮಾಜಿ ಶಾಸಕ ಎಚ್.ಪಿ. ಮಂಜುನಾಥ್ ಅವರು ರಥೋತ್ಸವಕ್ಕೆ ಚಾಲನೆ ನೀಡಿದರು.ಈ ಸಂದರ್ಭದಲ್ಲಿ ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಡಿ.ಎಂ. ತ್ರಿವೇಣಿ ಅವರು ದೇವಿಗೆ ಹಣ್ಣು ಹಾಗೂ ಜವನ ಎಸೆದು ತಮ್ಮ ಹರಕೆಯನ್ನು ಸಲ್ಲಿಸಿದರು. 2028ರಲ್ಲಿ ಎಚ್.ಪಿ. ಮಂಜುನಾಥ್ ಅವರು ಕರ್ನಾಟಕ ಸರ್ಕಾರದಲ್ಲಿ ಮಂತ್ರಿಯಾಗಲಿ ಎಂದು ಪ್ರಾರ್ಥಿಸಿ ರಥವನ್ನು ಎಳೆಯುವ ಮೂಲಕ ತಮ್ಮ ಹರಕೆಯನ್ನು ತೀರಿಸಿದರು.ಭಕ್ತರು ಕೂಡ ತಮ್ಮ ತಮ್ಮ ಹರಕೆಗಳು ಈಡೇರಲಿ ಎಂದು ದೇವಿಯ ಮುಂದೆ ಭಕ್ತಿಪೂರ್ವಕವಾಗಿ ಪ್ರಾರ್ಥಿಸಿದರು.ಸುತ್ತಮುತ್ತಲಿನ ಹಳ್ಳಿಗಳ ಯಜಮಾನರು, ಗ್ರಾಮಸ್ಥರು, ಮುಖಂಡರು ಹಾಗೂ ಭಕ್ತಾದಿಗಳು ಸೇರಿದಂತೆ ಸಾವಿರಕ್ಕೂ ಹೆಚ್ಚು ಮಂದಿ ರಥೋತ್ಸವದಲ್ಲಿ ಭಾಗವಹಿಸಿದ್ದರು.

# ಶಾಲಾ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ



ಹುಣಸೂರು: ತಾಲೂಕಿನ ಬನ್ನಿಕುಪ್ಪೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಮಡಿಲು ಗ್ರಾಮೀಣಾಭಿವೃದ್ಧಿ ಮತ್ತು ಸೇವಾ ಸಂಸ್ಥೆಯ ವತಿಯಿಂದ ಸಮವಸ್ತ್ರಗಳನ್ನು ವಿತರಿಸಲಾಯಿತು.

ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ಮಡಿಲು ಗ್ರಾಮೀಣಾಭಿವೃದ್ಧಿ ಮತ್ತು ಸೇವಾ ಸಂಸ್ಥೆಯ ಅಧ್ಯ-ಕ್ಷೆ ಡಿ.ಎಂ. ತ್ರಿವೇಣಿ ಅವರು ವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡುವ ಕಾರ್ಯದಲ್ಲಿ ಇದು ಒಂದು ಅಳಿಲು ಸೇವೆಯಷ್ಟೇ. ಪೋಷಕರು ಹಾಗೂ ಮಕ್ಕಳ ಮುಖದಲ್ಲಿ ಒಂದು ಕಿರುನಗೆ ಮೂಡಿದರೆ ಅದೇ ನಮ್ಮ ಸೇವೆಯ ಸಾರ್ಥಕತೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಪ್ರಸನ್ನಕುಮಾರ್, ಶಾಲೆಯ ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು ಹಾಗೂ ಮಕ್ಕಳ ಪೋಷಕರು ಉಪಸ್ಥಿತರಿದ್ದರು.

# ಬಾವಿ ಸ್ವಚ್ಛಗೊಳಿಸಿ ಕರುನಾಡ ಕಲಿಗಳ ಕ್ರಿಯಾಶೀಲ ಸಮಿತಿ,ಯುವ ಘಟಕ ಒತ್ತಾಯ



ಮಲ್ಲಮ್ಮ ನುಡಿ ವಾರ್ತೆ ವಿಜಯನಗರ (ಹೊಸಪೇಟೆ)

ನಗರದ ತಳವಾರಕೇರಿ ರಾಂಪುರ ದುರ್ಗಾದೇವಿ ಗುಡಿ ಹತ್ತಿರ, 32ನೇ ವಾರ್ಡನಲ್ಲಿ ತುಂಬಾ ಹಳೆಯದಾದ ಬಾವಿಯನ್ನು ಸ್ವಚ್ಛಗೊಳಿಸಿ ಸಾರ್ವಜನಿಕ ಬಳಕೆಗೆ ಅವಕಾಶ ನೀಡಬೇಕೆಂದು ಕರುನಾಡ ಕಲಿಗಳ ಕ್ರಿಯಾಶೀಲ ಸಮಿತಿ,ಯುವ ಘಟಕ ಹೊಸಪೇಟೆ ನಗರಸಭೆ ಕಮಿಷನರ್ ಎರಗುಡಿ ಶಿವಕುಮಾರ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು. ನಿರ್ವಹಣೆ ಇಲ್ಲದೇ ಈ ಬಾವಿಯು ಸಂಪೂರ್ಣವಾಗಿ ಕಸಕಡ್ಡಿ, ಚರಂಡಿ ನೀರಿನಿಂದ ಸಂಪೂರ್ಣವಾಗಿ ಕಲುಷಿತವಾಗಿ ಸೊಳ್ಳೆಗಳ ಕಾಟ ಜಾಸ್ತಿಯಾಗಿ ಡೆಂಗ್ಯೂ, ಮಲೇರಿಯ, ಚಿಕನ್‌ಗುನ್ಯಾ ಇಂತಹ ರೋಗಗಳು ಹರಡುತ್ತಿವೆ. ತಡೆಗೋಡೆ ಸಹ ಶಿಥಿಲಗೊಂಡು ಬಿದ್ದಿರುತ್ತದೆ. ಇದರಿಂದ ಇದೇ ಬಾವಿಗೆ ಹಾನಿಯಾಗಿ ಮೇಲ್ಭಾಗವೂ ಸಹ ಕುಸಿಯುತ್ತಿದೆ. ಸಾಕಷ್ಟು ಬಾರಿ ಇಲ್ಲಿನ ವಾಸಿಸುವ ಜನರು, ಮನೆಗಳಿಗೆ ಹಾನಿಯಾಗುವತ್ತದೆಂದು ತಿಳಿಸಿದರೂ ಯಾವೊಬ್ಬ ಅಧಿಕಾರಿಯು ತಲೆ ಕೆಡಿಸಿಕೊಳ್ಳುತ್ತಿಲ್ಲ. ಈಗಿರುವ ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಬಾವಿಯ ಸುತ್ತಮುತ್ತಲಿನ ತಡೆಗೋಡೆ ಕುಸಿದು ಸುತ್ತಮುತ್ತಲಿನ ಮನೆಗಳಿಗೆ ಸಾಕಷ್ಟು ಹಾನಿಯಾಗುವ ಸಂಭವವಿರುತ್ತದೆ. ಕಾರಣ ತಾವುಗಳು ಖುದ್ದು ಸ್ಥಳ ಪರಿಶೀಲನೆ ಮಾಡಿ ಮುಂದೆ ಜರುಗಬೇಕಾಗಿರುವ ದೊಡ್ಡ ಅನಾಹುತ ತಪ್ಪಿಸಿ. ಬಾವಿಯಲ್ಲಿನ ಹೂಳನ್ನು ತೆಗೆಸಿ ಬಾವಿಯನ್ನು ದುರಸ್ತಿ ಮಾಡಿಸಿ ಸಾರ್ವಜನಿಕರಿಗೆ ನೀರಿನ ಬಳಕೆಗೆ ಅನುಕೂಲ ಮಾಡಿಕೊಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಪಿ ವೆಂಕಟೇಶ್, ಗುಜ್ಜಲ್ ಗಣೇಶ್, ಅಧ್ಯಕ್ಷರಾದ ತಳವಾರ ಮಂಜುನಾಥ, ಕೆ.ಯು.ರಾಘವೇಂದ್ರ, ಸುನಿಲ್ ಕುಮಾರ್, ಕೆ ಅನಿಲ್,ಕಮಟಗಿ ಪರುಶುರಾಮ್, ಮಂಜುನಾಥ್ ಲಕ್ಷ್ಮೇಶ್, ರಾಜು ನಾಯಕ್, ಉಪಸ್ಥಿತರಿದ್ದರು,

# ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಪಾಸ್ ಅಂಕಗಳನ್ನು 35ಕ್ಕೆ ನಿಗದಿಪಡಿಸಿ ; ಧನಂಜಯ

ಬಳ್ಳಾರಿ. : ರಾಜ್ಯ ಶಿಕ್ಷಣ ಇಲಾಖೆ ಜಾರಿಗೊಳಿಸಿರುವ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ತರಗತಿಯ ಉತ್ತೀರ್ಣ ಅಂಕಗಳನ್ನು 35ರಿಂದ 33ಕ್ಕೆ ನಿಗದಿಪಡಿಸಿದೆ ಇದರಿಂದ ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಗುಣಮಟ್ಟ ಕಳಪೆ ಮತ್ತು ಕಡಿಮೆಯಾಗುವ ಸಂಭವವಿದೆ ಮೊದಲಿದ್ದಂತೆ ಉತ್ತೀರ್ಣದ ಅಂಕಗಳನ್ನು 35 ಅಂಕಗಳನ್ನೇ ನಿಗದಿಗೊಳಿಸಬೇಕೆಂದು ಶಿಕ್ಷಣ ಪ್ರೇಮಿ ಸಾಹಿತಿ ಲೇಖಕ ಲೋಕಿಕೆರೆ ಧನಂಜಯ್ ಶಿಕ್ಷಣ ಇಲಾಖೆಯನ್ನು ಒತ್ತಾಯಿಸಿದರು.



ಅವರು ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ನಡೆಸಿ ಮಾತನಾಡಿ, ಈ ಹಿಂದೆ ಇದ್ದ ಪಾಸ್ ಅಂಕಗಳನ್ನು ಶಿಕ್ಷಣ ಇಲಾಖೆ 35 ರಿಂದ 33ಕ್ಕೆ ಇಳಿಸಿದ್ದರಿಂದ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಗುಣಮಟ್ಟವನ್ನು ಕಳೆದುಕೊಳ್ಳುವ ಅಪಾಯವಿದೆ ಆದ್ದರಿಂದ ಯಾವುದೇ ಕಾರಣಕ್ಕೂ ಮುತ್ತಿನದ ಅಂಕಗಳನ್ನು 33ಕ್ಕೆ ಇಳಿಸಬೇಡಿ ಎಂದರು.

ಅಷ್ಟೇ ಅಲ್ಲದೆ ಬಾಹ್ಯ ಅಂಕಗಳನ್ನು 80 ನಿಗದಿಗೊಳಿಸಿ ಆಂತರಿಕ ಅಂಕಗಳನ್ನು 20ಕ್ಕೆ ನಿಗದಿಗೊಳಿಸಿದ್ದಾರೆ ಆಂತರಿಕ ಅಂಕ ಎಲ್ಲಾ 20 ಅಂಕಗಳನ್ನು ಅನುಕೂಲವಿದ್ದ ವಿದ್ಯಾರ್ಥಿಗಳಿಗೆ ನೀಡಿದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಪಡೆದರೆ ಸಾಕು ಫಾಸ್ ಆಗುತ್ತಾನೆ, ಇದರಿಂದ ಅವನ ವಿದ್ಯಾಭ್ಯಾಸದ ಗುಣಮಟ್ಟ ಕಳಪೆಯಾಗುವ ಸಾಧ್ಯತೆ ಇರುತ್ತದೆ ಕಾರಣ ಮಧು ಬಂಗಾರಪ್ಪನವರು ಈ ಸುತ್ತೋಲೆಯನ್ನು ವಾಪಸ್ ಪಡೆದು ಮೊದಲಿದ್ದಂತೆ ಫಲಿತಾಂಶಕ್ಕೆ ಕನಿಷ್ಠ ಅಂಕ 35ನ್ನೆ ಮುಂದುವರಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸಿದರು.

# ಬಸವಣ್ಣ, ಅಕ್ಕಮಹಾದೇವಿಗೆ ಅವಮಾನ ಖಂಡಿಸಿ ದೂರು

ಬಳ್ಳಾರಿ, : ಫೇಸ್ಬುಕ್ ಸಾಮಾಜಿಕ ಜಾಲತಾಣಗಳಲ್ಲಿ ಎಂ.ರಮಾಕಾಂತ್ ಎನ್ನುವ ವ್ಯಕ್ತಿ ಜಗಜ್ಯೋತಿ ವಿಶ್ವಗುರು ಬಸವಣ್ಣನವರ ಬಗ್ಗೆ ಮತ್ತು ಅಕ್ಕಮಹಾದೇವಿ ಬಗ್ಗೆ ಅತ್ಯಂತ ಅಶ್ಲೀಲವಾಗಿ ಹೀಯಾಳಿಸಿ, ಚರಿತ್ರೆಗೆ ದ್ರೋಹ ಮಾಡುವವರ ವಿರುದ್ಧ ಅತ್ಯಂತ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸಿರಿಗೇರಿ ಪನ್ನಾರಾಜ್ ಹಾಗೂ ಬಳ್ಳಾರಿಯ ಬಸವಭಕ್ತರು ಸೇರಿ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ.



ಬಳ್ಳಾರಿಯ ಸೈಬರ್ ಕ್ರೈಂ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್ಪೆಕ್ಟರ್ ಕೆ. ಶ್ರೀನಿವಾಸ್ ಇವರಿಗೆ ಸಲ್ಲಿಸಿದ ದೂರಿನ ಅನ್ವಯ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿರುತ್ತಾರೆ. ಈ ಸಮಯದಲ್ಲಿ ಎಸ್. ಪನ್ನರಾಜ್ ಜೊತೆ ಸಂಗನಕಲ್ ವಿಜಯ್ ಕುಮಾರ್, ರವಿಕುಮಾರ್,ಎಚ್. ಕೆ, ಮಲ್ಲಿಕಾರ್ಜುನ, ಚಂದ್ರಶೇಖರ ಆಚಾರಿ,ಕಲಾವತಿ,ದುರ್ಗಣ್ಣ,ಕಟ್ಟೆಗೌಡ; ಪಾಲಾಕ್ಷಗೌಡ, ಚಂದ್ರಶೇಖರಯ್ಯ ಸ್ವಾಮಿ, ಹಾಗೂ ಇತರರು ಇದ್ದರು.

# ಮಾ.18ರಂದು ಬಳ್ಳಾರಿಯಲ್ಲಿ 'ನಶಾ ಮುಕ್ತ ಭಾರತ : ಯುವ ಶುದ್ಧ ಅಭಿಯಾನ' ವಾಕಥಾನ್



ಬಳ್ಳಾರಿ, : ನಶಾ ಮುಕ್ತ ಭಾರತ ಅಭಿಯಾನದ ಅಂಗವಾಗಿ "ಯುವ ಶುದ್ಧ ಅಭಿಯಾನ ವಾಕಥಾನ್" ಕಾರ್ಯಕ್ರಮವನ್ನು ಮಾರ್ಚ್ 18ರಂದು ಬಳ್ಳಾರಿಯಲ್ಲಿ ಆಯೋಜಿಸಲಾಗುತ್ತಿದೆ ಎಂದು ರಾಜಶೇಖರ್ ಗಾಣಿಗೇರಿ ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಪತ್ರಿಕಾ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹೋಟ್ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು, ಯುವಜನರಲ್ಲಿ ಮಾದಕ ದ್ರವ್ಯ ವಿರೋಧಿ ಜಾಗೃತಿ ಮೂಡಿಸುವ ಉದ್ದೇಶದಿಂದ ವಿದ್ಯಾರ್ಥಿಗಳ ಮಹಾ ವಾಕಥಾನ್ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ (ಖಉಗಊಖ) ಸಂಯೋಜಿತ ಕಾಲೇಜುಗಳು, ದಿಶಾಬೋಧ ಸುಸ್ಥಿರ ಸಮುದಾಯ ಅಭಿವೃದ್ಧಿ ಪ್ರತಿಷ್ಠಾನ ಹಾಗೂ ಭಾರತ ಸರ್ಕಾರದ ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ (NCB) ಸಹಯೋಗದಲ್ಲಿ ಕಾರ್ಯಕ್ರಮ ನಡೆಯಲಿದೆ. ಖಉಗಊಖ ಉಪಕುಲಪತಿ ಡಾ. ಭಗವಾನ್ ಬಿ.ಸಿ ಅವರ ಮಾರ್ಗದರ್ಶನದಲ್ಲಿ ಹಾಗೂ ಎನ್‌ಸಿಬಿ ವಲಯ ನಿರ್ದೇಶಕ ಸಚಿನ್ ಗೋರ್ಪಡೆ, ಐಪಿಎಸ್ ಅವರ ಬೆಂಬಲದಲ್ಲಿ ಅಭಿಯಾನ ಜಾರಿಯಲ್ಲಿದೆ ಎಂದು ತಿಳಿಸಿದರು. ರಾಜ್ಯಾದ್ಯಂತ ಈಗಾಗಲೇ 13 ಜಿಲ್ಲೆಗಳಲ್ಲಿ 15 ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, ಸುಮಾರು 77 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿದ್ದಾರೆ. ಅಂಗಾಂಗ ದಾನ ಜಾಗೃತಿ ಅಭಿಯಾನವೂ ಇದರ ಭಾಗವಾಗಿದ್ದು, 10 ಸಾವಿರಕ್ಕೂ ಹೆಚ್ಚು ಮಂದಿ ಅಂಗದಾನಕ್ಕೆ ಪ್ರತಿಜ್ಞೆ ಮಾಡಿದ್ದಾರೆ ಎಂದು ಹೇಳಿದರು.

ಮಾದಕ ದ್ರವ್ಯ ರಹಿತ, ಒತ್ತಡರಹಿತ ಹಾಗೂ ಆತ್ಮಹತ್ಯೆ ರಹಿತ ಕ್ಯಾಂಪಸ್ ನಿರ್ಮಾಣ, ವಿದ್ಯಾರ್ಥಿನಿಯರ ಸುರಕ್ಷತೆ ಮತ್ತು ಯುವಜನರಲ್ಲಿ ಸಾಮಾಜಿಕ ಜವಾಬ್ದಾರಿ ಬೆಳೆಸುವುದು ಅಭಿಯಾನದ ಪ್ರಮುಖ ಉದ್ದೇಶಗಳಾಗಿವೆ.

**ಕಾರ್ಯಕ್ರಮದ ವಿವರಗಳು:**

ಮಾರ್ಚ್ 18ರಂದು ಬೆಳಿಗ್ಗೆ 7.30ಕ್ಕೆ ವಿಜಯನಗರ ಮೆಡಿಕಲ್ ಕಾಲೇಜು (ವಿಮ್ಸ್) ಕ್ರೀಡಾಂಗಣದಲ್ಲಿ ವಾಕಥಾನ್ ಆರಂಭವಾಗಲಿದೆ.

ಈ ಜಾಗೃತಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆಗಳು, ಯುವ ಸಂಘಟನೆಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಸಂಘಟಕರು ಕರೆ ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಯೋಗಾನಂದ ರೆಡ್ಡಿ, ಷಡ್ರಕ್ ಮಂಜುನಾಥ್, ಭಾರತೀ, ಅನ್ನಪೂರ್ಣ ಹಾಗೂ ಸೋಮಶೇಖರ್ ಚವೆಲತಿ ಉಪಸ್ಥಿತರಿದ್ದರು.

# ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಜಿ.ಪಂ ಸಿಇಓ ಅಭಿಮತ

# ಕ್ರೀಡೆಯೆಂಬುದು ಸ್ಪರ್ಧೆಯಲ್ಲ,ಆರೋಗ್ಯ ಕಾಪಾಡುವ ಅಸ್ತ್ರ

ಮಲ್ಲಮ್ಮನುಡಿವಾರ್ತೆ ವಿಜಯನಗರ (ಹೊಸಪೇಟೆ)

ಕ್ರೀಡೆಯೆಂದರೆ ಕೇವಲ ಸ್ಪರ್ಧೆಯಲ್ಲ, ಅದು ಆರೋಗ್ಯವನ್ನು ಕಾಪಾಡುವ ಒಂದು ಅಸ್ತ್ರವಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಕಾಧಿಕಾರಿ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಪಂಚಾಯತ್,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಸೋಮವಾರ ಜಿಲ್ಲೆಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಿಬ್ಬಂದಿಗಳಿಗೆ ಏರ್ಪಡಿಸಿದ ವಾರ್ಷಿಕ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೈನಂದಿನ ಕೆಲಸದ ಒತ್ತಡದಲ್ಲಿ ಕ್ರೀಡೆಯು ದೈಹಿಕ ಮತ್ತು ಮಾನಸಿಕ ಸದೃಢತೆಗೆ ಸಹಕಾರಿಯಾಗಿದೆ. ಆರೋಗ್ಯವಂತ ದೇಹದಲ್ಲಿ ಆರೋಗ್ಯಯುತವಾದ ಮನಸ್ಸು ನೆಲೆಸಿರುತ್ತದೆ ಎಂಬ ನಾಣ್ನುಡಿಯಂತೆ ಸಿಬ್ಬಂದಿ ಸಹ ಸದೃಢವಾಗಿದ್ದಾಗ ಮಾತ್ರ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡಲು ಸಾಧ್ಯ. ಕ್ರೀಡೆಯೆಂಬುವುದು ಸ್ಪೂರ್ತಿ, ಶಿಸ್ತು ಮತ್ತು ಆರೋಗ್ಯಕರ ಸ್ಪರ್ಧೆಯನ್ನು ತೋರಿಸುವ ಒಂದು ಉತ್ತಮ ವೇದಿಕೆಯಾಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ ಮಾತನಾಡಿ, ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ದಿನನಿತ್ಯ ಕೆಲಸದ ಒತ್ತಡದಲ್ಲಿ ದೈಹಿಕವಾಗಿ ಕುಗ್ಗಿರುತ್ತಾರೆ. ಕೆಲಸದ ಒತ್ತಡ ನಿವಾರಣೆ ಮಾಡುವ ನಿಟ್ಟಿನಲ್ಲಿ ಕ್ರೀಡೆ ಸಹಕಾರಿಯಾಗುವುದಲ್ಲದೇ ಪರಸ್ಪರ ಭಾಂದವ್ಯ ವೃದ್ಧಿಸುತ್ತದೆ. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ವಿವಿಧ ಇಲಾಖೆಗಳ ಸಹಯೋಗದಲ್ಲಿ ಬೃಹತ್ ಮಟ್ಟದಲ್ಲಿ ವಾರ್ಷಿಕ ಕ್ರೀಡಾಕೂಟ ಆಯೋಜಿಸಲಾಗುವುದು ಎಂದರು.

ಜಿಲ್ಲಾಪಂಚಾಯತ್ ಉಪಕಾರ್ಯದರ್ಶಿ ಕೆ.ತಿಮ್ಮಪ್ಪ ಪ್ರತಿಜ್ಞಾವಿಧಿ ಬೋಧಿಸಿದರು.

ಇದೇ ಸಂದರ್ಭದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಗ್ರಾಮೀಣಾಭಿವೃದ್ಧಿ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಜಿಲ್ಲಾ ಪಂಚಾಯತ್ ಸಿಇಓ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ ಚಾಲನೆ ನೀಡಿದರು.



ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್. ಜಾಹ್ನವಿ, ಮುಖ್ಯ ಯೋಜನಾಧಿಕಾರಿ ಜೆ.ಎಂ. ಅನ್ನದಾನಸ್ವಾಮಿ, ಲೆಕ್ಕಾಧಿಕಾರಿ ರುದ್ರಪ್ಪ ಅಕ್ಕಿ, ತಾಲ್ಲೂಕು ಪಂಚಾಯತಿ ಮುಖ್ಯ ಕಾರ್ಯನಿರ್ವಹಕಾಧಿಕಾರಿ ಆಲಂ ಬಾಷಾ ಸೇರಿದಂತೆ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ಸೇರಿದಂತೆ ಪಿ.ಆರ್.ಇ.ಡಿ, ಕೆ.ಆರ್.ಐ.ಡಿ.ಎಲ್ ಮತ್ತು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಇದ್ದರು.

# ಸ್ವಾತಂತ್ರ್ಯ ಹೋರಾಟ, ನಾಯಕರ ಬಗ್ಗೆ ಯುವಕರು ಅರಿಯಬೇಕು: ಮಠಪತಿ



• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ

ಸಂವಿಧಾನ ರಚಿಸುವ ಮೂಲಕ 'ಎಲ್ಲವರ್ಗದವರಿಗೆನ್ಯಾಯ,ಸಮಾತನೆ ಒದಗಿಸಿದ ಶ್ರೇಯಸ್ಸು' ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಅಧೀಕ್ಷಕರಾದ ಈರಪ್ಪ ಮಠಪತಿ ತಾಲ್ಲೂಕಿನ ಘಾಟಬೋರಳ್ ಗ್ರಾಮಪಂಚಾಯತ್ ಆವರಣದಲ್ಲಿ ಗ್ರಾಮ ಸಮಾಜ ಕಲ್ಯಾಣ ಇಲಾಖೆ ಹಾಗೂ ಸಹರಾ ರೂರಲ್ ಡೆವಲಪ್ಮೆಂಟ್ ಅ್ಯಂಡ್ ಎಜುಕೇಷನ್ ಸೊಸೈಟಿ (ರಿ) ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಕೋಮು ಸೌಹಾರ್ದತೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಮಾತನಾಡತ್ತಾನುಡಿದರು. ಹಕ್ಕು ಹಾಗೂ ಕರ್ತವ್ಯಗಳಿಗೆ ಸಂವಿಧಾನದಲ್ಲಿ ವಿಶೇಷ ಮಹತ್ವ ನೀಡಲಾಗಿದ್ದು, ಕಾನೂನು ಪಾಲನೆಯಿಂದ ಮಾತ್ರ ಉತ್ತಮ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಭಾರತದ ಸಾಮಾಜಿಕ ಸಮಾನತೆಯ ಹರಿಕಾರ. ಸಾಮಾಜಿಕವಾಗಿ ಬಹಿಷ್ಕಾರಕ್ಕೆ ಒಳಗಾದ ದೀನ ದಲಿತರ ಏಳಿಗೆಗೆ ತಮ್ಮ ಜೀವನವನ್ನೆ ಮುಡುಪಾಗಿಟ್ಟರು. ಅವರ ಆದರ್ಶಗಳು ಎಲ್ಲ ವರ್ಗದ ಜನರಿಗೂ ಮಾದರಿಯಾಗಿವೆ. ಶಿಕ್ಷಣ, ಸಂಘಟನೆ, ಹೋರಾಟಗಳೇ ಅಂಬೇಡ್ಕರ್ ಅವರ ಜೀವನದ ಮೂಲತತ್ವಗಳಾಗಿದ್ದವು. ತಮ್ಮ ವೆಯಕ್ತಿಕ ಬದುಕನ್ನು ಲೆಕ್ಕಿಸದೇ ದೇಶದ ಹಾಗೂ ಜನರ ಒಳಿತಿಗಾಗಿ ಸಂವಿಧಾನ ರಚಿಸಿ ಕೊಟ್ಟಿದ್ದಾರೆ. ಮನುಷ್ಯರನ್ನು ಪ್ರಾಣಿ ಪಕ್ಷಿಗಳಿಗಿಂತ ಕೀಳಾಗಿ ಕಾಣುತ್ತಿದ್ದ ಹಿಂದೂ ಧರ್ಮದಲ್ಲಿನ ಸಾಮಾಜಿಕ ವ್ಯವಸ್ಥೆ ಬಗೆಗೆ ಅವರಿಗಿದ್ದ ಅಸಮಾಧಾನಕ್ಕೆ ಬುದ್ಧನ ವಿಚಾರಗಳು ಅವರನ್ನು ಸೆಳೆದವು. ಮಾನವಿಯತೆ, ಅಂತಃ-ಕರಣ ಹೊಂದಿದ ಬೌದ್ಧಧರ್ಮಕ್ಕೆ ಮತಾಂತರ ಹೊಂದಿದರು ಎಂದು ತಿಳಿಸಿದರು. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಜೀವನದಲ್ಲಿ ಅನುಭವಿಸಿದ ನೋವು ಮತ್ತು ಹೋರಾಟದ ಫಲವಾಗಿ ಇಂದು ನಮಗೆ ಉತ್ತಮ ಬದುಕು ಹಾಗೂ ಸಂವಿಧಾನಾತ್ಮಕ ಹಕ್ಕುಗಳು ದೊರೆತಿವೆ. ಅವರ ವಿಚಾರಧಾರೆಗಳನ್ನು ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು ಎಂದು ಮಠಪತಿ ತಿಳಿಸಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಕಡಿಮೆಯಾಗಬೇಕು ಹಾಗೂ ದೌರ್ಜನ್ಯಕ್ಕೆ ಒಳಗಾದವರಿಗೆ ನ್ಯಾಯ ದೊರೆಯಬೇಕು ಎಂದರು. ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ಮಹಾನ್ ನಾಯಕರು, ಹೋರಾಟಗಾರರು ತ್ಯಾಗ, ಬಲಿದಾನ ಗೆದಿದ್ದಾರೆ. ದೇಶದ ಸ್ವಾತಂತ್ರ್ಯ ಹೋರಾಟ, ನಾಯಕರ ಬಗ್ಗೆ ಯುವಕರು ಅರಿತುಕೊಳ್ಳಬೇಕು. ದೇಶಭಕ್ತಿ ಬೆಳೆಸಿಕೊಂಡು ದೇಶದ ಪ್ರಗತಿಗೆ ಯುವಕರು ಮುಂದಾಗಬೇಕು ಎಂದರು. ಸಹರಾ ಸಂಸ್ಥೆಯ ಅಧ್ಯಕ್ಷೆ ಪ್ರಸ್ತಾವಿಕವಾಗಿ ಕವಿತಾ ಮಚಕೂರೆ ಮಾತನಾಡಿ, ದೇಶದಲ್ಲಿ ಬಸವಣ್ಣ, ಬುದ್ಧನ ನಂತರ ಸಮಾನತೆಗಾಗಿ ಹೋರಾಡಿದವರು ಬಾಬಾ ಸಾಹೇಬ್ ಅಂಬೇಡ್ಕರ್ ಅವರು.

ಜಗತ್ತಿನಲ್ಲಿಯೇ ಶ್ರೇಷ್ಠ ಲಿಖಿತ ಸಂವಿಧಾನ ನೀಡಿದ್ದಾರೆ, ಅವರು ತಮ್ಮ ಬದುಕನ್ನು ಸಾಮಾಜಿಕ ಹೋರಾಟದಲ್ಲಿ ಹಾಗೂ ಸಮಾಜದ ಪರಿವರ್ತನೆಗಾಗಿ ತೊಡಗಿಸಿಕೊಂಡರು. ಅಂಬೇಡ್ಕರ್ ಅವರು ಈ ದೇಶಕ್ಕೆ ಹಾಗೂ ನಮ್ಮ ಸಾಮಾಜಿಕ ಬದುಕಿಗೆ ಅಗತ್ಯವಾದಂತಹ ಸಂವಿಧಾನವನ್ನು ಕೊಟ್ಟಿದ್ದಾರೆ. ಜಗತ್ತಿನಲ್ಲಿಯೇ ಶ್ರೇಷ್ಠ ಲಿಖಿತ ಸಂವಿಧಾನವೆಂದು ನಮ್ಮ ಸಂವಿಧಾನ ಖ್ಯಾತಿ ಪಡೆದಿದೆ . ಸಂವಿಧಾನದ ಶ್ರೇಷ್ಠತೆ ತಿಳಿಯಬೇಕಾದರೆ ಒಳ್ಳೆಯವರ ಕೈಯಲ್ಲಿ ಅನುಷ್ಠಾನವಾಗಬೇಕು. ಕೆಟ್ಟವರ ಕೈಗೆ ಹೋದರೆ ಕೆ-ಟ್ಟದಾಗುತ್ತದೆ ಎಂದು ಅಂಬೇಡ್ಕರ್ ಅವರು ಸ್ಪಷ್ಟವಾಗಿ ಈ ದೇಶದ ಜನರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದರು ಎಂದರು. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರಘುನಾಥ ರವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ರಘುನಾಥ ಅಧಿಕ್ಷಕರು ಸ. ಕ. ಇ., ವಿಠಲರಾವ್ ಗಾಯಕವಾಡ ಉಪನ್ಯಾಸ ನೀಡಿದರು. ಶಾರದಾ ಪದವಿ ಮಹಾವಿದ್ಯಾಲಯ, ರಂಜಿತ ಮನಕಾರೆ ಮುಖ್ಯ ಗುರುಗಳು ಪ್ರಕಾಶ ವಿದ್ಯಾಲಯ ಪ್ರಾಥಮಿಕ ಶಾಲೆ. ಹಾಗೂ ಶಾಲೆ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದರು.

# ಗ್ಯಾಸ್ ಸಿಲಿಂಡರ್ ವಿತರಣೆ ತಡ: ಸರ್ವರ್ ಸಮಸ್ಯೆ ಕಾರಣ

ಮಲ್ಲಮ್ಮ ನುಡಿ ವಾರ್ತೆ

ಹುಣಸೂರು: ಮನೆಗಳಿಗೆ ಬರುವ ಗ್ಯಾಸ್ ಸಿಲಿಂಡರ್‌ಗಳು ಸರಿಯಾದ ಸಮಯಕ್ಕೆ ತಲುಪದೆ ಗ್ರಾಹಕರು ಬೇಸರಗೊಳ್ಳುತ್ತಿರುವ ಬಗ್ಗೆ ಆತಂಕಪಡಬೇಕಾಗಿಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ನಿವಾಸಿಗಳು ಗ್ಯಾಸ್ ಸಿಲಿಂಡರ್‌ಗಳನ್ನು ಬುಕ್ ಮಾಡಿದ ನಂತರ ಕೆಲವು ದಿನಗಳಿಂದ ವಿತರಣೆ ಆಗದೆ ಇರುವ ಕುರಿತು ದೂರು ನೀಡಿದ್ದರು. ಇದರಿಂದಾಗಿ ಗ್ಯಾಸ್ ಏಜೆನ್ಸಿಯ ಸಿಬ್ಬಂದಿಗಳು ಮನೆಮನೆಗೆ ಭೇಟಿ ನೀಡಿ ಈಗಾಗಲೇ ಬುಕ್ ಆಗಿರುವ ಸಿಲಿಂಡರ್‌ಗಳನ್ನು ವಿತರಿಸುವ ಕಾರ್ಯವನ್ನು ಕೈಗೊಂಡಿದ್ದಾರೆ ಎಂದು ತಿಳಿಸಿದರು.




ಇತ್ತೀಚೆಗೆ ಮೊಬೈಲ್ ಫೋನ್ ಮೂಲಕ ಬುಕ್ ಮಾಡುವಲ್ಲಿ ಕೆಲ ಗ್ರಾಹಕರಿಗೆ ತೊಂದರೆ ಉಂಟಾಗಿ, ಗ್ಯಾಸ್ ಏಜೆನ್ಸಿಯಲ್ಲಿ ಬುಕ್ಕಿಂಗ್ ಆಗುತ್ತಿಲ್ಲ ಎಂಬ ದೂರುಗಳು ಬಂದಿದ್ದವು. ಆದರೆ ಇದು ಸಾಫ್ಟ್‌ವೇರ್ ದೋಷದಿಂದ ಉಂಟಾದ ತಾತ್ಕಾಲಿಕ ಸಮಸ್ಯೆಯಾಗಿದ್ದು, ಇನ್ನು ಮುಂದೆ ಈ ರೀತಿಯ ತೊಂದರೆ ಆಗುವುದಿಲ್ಲ ಎಂದು ಅವರು ಹೇಳಿದರು. ಹಿಂದಿನಂತೆ ಗ್ರಾಹಕರಿಗೆ ಗ್ಯಾಸ್ ಸಿಲಿಂಡರ್‌ಗಳು ಸಮಯಕ್ಕೆ ತಲುಪುವಂತೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಭರವಸೆ ನೀಡಿದರು.

ಇಂಡಿಯನ್ ಗ್ಯಾಸ್ ಉಸ್ತುವಾರಿ ಕರ್ತವ್ಯ ನಿರ್ವಹಿಸುತ್ತಿರುವ ಇಂತಿಯಾಜ್ ಅಹ್ಮದ್ ಸುದ್ದಿಗಾರರೊಂದಿಗೆ ಮಾತನಾಡಿ, ಸಿಲಿಂಡರ್ ವಿತರಣೆಯಲ್ಲಿ ಸ್ವಲ್ಪ ತಡವಾಗಿರುವುದು ಸತ್ಯ. ಆದರೆ ಎಲ್ಲ ಗ್ರಾಹಕರಿಗೂ ಸಿಲಿಂಡರ್ ತಲುಪಿಸಲು ಕ್ರಮ ಕೈಗೊಳ್ಳಲಾಗಿದೆ. ಸರ್ವರ್ ಸಮಸ್ಯೆಯಿಂದ ಸ್ವಲ್ಪ ವಿಳಂಬವಾಗಿದೆ. ಬುಕ್ಕಿಂಗ್ ಆದ ತಕ್ಷಣವೇ ಸಿಲಿಂಡರ್‌ಗಳನ್ನು ವಾಹನಗಳಲ್ಲಿ ಲೋಡ್ ಮಾಡಿ ಗ್ರಾಹಕರ ಮನೆಗಳಿಗೆ ತಲುಪಿಸುವ ಜವಾಬ್ದಾರಿಯನ್ನು ನಾವು ಸಮರ್ಪಕವಾಗಿ ನಿರ್ವಹಿಸುತ್ತಿದ್ದೇವೆ ಎಂದು ಹೇಳಿದರು.

ಈ ಸಮಸ್ಯೆ ನಮ್ಮ ಏಜೆನ್ಸಿಗೆ ಮಾತ್ರ ಸೀಮಿತವಾಗಿಲ್ಲ. ಬೇರೆ ಕಡೆಗಳಲ್ಲಿಯೂ ಸರ್ವರ್ ಹಾಗೂ ಬುಕ್ಕಿಂಗ್ ಸಮಸ್ಯೆಗಳು ಕಂಡುಬಂದಿವೆ. ಆದ್ದರಿಂದ ಗ್ರಾಹಕರು ಬುಕ್ ಮಾಡಿದ ನಂತರವೇ ತಕ್ಷಣ ಮನೆಗಳಿಗೆ ಸಿಲಿಂಡರ್ ತಲುಪಿಸುವ ಕಾರ್ಯವನ್ನು ಸಿಬ್ಬಂದಿಗಳು ತುರ್ತಾಗಿ ಕೈಗೆತ್ತಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಸರ್ವರ್ ಸಮಸ್ಯೆ ಪರಿಹಾರವಾಗಲಿದೆ ಎಂದು ಗ್ರಾಹಕರಿಗೆ ಭರವಸೆ ನೀಡಿದರು.

# ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಅನಿಲ್ ಆಯ್ಕೆ



• ಮಲ್ಲಮ್ಮ ನುಡಿ ವಾರ್ತೆ ಚಿಕ್ಕಮಗಳೂರು

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ 2025-2028 ರ ಸಾಲಿನ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ರಾಜ್ಯ ಚುನಾವಣೆ ನಡೆದ ಸಂಧರ್ಭದಲ್ಲಿ ರಾಜ್ಯಕಾರ್ಯಕಾರಿ ಹಾಗೂ ಜಿಲ್ಲಾ ಉಪಾಧ್ಯಕ್ಷರಾಗಿ ಒಂದು ಹುದ್ದೆ ಅವಿರೋಧವಾಗಿ ಆಯ್ಕೆಯಾಗಿತ್ತು. ಉಳಿದ ಪದಾಧಿಕಾರಿಗಳ ಹುದ್ದೆಗೆ ಕೆಲ ನಾಮಪತ್ರ ತಿರಸ್ಕೃತವಾಗಿದ್ದರೆ, ಹಲವು ಹುದ್ದೆಗಳಿಗೆ ನಾಮಪತ್ರ ಸಲ್ಲಿಕೆಯಾಗಿರಲಿಲ್ಲ.

ಈ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ಪತ್ರಕರ್ತರ ಸಭೆ ನಡೆಸಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಜವಬ್ದಾರಿಯನ್ನು ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಮತ್ತು ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ, ಕೆಯುಡಬ್ಲ್ಯೂಜೆ ರಾಜ್ಯ ಉಪಾಧ್ಯಕ್ಷರಾದ ಎಚ್.ಬಿ.ಮದನಗೌಡ ಅವರಿಗೆ ನೀಡಿ, ಕೆಯುಡಬ್ಲ್ಯೂಜೆ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಗಿತ್ತು.

ಮುಖ್ಯಚುನಾವಣಾಧಿಕಾರಿ ರವಿಕುಮಾರ್ ಟೆಲೆಕ್ಸ್ ಅವರ ಸಲಹೆಯನ್ನು ಪಡೆದುಕೊಳ್ಳಲಾಗಿತ್ತು. ಈ ನಿಟ್ಟಿನಲ್ಲಿ ಚಿಕ್ಕಮಗಳೂರಿನಲ್ಲಿ ಸಭೆ ನಡೆಸಿ ಸದಸ್ಯರ ಸಹಮತದ ಮೇರೆಗೆ ಅನಿಲ್ ಎಚ್.ಎ. ಅವರನ್ನು ಜಿಲ್ಲಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಚಿಕ್ಕಮಗಳೂರು ಜಿಲ್ಲೆ ಏಗಿಫ಼ಎ ಘಟಕದ ನೂತನ ಪದಾಧಿಕಾರಿಗಳು ವಿವರ: **ಅಧ್ಯಕ್ಷರು :** ಅನಿಲ್ ಹೆಚ್. ಎ. ಪ್ರಧಾನ ಸಂಪಾದಕರು, ಭೂಮಿ ಟಿವಿ ಚಿಕ್ಕಮಗಳೂರು 98865 08080 ಉಪಾಧ್ಯಕ್ಷರು : (ಅವಿರೋಧ ಆಯ್ಕೆ) ಬಿ.ಎನ್. ನಾಗರಾಜ್ ಸಂಪಾದಕರು, ಸತ್ಯಪ್ರಭ ತರೀಕೆರೆ 9980897002'ಪ್ರಧಾನ ಕಾರ್ಯದರ್ಶಿ ಚೇತನ್ ಬಿ.ಪಿ. ಜಿಲ್ಲಾ ವರದಿಗಾರರು, ವಿಜಯಕರ್ನಾಟಕ ಚಿಕ್ಕಮಗಳೂರು 9483209161 ಖಜಾಂಚಿ: ಅಕ್ಷಯ್ ಕುಮಾರ್ ಸಂಪಾದಕರು, ಪಿತಾಮಹ ದಿನ ಪತ್ರಿಕೆ ಚಿಕ್ಕಮಗಳೂರು 8123843833 ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರು (ಅವಿರೋಧ ಆಯ್ಕೆ)ಕಲ್ಯಾಣ್ ಕುಮಾರ್ ಕೆ.ಕೆ.ಸಂಪಾದಕರು ಐಸಿರಿ ಪ್ರಾದೇಶಿಕ ದಿನಪತ್ರಿಕೆ ಚಿಕ್ಕಮಗಳೂರು 9880935693

# ನಾಪತ್ತೆಯಾಗಿದ್ದ ಚೀಟಿ ವೆಂಕಟೇಶ್ ಬಂಧನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕಳೆದ ಎರೆಡು ತಿಂಗಳಿಂದ ನಾಪತ್ತೆಯಾಗಿದ್ದ ಹಾವಂಬಾಯಿ ಪ್ರದೇಶದ ನಿವಾಸಿ ಚೀಟಿ ವೆಂಕಟೇಶ್ ನನ್ನು ಬ್ರೂಸ್ ಪೇಟೆ ಪೊಲೀಸರು ಬಂಧಿಸಿ ನಿನ್ನೆ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ.

ನಾಪತ್ತೆಯಾಗಿದ್ದ ವೆಂಕಟೇಶ್ ಹಲವಾರು ವರ್ಷಗಳಿಂದ ಚೀಟಿ ವ್ಯವಹಾರ ಮಾಡುತ್ತಿದ್ದ. ಲಕ್ಷಾಂತರ ರೂಗಳ ಚೀಟಿ ಹಾಕುತ್ತಿದ್ದ. ನಗರದಲ್ಲಿನ ಬಹುತೇಕ ವ್ಯಾಪಾರಿಗಳು, ವೈದ್ಯರು, ಅಂಗಡಿ ಮುಂಗಟ್ಟುಗಳ ಮಾಲೀಕರು, ಸಾರ್ವಜನಿಕರು ಪ್ರತಿ ತಿಂಗಳು ಚೀಟಿ ವ್ಯವಹಾರ ಮಾಡಿದ್ದರು.

ಕೋಟ್ಯಾಂತರ ರೂ ಗಳ ಚೀಟಿ ವ್ಯವಹಾರ ಈತನದಾಗಿತ್ತು. ಆದರೆ ಈತ ಜ.30 ರಂದು ರಾತ್ರಿ ನಗರದ ಬೆಂಗಳೂರು ರಸ್ತೆಯ ಹೆಚ್. ಎಲ್.ಸಿ.ಕಾಲುವೆ ಬಳಿ ತನ್ನ ಬೈಕ್ ಬಿಟ್ಟು, ಅದರಲ್ಲಿ ತನ್ನ ಎರೆಡು ಮೊಬೈಲ್ ಇಟ್ಟು ನಾಪತ್ತೆಯಾಗಿದ್ದ.

ಮನೆಯವರು ಈತನ ಬಗ್ಗೆ ನಾಪತ್ತೆ ಪ್ರಕರಣ ದಾಖಲಿಸಿದ್ದರು. ಆದರೆ ಮಾರುಕಟ್ಟೆಯಲ್ಲಿ ಈತ ಪೂರ್ವ ನಿರ್ಧಾರಿತನಾಗಿ ಐಪಿ ಇಟ್ಟು ಜನರಿಗೆ ವಂಚನೆ ಮಾಡಿ ತಲೆ ಮರೆಸಿಕೊಂಡಿದ್ದಾನೆ ಆತನನ್ನು ಪತ್ತೆಹಚ್ಚಿ ನಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಆತನಿಗೆ ಹಣ ಕಟ್ಟಿದ್ದ ಜನ ಅಗ್ರಹಿಸಿದ್ದರು.

# ಉಪ ಚುನಾವಣೆ: ನೀತಿ ಸಂಹಿತೆ ಜಾರಿ ನಾಮಪತ್ರ ಸಲ್ಲಿಕೆ ಆರಂಭ

ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಭಾರತ ಚುನಾವಣಾ ಆಯೋಗ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪಚುನಾವಣೆಗೆ ಅಧಿಸೂಚನೆ ಹೊರಡಿಸಿದ್ದು, ಉಪ ಚುನಾವಣೆಗೆ ಎಪ್ರೀಲ್ 9 ರಂದು ಮತದಾನ ನಡೆಯಲಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಉಪ ಚುನಾವಣೆಗೆ ಮಾರ್ಚ 16 ರಂದು ಅಧಿಸೂಚನೆ ಹೊರಡಿಸಲಾಗಿದ್ದು, ನಾಮಪತ್ರ ಸಲ್ಲಿಕೆಗೆ ಮಾರ್ಚ 23 ಕೊನೆಯ ದಿನವಾಗಿದೆ. ಮಾರ್ಚ 24 ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಮಾರ್ಚ 26 ಕೊನೆಯ ದಿನವಾಗಿದೆ. ಎಪ್ರೀಲ್ 9 ರಂದು ಮತದಾನ ನಡೆಯಲಿದ್ದು, ಮತ ಏಣಿಕೆ ಮೇ 4 ರಂದು ನಡೆಯಲಿದೆ ಎಂದು ತಿಳಿಸಿದರು. ಮಾದರಿ ನೀತಿ ಸಂಹಿತೆಯು ಮಾರ್ಚ 15 ರಿಂದಲೇ ಜಿಲ್ಲೆಯಾದ್ಯಂತ ಜಾ-ರಿಯಾಗಿದೆ. ಬಾಗಲಕೋಟೆ

ಮತಕ್ಷೇತ್ರದಲ್ಲಿ 2.59 ಲಕ್ಷ ಮತದಾರರಿದ್ದು, ಚುನಾವಣೆಗೆ ಈಗಾಗಲೇ ಚುನಾವಣಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಿಸಲಾಗಿದೆ. ಮತಕ್ಷೇತ್ರದಲ್ಲಿ ಒಟ್ಟು 319 ಮತಗಟ್ಟೆಗಳಿದ್ದು, ಅದರಲ್ಲಿ ಗ್ರಾಮೀಣ ಪ್ರದೇಶದಲ್ಲಿ 176, ನಗರ ಪ್ರದೇಶದಲ್ಲಿ 143 ಮತಗಟ್ಟೆಗಳಿವೆ. ಫೆಬ್ರವರಿ 14ಕ್ಕೆ ಅಂತಿಮ ಮತದಾರರ ಪಟ್ಟಿ ಪ್ರಕಾರ ಒಟ್ಟು 2,59,260 ಮತದಾರರಿದ್ದು, ಅದರಲ್ಲಿ 1,26,761 ಪುರುಷ ಹಾಗೂ 1,32,476 ಮಹಿಳಾ ಮತದಾರರಿದ್ದಾರೆ.



4188 ಯುವ ಮತದಾರರಿದ್ದು, 85ಕ್ಕಿಂತ ಹೆಚ್ಚಿನ ವಯಸ್ಸಿನ 3017 ಮತದಾರರು, 2633 ಪಿಡಬ್ಲ್ಯೂಡಿ ಮತದಾರರು ಹಾಗೂ 100 ಕ್ಕಿಂತ ಹೆಚ್ಚು ವಯಸ್ಸಿನ 38 ಮತದಾರರು ಹಾಗೂ 391ಸೇವಾ ಮತದಾರರು ಇದ್ದಾರೆ ಎಂದು ಸಂಗಪ್ಪ ತಿಳಿಸಿದರು. ಜಿಲ್ಲೆಯಲ್ಲಿ ಜಿ.ಪಂ ಸಿಇಓ ಮಾದರಿ ನೀತಿ ಸಂಹಿತೆಯ ನೋಡಲ್ ಅಧಿಕಾರಿಯಾಗಿದ್ದು, ಅಭ್ಯರ್ಥಿ 40 ಲಕ್ಷ ರೂ.ಗಳವರೆಗೆ ಖರ್ಚು ಮಾಡಬಹುದಾಗಿದೆ. ಜಿಲ್ಲೆಯಾದ್ಯಂತ ಒಟ್ಟು 29 ಸೆಕ್ಟರ್ ಅಧಿಕಾರಿಗಳು, 60 ಪ್ಲಾಯಿಂಗ್ ಸ್ಕ್ವಾಡ್, 24 ಚೆಕ್‌ಪೋಸ್ಟ, 72 ಸ್ಟಾಟಿಕ್ ಸರ್ವೆಲೆನ್ಸ್ ತಂಡ, 22 ವಿಡಿಯೋ ಸರ್ವೆಲೆನ್ಸ್ ತಂಡಗಳನ್ನು ರಚಿಸಲಾಗಿದೆ. ಈಗಾಗಲೇ 535 ಸಿಯು, 523 ಬಿಯು ಹಾಗೂ 517 ವಿವಿಪ್ಯಾಟ್ ಮಸೀನ್‌ಗಳನ್ನು ಪ್ರಥಮ ಹಂತದ ತಪಾಸಣೆ ಮಾಡಲಾಗಿದೆ. ವಿದ್ಯುನ್ಮಾನ ಯಂತ್ರ ಹಾಗೂ ವಿವಿಪ್ಯಾಟ್‌ಗಳನ್ನು ಬಳಸಿ ಮತದಾನ ಮಾಡುವ ಕುರಿತು ಮತದಾರರಲ್ಲಿ ಜಾಗೃತಿ ಕಾರ್ಯಕ್ರಮ ಮಾಡಲಾಗುತ್ತಿದೆ. ಮಾದರಿ ನೀತಿ ಸಂಹಿತೆ ಉಲ್ಲಂಘನೆ ಆಗುವ ಪ್ರಕರಣಗಳು ಕಂಡುಬಂದಲ್ಲಿ ಸಾರ್ವಜನಿಕರು ಸಹ ಸಿವಿಜಿಲ್ □□□ಪ್ ಮೂಲಕ ದೂರು ಸಲ್ಲಿಸಬಹುದಾಗಿದೆ ಎಂದರು. ಜಿಲ್ಲೆಯಲ್ಲಿ ಅನಧಿಕೃತವಾಗಿ ಹಣ ಸಾಗಾಣಿಕೆ, ಸಾಮಗ್ರಿ ಸಾಗಾಣಿಕೆ ಹಾಗೂ ಇತರೆ ಸಾಮಗ್ರಿಗಳನ್ನು ಅನಧಿಕೃತವಾಗಿ ಸಾಗಿಸುತ್ತಿರುವ ಬಗ್ಗೆ ಕಣ್ಗಾವಲು ಇಡುವ ಉದ್ದೇಶದಿಂದ 24 ಚೆಕ್‌ಪೋಸ್ಟಗಳನ್ನು ರಚಿಸಲಾಗಿದೆ. ಮುಧೋಳ ಕ್ಷೇತ್ರದಲ್ಲಿ ಯಾದವಾಡ ಸರ್ಕಲ್, ಲಕ್ಷಾನಟ್ಟಿ ಕ್ರಾಸ್, ಸಂಗೊಳ್ಳಿ ರಾಯಣ್ಣ ಸರ್ಕಲ್, ತೇರದಾಳ ಕ್ಷೇತ್ರದಲ್ಲಿ ಬುದ್ನಿ ಪಿಡಿ ಕ್ರಾಸ್, 4ನೇ ಕೆನಾಲ್ ತೆರದಾಳ, ಎಪಿಎಂಸಿ ಕ್ರಾಸ್ ಮಹಾಲಿಂಗಪೂರ, ಜಮಖಂಡಿ ಕ್ಷೇತ್ರದಲ್ಲಿ ಚಿಕ್ಕಲಕಿ ಕ್ರಾಸ್, ಹುನ್ನೂರ, ಹುಲ್ಯಾಳ ಕ್ರಾಸ್, ಬೀಳಗಿ ಕ್ಷೇತ್ರದಲ್ಲಿ ಕೊರ್ತಿ ಕೋಲಾರ ಬ್ರಿಡ್ಜ, ಅನಗವಾಡಿ ಕ್ರಾಸ್, ಯಡಹಳ್ಳಿ ಕ್ರಾಸ್, ಬಾದಾಮಿ ಕ್ಷೇತ್ರದಲ್ಲಿ ಜಾಲಿಹಾಳ ಕ್ರಾಸ್, ಕುಳಗೇರಿ ಕ್ರಾಸ್ (ಹುಬ್ಬಳ್ಳಿ ರೋಡ), ಕುಳಗೇರಿ ಕ್ರಾಸ್ (ರಾಮದುರ್ಗ ರೋಡ), ಹಳದೂರ ಕ್ರಾಸ್, ಬಾಗಲಕೋಟೆ ಮತಕ್ಷೇತ್ರದಲ್ಲಿ ಹೊಸೂರ ಕ್ರಾಸ್, ಹೊನ್ನಾಕಟ್ಟಿ ಕ್ರಾಸ್, ಟಾಲ್ ನಾಕಾ ಹತ್ತಿರ ನಾಯನೇಗಲಿ, ಐಬಿ ಕ್ರಾಸ್ ಕಮತಗಿ, ಧನ್ನೂರ, ಗುಗ್ಗಲಮರಿ, ಗುಡೂರ ಎಸ್‌ಸಿ (ಹೂಲಗೇರಿ ಕ್ರಾಸ್)ನಲ್ಲಿ ಚೆಕ್‌ಪೋಸ್ಟ ಸ್ಥಾಪಿಸಲಾಗಿದೆ ಎಂದರು. ಜಿಲ್ಲಾ ಚುನಾವಣಾಧಿಕಾರಿ ಜಿಲ್ಲಾಧಿಕಾರಿ ಸಂಗಪ್ಪ, ಮಾದರಿ ನೀತಿ ಸಂಹಿತೆ ಪಾಲನಾ ನೋಡಲ್ ಅಧಿಕಾರಿಯಾಗಿ ಜಿ.ಪಂ ಸಿಇಓ ಶಶಿಧರ ಕು-ರೇರ, ಜಿಲ್ಲಾ ವರಿಷ್ಠಾಧಿಕಾರಿ ಸಿದ್ಧಾರ್ಥಗೋಯಲ್, ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಯಾಗಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣೆಯ ಚುನಾವಣಾಧಿಕಾರಿ ಹಾಗೂ ಮತದಾರರ ನೋಂದಣಿ ಅಧಿಕಾರಿಯಾಗಿ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಸಹಾಯಕ ಚುನಾವಣಾಧಿಕಾರಿ ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಯಾಗಿ ಬಾಗಲಕೋಟೆ ತಹಶೀಲ್ದಾರ ವಾಸುದೇವ ಸ್ವಾಮಿ, ಹುನಗುಂದ ತಹಶೀಲ್ದಾರ ಡಾ.ಪ್ರದೀಪಕುಮಾರ ಅವರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಜಿ.ಪಂ ಸಿಇಓ ಶಶಿಧರ ಕು-ರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಉಪಸ್ಥಿತರಿದ್ದರು.

# ಸಾಧಕ ಮಹಿಳೆಯರಿಗೆ ಐಕಾನ್ ಪ್ರಶಸ್ತಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರಿನ

ಸದಾಶಿವನಗರದ ಹೈಡ್ ಪಾರ್ಕ್ ಹೋಟೆಲ್ನಲ್ಲಿ ಪ್ರಗತಿ ಮೀಡಿಯಾ ಇವೆಂಟ್ಸ್ ಆಯೋಜಿಸಿದ್ದ ಕರ್ನಾಟಕ ವಿಮೆನ್ಸ್ ಐಕಾನ್ ಅವಾರ್ಡ್ಸ್2026 ಕಾರ್ಯಕ್ರಮ ಆಯೋಜಿಸಲಾಗಿತ್ತು.ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಖ್ಯಾತ ಉದ್ಯಮಿ ವಿ.ವೀರೇಶ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಸಾಧಕ ಮಹಿಳೆಯರಿಗೆ ಐಕಾನ್ ಪ್ರಶಸ್ತಿ ನೀಡಿ ಗೌರವಿಸಿದರು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ರಂಗಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಕರ್ನಾಟಕ ವಿಮೆನ್ಸ್ ಐಕಾನ್ ಅವಾರ್ಡ್ಸ್-2026 ನೀಡಿ ಗೌರವಿಸಲಾಯಿತು. ಆರ್.ವಿ.ಮಮತಾ ದೇವರಾಜ್, ಡೆಂಟಿಸ್ಟ್ ಸ್ವಾತಿ ಶುಕ್ಲಾ, ಪವಿತ್ರ ಪ್ರಭಾಕರ್ ರೆಡ್ಡಿ ಜಿ.ಎಸ್.ಲತಾ ಜೈಪ್ರಕಾಶ್, ಫ್ಯಾಷನ್ ಡಿಸೈನರ್ ಪೂನಂ ಭೇತ್ರಿ, ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಗಾಗಿ ಮಂಜುಳಾ ಭಾರ್ಗವಿ, ಡಾ.ಅನುಪಮ ಪಂಚಾಕ್ಷರಿ, ನಯನಾ, ಪ್ರಿಯಾಂಕ ರಂಗಪ್ಪ, ಕರಾಟೆ ವಿನ್ನರ್ ಆನ್ವಿ ಪಟೇಲ್, ಸಾಮಾಜಿಕ ಸೇವೆ ನಿತ್ಯಾ, ಸಂಗೀತಾ ಭಟ್, ಡಾ.ಧನ್ಯಾ ಸೇರಿದಂತೆ ಹಲವರು ಪ್ರಶಸ್ತಿಗೆ ಭಾಜನರಾದರು.



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಭರತನಾಟ್ಯ ನೃತ್ಯ ನೆರದಿದ್ದವರನ್ನು ರಂಜಿಸಿತು. ಉದ್ಯಮಿ ವಿ.ವೀರೇಶ್ ಅವರಿಗೆ ಹಾಗು ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷ ಶಿವಕುಮಾರ್ ನಾಗರ ನವಿಲೆಯವರನ್ನು ಪ್ರಗತಿ ಮೀಡಿಯಾ ಇವೆಂಟ್ಸ್ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಆಯೋಜಕರಾದ ಆದರ್ಶ ರವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನೆರವೇರಿಸಿದರು ಅಂತರಾಷ್ಟ್ರೀಯ ನಿರೂಪಕರಾದ ಧನಂಜಯ್ ರವರ ನಿರೂಪಣೆಗೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದರು

# ಲೋಕ ಅದಾಲತ್: 49,953 ಪ್ರಕರಣ ಇತ್ಯರ್ಥ

• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ಕೊಪ್ಪಳ ಜಿಲ್ಲೆಯ ಗಂಗಾವತಿ, ಕುಷ್ಟಗಿ ಹಾಗೂ ಯಲಬುರ್ಗಾ ನ್ಯಾಯಾಲಯಗಳಲ್ಲಿ ಶನಿವಾರ ನಡೆದ ಲೋಕ ಅದಾಲತ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸಲಾಗಿದೆ.

ಈ ಸಂದರ್ಭದಲ್ಲಿ ಒಟ್ಟು 7 ಪ್ರಕರಣಗಳಲ್ಲಿ ಗಂಡ-ಹೆಂಡತಿಯರು ತಮ್ಮ ಮನಸ್ತಾಪವನ್ನು ಬಿಟ್ಟು, ಮಧ್ಯಸ್ಥಿಕೆಗಾರರು, ವಕೀಲರು ಹಾಗೂ ನ್ಯಾಯಾಧೀಶರು ನೀಡಿದ ಸೂಕ್ತ ಮಾರ್ಗದರ್ಶನದ ಹಿನ್ನೆಲೆಯಲ್ಲಿ ಮತ್ತೆ ಒಟ್ಟಿಗೆ ಬಾಳು ನಡೆಸಲು ಒಪ್ಪಿಕೊಂಡಿರುವುದು ವಿಶೇಷವಾಗಿತ್ತು.

ನ್ಯಾಯಾಲಯಗಳಲ್ಲಿ ನಡೆಯುತ್ತಿದ್ದ ವಿಮೆ, ನೀರಿನ ಬಿಲ್, ಬ್ಯಾಂಕ್ ಸಾಲ, ಮನೆ ಕರ, ಕೌಟುಂಬಿಕ ದೌರ್ಜನ್ಯ, ಜೀವನಾಂಶ, ಚೆಕ್ ಬೌನ್ಸ್, ಜನನ-ಮರಣ, ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಸೇರಿದಂತೆ ವಿವಿಧ ರೀತಿಯ ಒಟ್ಟು 5123 ಪ್ರಕರಣಗಳ ಪೈಕಿ 3032 ಪ್ರಕರಣಗಳನ್ನು ಇತ್ಯರ್ಥಪಡಿಸಲಾಯಿತು. ಇದೇ ವೇಳೆ ವಿಮೆ, ನೀರಿನ ಕರ, ಮೋಟಾರ್ ವಾಹನ ಅಪಘಾತ ಸೇರಿದಂತೆ ವಿವಿಧ ಪೂರ್ವ ದಾವೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 52,194 ಪ್ರಕರಣಗಳ ಪೈಕಿ 46,921 ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸಲಾಯಿತು. ಇತ್ಯರ್ಥಗೊಂಡ ಪ್ರಕರಣಗಳ ಒಟ್ಟು ಮೌಲ್ಯ 3,21,81,082 ರೂ. ಆಗಿದೆ.

ಒಟ್ಟಾರೆ ಒಂದೇ ದಿನದಲ್ಲಿ ನಡೆದ ಈ ಲೋಕ ಅದಾಲತ್‌ನಲ್ಲಿ ಒಟ್ಟು 57,316 ಪ್ರಕರಣಗಳ ಪೈಕಿ 49,953 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಇತ್ಯರ್ಥಗೊಂಡ ಪ್ರಕರಣಗಳ ಒಟ್ಟು ಮೌಲ್ಯ 44,44,49,017 ರೂ. ಆಗಿದೆ.



ಈ ಬಾರಿ ದಾಖಲೆ ಪ್ರಮಾಣದಲ್ಲಿ ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸಲು ಸಹಕರಿಸಿದ ಗೌರವಾನ್ವಿತ ನ್ಯಾಯಾಧೀಶರು, ವಕೀಲರು, ಕಕ್ಷಿಗಾರರು ಹಾಗೂ ಮಧ್ಯಸ್ಥಿಕೆಗಾರ ವಕೀಲರಿಗೆ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಧನ್ಯವಾದಗಳನ್ನು ಸಲ್ಲಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಜೆಸ್ಕಾಂ ಹೊಸ ಕಚೇರಿ ಸಂಕೀರ್ಣದಿಂದ ಜನರಿಗೆ ಉತ್ತಮ ಸೇವೆ ದೊರೆಯಲಿದೆ: ರಾಘವೇಂದ್ರ ಹಿಟ್ನಾಳ್



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜೆಸ್ಕಾಂ ಇಲಾಖೆಯ ಸೇವೆಗಳು ಜನರ ದೈನಂದಿನ ಜೀವನದಲ್ಲಿ ಅತ್ಯಂತ ಪ್ರಮುಖವಾಗಿದ್ದು, ಹೊಸ ಕಚೇರಿ ಸಂಕೀರ್ಣ ನಿರ್ಮಾಣದಿಂದ ಸಾರ್ವಜನಿಕರಿಗೆ ವೇಗವಾದ ಮತ್ತು ಪರಿಣಾಮಕಾರಿ ವಿದ್ಯುತ್ ಸೇವೆ ದೊರೆಯಲಿದೆ ಎಂದು ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಹೇಳಿದರು.

ಶನಿವಾರದಂದು ನಗರದ 110/33/11 ಕೆ.ವಿ ವಿದ್ಯುತ್ ಉಪಕೇಂದ್ರದ ಆವರಣದಲ್ಲಿ ಕೊಪ್ಪಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೊಪ್ಪಳ ನಗರದಲ್ಲಿ ಅಂದಾಜು ರೂ.1950 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಜೆಸ್ಕಾಂ ಕಾರ್ಯ ಮತ್ತು ಪಾಲನಾ ವೃತ್ತ ಕಚೇರಿ ಸಂಕೀರ್ಣ ಕಟ್ಟಡದ ಶಂಕುಸ್ಥಾಪನೆ ಸಮಾರಂಭದಲ್ಲಿ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಬಹಳ ವರ್ಷಗಳಿಂದ ಕೊಪ್ಪಳದಲ್ಲಿ ಜೆಸ್ಕಾಂ ಸರ್ಕಲ್ ಕಚೇರಿ ಸ್ಥಾಪನೆಯಾಗಬೇಕು ಎಂಬುದು ಇಲಾಖೆಯ ಸಿಬ್ಬಂದಿ ಹಾಗೂ ಜಿಲ್ಲೆಯ ಜನರ ಬಹುದಿನಗಳ ಆಶಯವಾಗಿತ್ತು. ಇದೀಗ ಸುಮಾರು ರೂ.19 ಕೋಟಿ ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣವಾಗುತ್ತಿರುವುದು ಸಂತಸದ ವಿಷಯವಾಗಿದೆ. ನೂತನ ವೃತ್ತ ಕಚೇರಿ ಸಂಕೀರ್ಣದಿಂದ ಜಿಲ್ಲೆಯ ಜನರಿಗೆ ಬಹಳಷ್ಟು ಅನುಕೂಲವಾಗಲಿದೆ. ಈ ಮೊದಲು ಜೆಸ್ಕಾಂ ಕಾರ್ಯ ಚಟುವಟಿಕೆಗಳು ಮುನಿರಾಬಾದ್ ಹಾಗೂ ರಾಯಚೂರಿನಲ್ಲಿ ಪ್ರಮುಖವಾಗಿ ನಡೆಯುತ್ತಿದ್ದವು. ಈಗ ಕೊಪ್ಪಳದಲ್ಲೇ ವೃತ್ತ ಕಚೇರಿ ಸ್ಥಾಪನೆಯಾಗುತ್ತಿರುವುದು ಜಿಲ್ಲೆಯ ಅಭಿವೃದ್ಧಿಗೆ ಮಹತ್ವದ ಹೆಜ್ಜೆಯಾಗಲಿದೆ ಎಂದು ಹೇಳಿದರು.

ತುಂಗಭದ್ರಾ ನದಿಯ ಎಡದಂಡೆಯಲ್ಲಿ ನಮ್ಮ ಜಿಲ್ಲೆ ಇದೆ. ಜಿಲ್ಲೆಯಲ್ಲಿ ನೀರಾವರಿ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದ್ದು, ಸಿಂಗಟಾಲೂರು ಏತ ನೀರಾವರಿ ಹಾಗೂ ವಿವಿಧ ನೀರಾವರಿ ಯೋಜನೆಗಳ ಮೂಲಕ ಈ ವರ್ಷದಲ್ಲಿ ಸುಮಾರು ರೂ.1052 ಕೋಟಿ ವೆಚ್ಚದಲ್ಲಿ 78 ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಕಾರ್ಯ ನಡೆಯುತ್ತಿದೆ. ಒಟ್ಟು ಸುಮಾರು 1 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ನೀರಾವರಿ ವಿಸ್ತರಣೆಗೆ ಪೂರಕವಾಗಿ ರೈತರಿಗೆ ವಿದ್ಯುತ್ ಪೂರೈಕೆ ಅಗತ್ಯವಾಗಿದ್ದು, ಈಗಾಗಲೇ ಮೂರು ಹೊಸ ಸಬ್‌ಸ್ಟೇಷನ್‌ಗಳ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ. ಗೊಂಡಬಾಳ, ನೆಲೋಗಿಪುರ ಹಾಗೂ ಚಿಲವಾಡಗಿ ಸೇರಿದಂತೆ ಇನ್ನೂ ಮೂರು ಸಬ್‌ಸ್ಟೇಷನ್‌ಗಳನ್ನು ನಗರ ಪ್ರದೇಶದಲ್ಲಿ ನಿರ್ಮಿಸಲು ಸಚಿವ ಕೆ.ಜೆ. ಜಾರ್ಜ್ ಅವರಿಗೆ ಮನವಿ ಮಾಡಲಾಗಿದೆ. ಕೊಪ್ಪಳ ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು 24*7 ರೀತಿಯಲ್ಲಿ


ಒದಗಿಸಲು ಪ್ರತ್ಯೇಕ ಫೀಡರ್ ವ್ಯವಸ್ಥೆ ಕಲ್ಪಿಸುವ ಕುರಿತು ಚರ್ಚೆ ನಡೆಸಲಾಗಿದೆ. ಮನೆ ಮನೆಗಳಿಗೆ ನೀರಿನ ಸಂಪರ್ಕ ಒದಗಿಸಲು ಸುಮಾರು ರೂ.125 ಕೋಟಿ ಅನುದಾನ ಮಂಜೂರಾಗಿದೆ. ತಾಲೂಕು ಮಿನಿ ಸೌಧ ನಿರ್ಮಾಣಕ್ಕೂ ಸುಮಾರು ರೂ.18 ಕೋಟಿ ವೆಚ್ಚದ ಅನುಮೋದನೆ ದೊರೆತಿದ್ದು, ನಗರದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಅವರು ಕರೆ ನೀಡಿದರು.

ಈ ಹೊಸ ಜೆಸ್ಕಾಂ ಕಚೇರಿ ಸಂಕೀರ್ಣವು ಕೊಪ್ಪಳ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸಲು ಸಹಕಾರಿಯಾಗಲಿದ್ದು, ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಲು ಅನುಕೂಲವಾಗಲಿದೆ ಎಂದು ಶಾಸಕ ರಾಘವೇಂದ್ರ ಹಿಟ್ನಾಳ್ ಹೇಳಿದರು.

ಕೊಪ್ಪಳ ಸಂಸದರಾದ ಕೆ.ರಾಜಶೇಖರ ಹಿಟ್ನಾಳ ಅವರು ಮಾತನಾಡಿ, ನಿರಂತರ ಜ್ಯೋತಿ ಬಂದ ಮೇಲೆ ವಿದ್ಯಾರ್ಥಿಗಳಿಗೆ, ರೈತರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಆಗದಹಾಗೆ ಜೆಸ್ಕಾಂ ಸಿಬ್ಬಂದಿಗಳು ಮತ್ತು ಪವರ್‌ಮೆನ್‌ಗಳು ಬಹಳ ನಿಷ್ಠೆಯಿಂದ ವಿದ್ಯುತ್ ಪೂರೈಕೆ ಮಾಡಿದ್ದೀರಿ. ಹೊಸ ಕಟ್ಟಡ ನಿರ್ಮಾಣದಿಂದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅಗತ್ಯವಾದ ಸೌಲಭ್ಯಗಳು ದೊರೆಯಲಿದ್ದು, ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಲು ಸಹಕಾರಿಯಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಸನ್ನ ಗಡಾದ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಉಪಾಧ್ಯಕ್ಷ ಮಂಜುನಾಥ ಗೊಂಡಬಾಳ, ಜೆಸ್ಕಾಂ ಬಳ್ಳಾರಿಯ ಕಾರ್ಯ ಮತ್ತು ಪಾಲನಾ ವಲಯದ ಮುಖ್ಯ ಇಂಜಿನಿಯರ್ ಮೌನೇಶ್ ಎಸ್.ಪತ್ತಾರ್, ಜೆಸ್ಕಾಂ ಕೊಪ್ಪಳ ಕಾರ್ಯ ಮತ್ತು ಪಾಲನಾ ವೃತ್ತದ ಅಧೀಕ್ಷಕ ಇಂಜಿನಿಯರ್ ರಮೇಶ್ ಎಚ್., ಜೆಸ್ಕಾಂ ಬಳ್ಳಾರಿಯ ಕಾರ್ಯ ಮತ್ತು ಪಾಲನಾ ವಲಯದ ಕಾರ್ಯನಿರ್ವಾಹಕ ಇಂಜಿನಿಯರ್ ಖಾಜಾ ಮೈನುದ್ದೀನ್, ಜೆಸ್ಕಾಂ ಕೊಪ್ಪಳದ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ ಮೋಟ್ಲ ನಾಯ್ಕ ಎಂ., ನೌಕರರ ಸಂಘದ ಉಪಾಧ್ಯಕ್ಷ ಜೆ.ಎಸ್. ಗೋಪಿ, ಜೆಸ್ಕಾಂ ಅಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಸ್ಥಳೀಯ ನಾಗರಿಕರು ಉಪಸ್ಥಿತರಿದ್ದರು.

# ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿ ಸೇರ್ಪಡೆ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬಾಗಲಕೋಟೆ ಮತಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಬಿಜೆಪಿ ಗೆಲ್ಲಿಸೋಣ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ನವನಗರದ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಸೋಮವಾರ ನಡೆದ ಪದಗ್ರಹಣ ಹಾಗೂ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬಾಗಲಕೋಟೆ ವೀರಣ್ಣ ಚರಂತಿಮಠ ಅವರ ಶಾಸಕರಾಗಿದ್ದ ಅವದಿಯಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಿದೆ, ಅವರ ಅವದಿಯಲ್ಲಿ ಬಿಟಿಡಿಎ ದಿಂದ ಮುಳಗಡೆ ಫಲಾನುಭವಿಗಳಿಗೆ, ಬಾಡಿಗೆದಾರರಿಗೆ, ವಯಸ್ಕರ ಮಕ್ಕಳಿಗೆ ಸೇರಿ 2270 ಕ್ಕೂ ಹೆಚ್ಚು ಹಕ್ಕು ಪತ್ರಗಳ ವಿತರಣೆ ಮಾಡಿದ್ದರು, 118.97 ಕೋಟಿ ರೂಗಳ ಅನುದಾನದಲ್ಲಿ ಬಾಗಲಕೋಟೆ ನಡುಗಡ್ಡೆ ಕಿಲ್ಲಾ ಪ್ರದೇಶದ 1057 ಮನೆಗಳು(11/ಎ ಆಗಿದೆ) ಭೂಸ್ವಾಧೀನ ಪುನರ್ವಸತಿಗೆ ಚಾಲನೆ ನೀಡಿದ್ದರು ಎಂದರು. ಬಾಗಲಕೋಟೆ ಜಿಲ್ಲೆಯಾದ ನಂತರದಲ್ಲಿ ಪ್ರಪ್ರಥಮವಾಗಿ ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ( ಬುಡಾ) ಸ್ಥಾಪನೆ ಮಾಡಿದ್ದು ಹಾಗೂ ಬಾಗಲಕೋಟೆ ನಗರಸಭೆಯನ್ನು 2ರಿಂದ ಗ್ರೇಡ್ 1ಕ್ಕೆ ಮೇಲ್ದರ್ಜೆಗೆ ತಂದಿದ್ದು ವೀರಣ್ಣ ಚರಂತಿಮಠರು. ಕ್ಷೇತ್ರದ ಸರ್ವತ್ತೋಮುಖ ಅಭಿವೃದ್ಧಿಗಾಗಿ ಸಾವಿರಾರು ಕೋಟಿ ರೂಗಳ ಅನುದಾನ ತಂದು ಕ್ಷೇತ್ರವನ್ನು ಬೆಳಿಸಿದ್ದಾರೆ. ಅದರ ಶ್ರೇಯಸ್ಸು ಬಿಜೆಪಿ ಪಕ್ಷಕ್ಕೆ ಮತ್ತು ಕಾರ್ಯಕರ್ತರಿಗೆ ಸಲ್ಲುತ್ತದೆ. ಈಗ ನಮ್ಮ ಗುರಿ ಬಿಜೆಪಿ ಗೆಲುವು ಮಾತ್ರ ಎಂದರು.

ಮಾಜಿ ಶಾಸಕ ಡಾ. ವೀರಣ್ಣ ಚರಂತಿಮಠ ಮಾತನಾಡಿ, ನಮ್ಮ ಅಭಿವೃದ್ಧಿ ಕೆಲಸಗಳೆ ನಮಗೆ ಶ್ರೀರಕ್ಷೆ, ಸಮಾಜದಲ್ಲಿ ಮನುಷ್ಯ ಶಾಶ್ವತನಲ್ಲ ಆತ ಮಾಡಿದ ಅಭಿವೃದ್ಧಿ ಕಾರ್ಯಕಗಳು ಶಾಶ್ವತವಾಗಿರುತ್ತವೆ, ಎಲ್ಲರೂ ಈ ಚುನಾವಣೆಯಲ್ಲಿ ಕಾರ್ಯಕರ್ತರ ಶಕ್ತಿಯೊಂದಿಗೆ ಬಿಜೆಪಿಯನ್ನು ಗೆಲ್ಲಿಸಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಪಂಚಾಯತ ಮಾಜಿ ಅಧ್ಯಕ್ಷ ಹೂವಪ್ಪ ರಾಠೋಡ, ಬಾಗಲಕೋಟೆಗೆ ಮೊತ್ತೊಮ್ಮೆ ಅವಕಾಶ ಒದಗಿ ಬಂದಿದ್ದು, ಬಿಜೆಪಿಯನ್ನು ಗೆಲ್ಲಿಸುವ ಮೂಲಕ ಸಾರ್ಥಕಗೊಳಿಸೋಣ ಎಂದರು.

ವೇದಿಕೆ ಮೇಲೆ ಜಿಲ್ಲಾ ಪಂಚಾಯತ ಮಾಜಿ ಸದಸ್ಯ ರಂಗನಗೌಡ ಗೌಡರ, ಪ್ರಭುಸ್ವಾಮಿ ಸರಗಣಾಚಾರಿ, ಬಸವರಾಜ ಯಂಕಂಚಿ, ರಾಜು ನಾಯ್ಕರ, ಸುರೇಶ ಕೊಣ್ಣೂರ, ಬಸವರಾಜ ಹುನಗುಂದ, ಕಾವೇರಿ ರಾಠೋಡ, ಮುತ್ತು ಲಮಾಣಿ, ಗಂಗಾರಾ ಚವ್ಹಾಣ, ಅಶೋಕ ಪೂಜಾರಿ, ಸೋಮಸಿಂಗ ಲಮಾಣಿ ಸೇರಿದಂತೆ ಅನೇಕರು ಇದ್ದರು. ಜಿಲ್ಲಾ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ನೂತನವಾಗಿ ಆಯ್ಕೆಯಾದ ದೀಲೀಪ್ ರಾಠೋಡ ಅವರಿಗೆ ಬಿಜೆಪಿ ಧ್ವಜ ನೀಡಿ ಪದಗ್ರಹಣ ಮಾಡಲಾಯಿತು. ಇದೇ ಸಂದರ್ಭದಲ್ಲಿ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿ ಪಕ್ಷವನ್ನು ಸೇರ್ಪಡೆಗೊಂಡರು. ಪದಗ್ರಹಣ ಹಾಗೂ ಪಕ್ಷ ಸೇರ್ಪಡೆ ನಿಮಿತ್ಯ ಬೈಕ ರ್ಯಾಲಿ ನವನಗರದ ಕೋರ್ಟ ಸರ್ಕಲ್ ನಿಂದ ಪ್ರಾರಂಭವಾಗಿ ವಿದ್ಯಾಗಿರಿ ಮೂಲಕ ಹಳೆ ನಗರ ಬಸವೇಶ್ವರ ವೃತ್ತದ ಮುಖಾಂತರ ರೈಲ್ವೆ ನಿಲ್ದಾಣ ರಸ್ತೆ ಮೂಲಕ ಎಪಿಎಮ್‌ಸಿ, ನವನಗರದ ಬಿಜೆಪಿ ಕಾರ್ಯಾಲದ ಮುಂದೆ ಸಮಾರೋಪಗೊಂಡಿತು.

## ನೂತನ ಅಧ್ಯಕ್ಷರಾಗಿ ಹುಲ್ಲೇಶ ಆಯ್ಕೆ





**ಗಂಗಾವತಿ:** ಕೊಪ್ಪಳ ಪ್ರವಾಸಿ ಮಂದಿರದಲ್ಲಿ ನಡೆದ ಬೋವಿ (ವಡ್ಡರ) ಸಮಾಜದ ಪದಾಧಿಕಾರಿಗಳ ಆಯ್ಕೆ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಕೊಪ್ಪಳ ಜಿಲ್ಲೆಗೆ ನೂತನ ಯುವ ಘಟಕದ ಅಧ್ಯಕ್ಷರಾಗಿ ಹುಲ್ಲೇಶ್ ಬಂಡಿ ಗಂಗಾವತಿ ಇವರು ಒಮ್ಮತದಿಂದ ಆಯ್ಕೆಯಾಗಿದರು. ಇದೇ ಸಂದರ್ಭದಲ್ಲಿ ಮಹಿಳಾ ಘಟಕದ ಅಧ್ಯಕ್ಷರಾಗಿ ಪುಷ್ಪಾಂಜಲಿ ಗುನ್ನಾಳ್ ಗಂಗಾವತಿ ಆಯ್ಕೆಯಾಗಿದ್ದಾರೆ. ನೂತನ ಯುವ ಘಟಕದ ಉಪಾಧ್ಯಕ್ಷರಾಗಿ ಯಲ್ಲಪ್ಪ ಗಾಣದಾಳ ಯಲಬುರ್ಗಾ ಆಯ್ಕೆ ಮಾಡಲಾಯಿತು.

ಸಮಾಜದಲ್ಲಿ ಸಾಮಾಜಿಕ ಕುಂದು ಕೊರತೆ, ಬೋವಿ (ವಡ್ಡರ) ಮೇಲೆ ನಡೆಯುತ್ತಿರುವ ಅಸಮಾನತೆಯನ್ನು ಓಗಲಾಡಿಸಲು ಮತ್ತು ಸಮಾಜವನ್ನು ಒಟ್ಟುಗೂಡಿಸುವ ಕಾರ್ಯವಾಗಬೇಕು ಎಂದು ನೂತನವಾಗಿ ಆಯ್ಕೆಯಾದ ಹುಲ್ಲೇಶ್ ಬಂಡಿ ಅವರು ತಿಳಿಸಿದರು. ಮತ್ತು ಇತ್ತೀಚಿಗೆ ನಡೆಯುತ್ತಿರುವ ರಾಜಕೀಯ ವಿಷಯಗಳ ಬಗ್ಗೆ ಚರ್ಚೆ ಮಾಡಲಾಗಿದೆ. ಈ ಸಂದರ್ಭದಲ್ಲಿ ಸಮಾಜದ ಹಿರಿಯ ಮುಖಂಡರಾದ ಜಿಲ್ಲಾ ಗೌರವ್ಯಾಧ್ಯಕ್ಷರಾದ ಮಾಸ್ತಪ್ಪ ಕಟ್ಟಿಮನಿ, ಜಿಲ್ಲಾ ಉಪಾಧ್ಯಕ್ಷ ರಾಮಣ್ಣ ಪೂಜಾರ, ಜಿಲ್ಲಾ ಸಂಚಾಲಕರು, ರಾಮಣ್ಣ ಅಳವಂಡಿ, ರಮೇಶ್ ಬಸಾಪಟ್ಟಣ, ಯಮನೂರ, ಗಾಳೆಪ್ಪ ಗಂಗಾವತಿ, ಸೋಮಪ್ಪ ಸಾಯಿನಗರ, ಪಂಪಪಾತಿ ಸೋಮನಾಳ ಹಾಗೂ ಕಾರಟಗಿ ತಾಲೂಕ ಅಧ್ಯಕ್ಷರು ಭೋಜಪ್ಪ, ಮುಸ್ಲಾಪುರ ಕನಕಗಿರಿ ತಾಲೂಕ ಅಧ್ಯಕ್ಷರು ರಾಮಣ್ಣ ಮಾದ್ನೂರು, ಭೀಮೇಶ್ ಮಾದ್ನೂರ್, ಪರಶುರಾಮ್ ತಾವರಗೇರಾ, ರಾಮು ಪೂಜಾರ, ಮಂಜುನಾಥ ಬರೋಡಗಿ, ರಮೇಶ್ ಡಗ್ಗಿ, ಮುತ್ತಣ್ಣ ಕುಕುನೂರು, ಹನುಮಂತ ಕುಷ್ಟಗಿ, ಯಂಕೋಬ ಯಲ್ಲಪ್ಪ ಸಂಗಾಪುರ, ಹಾಳಪ ಬಸಪಟ್ಟಣ, ವೆಂಕಟೇಶ್ ರಾಂಪುರ ರಾಘು, ಮಲ್ಲಾಪುರ್ ಯಲ್ಲಪ್ಪ ಭೋವಿ, ರಾಘು ಹೊಸಳ್ಳಿ. ನಾಗರಾಜ್ ಕುಮಾರ್ ಭೋವಿ, ಬಸವರಾಜ ಹಿರೇಬಗನಾಳ, ಬಸವರಾಜ್ ಯಲಬುರ್ಗಾ. ರಮೇಶ್ ಮಾದ್ನೂರು ಹಾಗೂ ಹಿರಿಯರು ಮತ್ತು ಯುವಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ನೂರು ಜನುಮ ಸಾಂಗ್ ರಿಲೀಸ್



"ಸಿಂಹಪುರಿಯ ಸಿಂಹ " ಒಂದು ರಹಸ್ಯ ಕಥೆಯೊಂದಿಗೆ ಬಿಡುಗಡೆ ಸಜ್ಜಾಗಿದೆ ಸಿಂಹಪುರಿಯ ಚಿತ್ರತಂಡ .ಚಿತ್ರದ ನಾಯಕ ನಟರಾಗಿ ಕೆ ವೈ ಮೂರ್ತಿಯವರು ಅಭಿನಯಿಸಿದ್ದು ,ನಾಯಕಿಯಾಗಿ ಸೌಜನ್ಯ ಅಭಿನಯಿಸಿದ್ದಾರೆ ಇನ್ನ ಚಿತ್ರದ ವಿಲನ್ಗಳಾಗಿ ಸುಧೀನ್ ಕುಮ್ಸ್ & ನಿಲೇಶ್ ಗೌಡ ಅಭಿನಯಿಸಿದ್ದು, ಸಹಕಲಾವಿದರಾಗಿ ಶಂಕರ್ ಭಟ್, ಉಮೇಶ್, ಬ್ಯಾಂಕ್ ಜನಾರ್ಧನ್, ಜೂನಿಯರ್ ದ್ವಾರಕೀಶ್ ,ಪದ್ಮ ವಸಂತಿ, ರೇಖಾದಾಸ್, ಪ್ರಸನ್ನ ಹಾಗೂ ಮುತ್ತುರಾಜ್ ಇನ್ನು ಹಲವು ಕಲಾವಿದರು ಅಭಿನಯಿಸಿದ್ದಾರೆ.

ಈ ಸಿಂಹಪುರಿಯ ಚಿತ್ರದ ,ಕಥೆಚಿತ್ರಕಥೆ ,ನಿರ್ದೇಶನ ,ನಿರ್ಮಾಪಕರು ಕೆ ವೈ ಮೂರ್ತಿಯವರು ಮಾಡಿದ್ದು. ಛಾಯಾಗ್ರಾಹಣ ಗುರುದತ್ ಮುಸುರಿ ,ಮನೋಹರ್, ಸಿ ಎಸ್ ಸತೀಶ್ ಸಂಗೀತ ಕೃಪಾಕರ್ ,ಸಂಕಲನ ಅರುಣ್ ಬೆಂಗಳೂರು ಮೂವೀಸ್ ಸಾಹಸ ದೃಶ್ಯ ಅಲ್ಟಿಮೇಟ್ ಶಿವು ,ಜಾನಿ ಮಾಸ್ಟರ್ ಸಂಭಾಷಣೆ ಸುದರ್ಶನ್ ಇನ್ನು ಈ ಚಿತ್ರದಲ್ಲಿ ಸಾಂಗುಗಳು ಇರಲಿದ್ದು .ಸಂಗೀತ ಗಾಯಕರು ರಾಜೇಶ್ ಕೃಷ್ಣನ್, ಹೇಮಂತ್, ಅನುರಾಧ ಭಟ್, ಪ್ರಿಯಾ ಯಾದವ್, ಸ್ನೇಹ ಪ್ರಿಯ ನಾಗರಾಜ್ , ಹಾಗೂ ನೃತ್ಯ ಸಂಯೋಜಕರಾಗಿ ( ಸಂಧನ್ ರಾಜ್ ) ರಾಜದೇವ್ ರವರು ಕಾರ್ಯನಿರ್ವಹಿಸಿದ್ದಾರೆ 'ಚಿತ್ರ ಇದೆ ಏಪ್ರಿಲ್ 03 ಅದ್ದೂರಿಯಾಗಿ ಬಿಡುಗಡೆಯಾಗಲಿದೆ.

# ಕಾರ್ಯಾಚರಣೆ, 36 ಆರೋಪಿಗಳ ಬಂಧನ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಜಿಲ್ಲೆಯಲ್ಲಿ ಸರಣಿ ಕಳ್ಳತನ, ದರೋಡೆ ಮತ್ತು ಸುಲಿಗೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಬರೋಬ್ಬರಿ 36 ಜನ ಆರೋಪಿಗಳನ್ನು ವಿಜಯಪುರ ಜಿಲ್ಲಾ ಪೊಲೀಸರು ಬಂಧಿಸಿ ಬಂಧಿತರಿಂದ ಒಟ್ಟು 1,ಕೋಟಿ 27,ಲಕ್ಷ 38,ಸಾವಿರ ಮೌಲ್ಯದ ಬಂಗಾರ, ಬೆಳ್ಳಿ, ನಗದು ಹಾಗೂ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ, ನಿಡಗುಂದಿ, ತಾಳಿಕೋಟೆ, ಬಸವನ ಬಾಗೇವಾಡಿ ಹಾಗೂ ಕೂಡಗಿ ಪೊಲೀಸ್ ಠಾಣಾ ವ್ಯಾಪ್ತಿಯ 22 ವಿವಿಧ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು ಬಂಗಾರ ಮತ್ತು ಬೆಳ್ಳಿಯ ಆಭರಣಗಳು ಸೇರಿದಂತೆ, 02 ಕಾರುಗಳು, ಹಾಗೂ 17 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ.

ಮುದ್ದೇಬಿಹಾಳದಲ್ಲಿ ರಾಯಚೂರು ಮೂಲದ ಮೂವರು ಅಂತರಜಿಲ್ಲಾ ಕಳ್ಳರ ಬಂಧನ ಮಾಡುವ ಮೂಲ 51.ಲಕ್ಷ 35 ಸಾವಿರ ಮೌಲ್ಯದ ಸ್ವತ್ತು ವಶಕ್ಕೆ ಪಡೆದಿದ್ದು, ನಿಡಗುಂದಿಯಲ್ಲಿ ಸರಗಳ್ಳತನ ಮಾಡಿದ್ದ ಆರೋಪಿಯ ಬಂಧನ ಮಾಡಿದ್ದರೆ ತಾಳಿಕೋಟೆ ಮತ್ತು ಬಸವನ ಬಾಗೇವಾಡಿಯಲ್ಲಿ ದ್ವಿಚಕ್ರ ವಾಹನಗಳ ಕಳ್ಳರ ಪತ್ತೆ ಮಾಡಲಾಗಿದೆ.

ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಲಕ್ಷ್ಮಣ ನಿಂಬರಗಿ, ಐಪಿಎಸ್ ಅವರ ಮಾರ್ಗದರ್ಶನದಲ್ಲಿ ಈ ಯಶಸ್ವಿ ಕಾರ್ಯಾಚರಣೆ ನಡೆದಿದೆ. ಸಾರ್ವಜನಿಕರ ಆಸ್ತಿಪಾಸ್ತಿ ರಕ್ಷಿಸುವಲ್ಲಿ ಶ್ರಮಿಸಿದ ತನಿಖಾ ತಂಡದ ಕಾರ್ಯಕ್ಕೆ ಶ್ಲಾಘನೆ ವ್ಯಕ್ತವಾಗಿದೆ.



ವಿಜಯಪುರ ಜಿಲ್ಲೆಯಲ್ಲಿ ಮನೆ, ತೋಟದ ಮನೆ, ದೇವಸ್ಥಾನದ ಕಳ್ಳತನ ಹಾಗೂ ಸುಲಿಗೆ ಪ್ರಕರಣಗಳಲ್ಲಿ ಆರೋಪಿಗಳ ಬಂಧನ ಮತ್ತು ಮಾಲು ವಶಪಡಿಸಿಕೊಂಡಿರುವ ಪೋಲಿಸರ ಭರ್ಜರಿ ಕಾರ್ಯಾಚರಣೆಯಲ್ಲಿ ಮುದ್ದೇಬಿಹಾಳ ಠಾಣೆಯಲ್ಲಿ ಧಾಖಲಾಗಿದ್ದ ಜಯರಾಮ ನಾಯಕ ಎಂಬುವವರ ತೋಟದ ಮನೆಯಲ್ಲಿ ನಡೆದ ಕಳ್ಳತನಕ್ಕೆ ಸಂಬಂಧಿಸಿದಂತೆ ರಾಯಚೂರು ಮೂಲದ ಗುರುರಾಜ, ಗುರುಕುಮಾರ ಮತ್ತು ಸೈಯದ್ ಅಸ್ಲಂ ಎಂಬುವವರನ್ನು ಬಂಧಿಸಿ 51 ಲಕ್ಷ 35 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಇನ್ನೂ ಮುದ್ದೇಬಿಹಾಳ ಠಾಣೆ ವ್ಯಾಪ್ತಿಯ ಕವಡಿಮಟ್ಟಿ ಗ್ರಾಮದ ಬಸವರಾಜ ಹೂಗಾರ ಎಂಬಾತನ ಬಂಧನ, 7 ಲಕ್ಷ 55 ಸಾವಿರ ಮೌಲ್ಯದ ಮಾಲು ವಶಕ್ಕೆ ಪಡೆಯಲಾಗಿದ್ದು, ಮುದ್ದೇಬಿಹಾಳ ಠಾಣೆ ವ್ಯಾಪ್ತಿಯ ನಾಲ್ವರು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರ ಪತ್ತೆ ಮಾಡಿದ್ದು, ಅವರಿಂದ 12 ಲಕ್ಷ 75 ಸಾವಿರ ಮೌಲ್ಯದ ಬಂಗಾರ ವಶಕ್ಕೆ ಪಡೆದಿದ್ದರೆ, ನಿಡಗುಂದಿ ಠಾಣೆ ವ್ಯಾಪ್ತಿಯಲ್ಲಿ ಸರಗಳ್ಳತನ ಮಾಡಿದ್ದ ರಮೇಶ ಯಮನಪ್ಪ ಚಿತ್ತರಗಿ ಎಂಬಾತನನ್ನು ಬಂಧಿಸಿದ್ದಾರೆ.

ತಾಳಿಕೋಟೆ ಠಾಣೆ ಪೊಲಿಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕಾಶ ಅಲಿಯಾಸ್ ಹರೀಶ ತಳವಾರ ಎಂಬಾತನ ಬಂಧಿಸಿ, 5 ಬೈಕ್‌ಗಳ ವಶಕ್ಕೆ ಪಡೆದಿದ್ದು, ಬಸವನ ಬಾಗೇವಾಡಿ ಠಾಣೆ ವ್ಯಾಪ್ತಿಯಲ್ಲಿ ಅನಿಲ ಮತ್ತು ಕಾರ್ತಿಕ್ ಎಂಬುವವರ ಬಂಧನ, ಮಾಡಿ ಬಂಗಾರ ಹಾಗೂ ಬೈಕ್ ವಶಕ್ಕೆ ಪಡೆಯುವಲ್ಲಿ ತಾಳಿಕೋಟೆ ಪೋಲಿಸರು ಯಶಸ್ವಿ ಆಗಿದ್ದಾರೆ.

ಕೂಡಗಿ ಠಾಣೆ ವ್ಯಾಪ್ತಿಯಲ್ಲಿ ಅಬ್ದುಲ್ ಚೇನಿ ಮತ್ತು ಹೀರಾ ಹುಣಸಿಮರದ ಎಂಬುವವರನ್ನು ಬಂಧಿಸಿದ್ದು ಬಂಧಿತರಿಂದ, 40 ಗ್ರಾಂ ಚಿನ್ನ ವಶಕ್ಕೆ ಪಡೆದಿದ್ದು, ನಿಡಗುಂದಿ ಠಾಣೆ ವ್ಯಾಪ್ತಿಯಲ್ಲಿ ಬನಶಂಕರಿ ಗುಡಿಯಲ್ಲಿ ಕಳ್ಳತನ ಮಾಡಿದ್ದ ಸೋಮನಾಥ ಮತ್ತು ಪ್ರಕಾಶ ಎಂಬುವವರ ಬಂಧನ ಮಾಡಿದ್ದು ವಿವಿಧ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಪ್ರಕರಣಗಳನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

## ರೈತ ಸಂಘಟನೆಯ ಅಧ್ಯಕ್ಷರಾಗಿ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ

ತಾಲ್ಲೂಕು ರೈತ ಸಂಘದ ನೂತನ ಅಧ್ಯಕ್ಷರಾಗಿ ಬಸವನಗೌಡ ಇವರನ್ನು ಆಯ್ಕೆ ಮಾಡಲಾಯಿತು. ಗೌರವಾಧ್ಯಕ್ಷರಾಗಿ ವಿ ನಾಗೇಂದ್ರಪ್ಪ, ಕಾರ್ಯಾಧ್ಯಕ್ಷರಾಗಿ ಮುಗಲಿ ನಾಗೇಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಎ. ನಾಗರಾಜ್, ಉಪಾಧ್ಯಕ್ಷರಾಗಿ ಗವಿಸಿದ್ದಪ್ಪ, ಗಡ್ಡಿ ನಿಂಗಪ್ಪ. ಸೋಗಿ ಬಸವರಾಜ್, ಎ.ಎಂ. ಕೊಟ್ರೇಶ್, ಸೇವಾ ನಾಯಕ ಸಹ ಕಾರ್ಯದರ್ಶಿ ಬಿ. ಯಮನೂರಪ್ಪ, ಮಂಜಪ್ಪ, ನಶಪುಡಿ ನಾಗರಾಜ್. ಸಂಚಾಲಕರಾಗಿ. ಬಿ.ಕರಿಬಸಪ್ಪ ಇಮಾಮ್ ಸಾಬ್ ,ಸಲಹಾ ಸಮಿತಿ ಸದಸ್ಯರಾಗಿ ಹರಟೆ ಕಾಳಪ್ಪ, ಉಪ್ಪಾರ್ ಬಸಪ್ಪ, ವಸಂತ್ ಕುಮಾರ್, ಶಿವಣ್ಣ, ಹಲಗೇರಿ ಮಹೇಶ್, ಕಿತ್ತೂರ್ ನಾಗಪ್ಪ, ಅರವಳ್ಳಿ ನಾಗರಾಜ್, ಇವರುಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷರಾದ ಜೆ.ಎಂ. ವೀರಸಂಗಯ್ಯ ಮತ್ತು ರಾಜ್ಯ ಸಂಘಟನಾ ಕಾರ್ಯದರ್ಶಿ, ಬಿ.ಗೋಣಿಬಸಪ್ಪ ಜಿಲ್ಲಾ ಸಲಹಾ ಸಮಿತಿ ಸದಸ್ಯರು ಬಿ.ಸಿದ್ದನಗೌಡ ವಿಜಯನಗರ ಜಿಲ್ಲಾ ಅಧ್ಯಕ್ಷರಾದ .ಆಂಜನೇಯಲು ರೆಡ್ಡಿ ಮತ್ತು ವಿಜಯನಗರ ಜಿಲ್ಲಾ ಯುವ ಘಟಕದ ಜಿಲ್ಲಾಧ್ಯಕ್ಷ ರವಿಕುಮಾರ್ ತಂಬ್ರಹಳ್ಳಿ ಇವರ ನೇತೃತ್ವದಲ್ಲಿ ನಡೆಯಿತು. ತಾಲ್ಲೂಕಿನ ರೈತ ಸಂಘದ ಸದಸ್ಯರು ಹಾಗೂ ಇತರ ರೈತರು ಪಾಲ್ಗೊಂಡಿದ್ದರು.



## ಸಾಧಕ ಮಹಿಳೆಯರಿಗೆ ಐಕಾನ್ ಪ್ರಶಸ್ತಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಸದಾಶಿವನಗರದ ಹೈಡ್ ಪಾರ್ಕ್ ಹೋಟೆಲ್ನಲ್ಲಿ ಪ್ರಗತಿ ಮೀಡಿಯಾ ಇವೆಂಟ್ಸ್ ಆಯೋಜಿಸಿದ್ದ ಕರ್ನಾಟಕ ವಿಮೆನ್ಸ್ ಐಕಾನ್ ಅವಾರ್ಡ್ಸ್ 2026 ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಖ್ಯಾತ ಉದ್ಯಮಿ ವಿ.ವೀರೇಶ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಸಾಧಕ ಮಹಿಳೆಯರಿಗೆ ಐಕಾನ್ ಪ್ರಶಸ್ತಿ ನೀಡಿ ಗೌರವಿಸಿದರು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ರಂಗಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಕರ್ನಾಟಕ ವಿಮೆನ್ಸ್ ಐಕಾನ್ ಅವಾರ್ಡ್ಸ್–2026 ನೀಡಿ ಗೌರವಿಸಲಾಯಿತು. ಆರ್.ವಿ.ಮಮತಾ ದೇವರಾಜ್, ಡೆಂಟಿಸ್ಟ್ ಸ್ವಾತಿ ಶುಕ್ಲಾ, ಪವಿತ್ರ ಪ್ರಭಾಕರ್ ರೆಡ್ಡಿ ಜಿ.ಎಸ್.ಲತಾ ಜೈಪ್ರಕಾಶ್, ಫ್ಯಾಷನ್ ಡಿಸೈನರ್ ಪೂನಂ ಛೇತ್ರಿ, ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಗಾಗಿ ಮಂಜುಳಾ ಭಾರ್ಗವಿ, ಡಾ.ಅನುಪಮ ಪಂಚಾಕ್ಷರಿ, ನಯನಾ, ಪ್ರಿಯಾಂಕ ರಂಗಪ್ಪ, ಕರಾಟೆ ವಿನ್ನರ್ ಆನ್ವಿ ಪಟೇಲ್, ಸಾಮಾಜಿಕ ಸೇವೆ ನಿತ್ಯಾ, ಸಂಗೀತಾ ಭಟ್, ಡಾ.ಧನ್ಯಾ ಸೇರಿದಂತೆ ಹಲವರು ಪ್ರಶಸ್ತಿಗೆ ಭಾಜನರಾದರು.



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಭರತನಾಟ್ಯ ನೃತ್ಯ ನೆರದಿದ್ದವರನ್ನು ರಂಜಿಸಿತು. ಉದ್ಯಮಿ ವಿ.ವೀರೇಶ್ ಅವರಿಗೆ ಹಾಗು ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷ ಶಿವಕುಮಾರ್ ನಾಗರ ನವಿಲೆಯವರನ್ನು ಪ್ರಗತಿ ಮೀಡಿಯಾ ಇವೆಂಟ್ಸ್ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಆಯೋಜ–ಕರಾದ ಆದರ್ಶ ರವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನೆರವೇರಿಸಿದರು.

## ಪ್ಲಾಸ್ಟಿಕ್ ಮುಕ್ತ ಜೀವನಶೈಲಿ ನಮ್ಮದಾಗಲಿ: ನಾಗರಾಜ್

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ನಗರದ ಪ್ರತಿಷ್ಠಿತ ಸಂಕಲ್ಪ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿಗಳು ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮದ ಅಡಿಯಲ್ಲಿ ಹಿರೇಜಂತಕಲ್ ಹಾಗೂ ವಿಪ್ರ ಪ್ರದೇಶದಲ್ಲಿ ಶ್ರಮದಾನ ಮಾಡುವ ಮೂಲಕ ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ವಸ್ತುಗಳನ್ನು ಆಯ್ದು ಪ್ರದೇಶವನ್ನು ಸ್ವಚ್ಛಗೊಳಿಸುತ್ತಿರುವ ಸಂದರ್ಭದಲ್ಲಿ ಅಲ್ಲಿಗೆ ಭೇಟಿ ನೀಡಿ ಮಾತನಾಡಿದ ಸಂಕಲ್ಪ ಪದವಿ ಮಹಿಳಾ ಮಹಾವಿದ್ಯಾಲಯ ಕಾರ್ಯಾಧ್ಯಕ್ಷರು ಹಾಗೂ ವಕೀಲರಾದ ನಾಗರಾಜ್ ಗುತ್ತೇದಾರ್ ಅವರು, ಪರಿಸರಕ್ಕೆ ಮಾರಕವಾದ ಏಕ ಬಳಕೆ ಪ್ಲಾಸ್ಟಿಕ್ ಅನ್ನು ನಾವುಗಳೆಲ್ಲ ಸ್ವ ಇಚ್ಛೆಯಿಂದ ತ್ಯಜಿಸುವ ಮೂಲಕ ಪ್ಲಾಸ್ಟಿಕ್ ಮುಕ್ತ ಜೀವನಶೈಲಿಗೆ ಬದಲಾಗಬೇಕಿದೆ. ಆ ಮೂಲಕ ಹಿರಿಯರಿಂದ ಬಳುವಳಿಯಾಗಿ ಬಂದ ಸುಂದರ–ಸ್ವಚ್ಛ ಪರಿಸರವನ್ನು ಯಥಾವತ್ತಾಗಿ ಮುಂದಿನ ತಲೆಮಾರಿಗೆ ಹಸ್ತಾಂತರಿಸಲು ಸಾಧ್ಯವಾಗುತ್ತದೆ. ನಾಗರೀಕತೆಯ ಬೆಳವಣಿಗೆಯ ಭಾಗವಾಗಿ ದಿನನಿತ್ಯದ ಜೀವನಶೈಲಿಯಲ್ಲಿ ಪ್ಲಾಸ್ಟಿಕ್ ವಸ್ತುಗಳ ಬಳಕೆ ಅತಿಯಾಗಿ ಅವುಗಳು ಪರಿಸರಕ್ಕೆ ಮತ್ತು ಮಾನವನ ಆರೋಗ್ಯಕ್ಕೆ ತೀವ್ರವಾದ ಹಾನಿಯನ್ನು ಉಂಟುಮಾಡುತ್ತಿವೆ ಎಂದು ತಿಳಿಸಿದರು.




ಪ್ಲಾಸ್ಟಿಕ್ ವಸ್ತುಗಳ ಬದಲಾಗಿ ಪರ್ಯಾಯ ಬಳಕೆಯ ಕಡೆಗೆ ನಾವೆಲ್ಲ ಗಮನಹರಿಸುವ ಮೂಲಕ ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಮುನ್ನುಡಿ ಬರೆಯಬೇಕಾಗಿದೆ ಎಂದು ಕರೆ ನೀಡಿದರು. ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಲು ಹಲವಾರು ಕಾಯ್ದೆ ಕಾನೂನುಗಳಿದ್ದರೂ ಸಹ ಜನ ಅವುಗಳನ್ನು ಗಮನಿಸದೆ ಮುಂದುವರೆದಲ್ಲಿ ಮಾನವ ಸಂಕುಲ ಅಪಾಯಕ್ಕೆ ಸಿಲುಕುವುದರಲ್ಲಿ ಅನುಮಾನವಿಲ್ಲ. ಹಾಗಾಗಿ ಈ ಪವಿತ್ರ ಪರಿಸರದಲ್ಲಿ ವಾಸಿಸುವ ನಾವೆಲ್ಲರೂ ನಮ್ಮ ಸ್ವ–ಇಚ್ಛೆಯಿಂದ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದರ ಜೊತೆಗೆ ಪರಿಸರ ಸಂರಕ್ಷಣೆಗೆ ಹಾಗೂ ನಮ್ಮಗಳ ಆರೋಗ್ಯಯುತ ಜೀವನಕ್ಕೆ ಸಂಕಲ್ಪ ಮಾಡಬೇಕಾಗಿದೆ ಎಂದು ತಿಳಿಸಿದರು.

2021 ಆಗಸ್ಟ್ 12ರಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೊರಡಿಸಿದ ಅಧಿಸೂಚನೆಯಂತೆ ರಾಜ್ಯದಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧವಿದ್ದರೂ ಅದನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ನಾವೆಲ್ಲರೂ ರಕ್ಕಸ ಪ್ಲಾಸ್ಟಿಕ್ ಅನ್ನು ತ್ಯಜಿಸಿ ಉತ್ತಮ ಪರಿಸರ ಮತ್ತು ಸ್ವಸ್ಥ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕಿದೆ ಎಂದು ಶಿಬಿರಾರ್ಥಿಗಳಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಅಧಿಕಾರಿಗಳಾದ ರಮೇಶ್, ಶಿವಶರಣ ಹಾಗೂ ಮಹಾವಿದ್ಯಾಲಯದ ಸಿಬ್ಬಂದಿಯಾದ ರಾಹುಲ್ ಉಪಸ್ಥಿತರಿದ್ದರು.

# ಸಂಸತ್ತಿನ ಮೆಟ್ಟಿಲ ಮೇಲೆ ಕೂತು ಚಹಾ ಸೇವನೆ ಸಲ್ಲ



ರಾಜಕೀಯ–ಜನಮೇಜಯ

• ದೇವೇಗೌಡ

ಮಾಜಿ ಪ್ರಧಾನಿ

ಸಂಸತ್ ಅಧಿವೇಶನದಲ್ಲಿ ವಿಪಕ್ಷಗಳಿಂದ, ಅದರಲ್ಲಿಯೂ ಕಾಂಗ್ರೆಸ್ ಸದಸ್ಯರಿಂದ ಕಲಾಪಕ್ಕೆ ತೀವ್ರ ಅಡ್ಡಿ ಉಂಟಾಗುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ರಾಜ್ಯಸಭೆ ಸದಸ್ಯರೂ ಆಗಿರುವ ಮಾಜಿ ಪ್ರಧಾನಿಗಳಾದ ಹೆಚ್.ಡಿ. ದೇವೇಗೌಡರು; ಈ ಬಗ್ಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಅಧ್ಯಕ್ಷೆ ಶ್ರೀಮತಿ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.

ಸಂಸತ್ತಿನ ಬಜೆಟ್ ಅಧಿವೇಶನದ ಸಂದರ್ಭದಲ್ಲಿ ವಿರೋಧ ಪಕ್ಷಗಳು ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್ ಸದಸ್ಯರು ತೋರಿಸುತ್ತಿರುವ ಅತಿರೇಕದ ವರ್ತನೆ, ಅಶಿಸ್ತಿನ ನಡವಳಿಕೆ ಬಗ್ಗೆ ಮಾಜಿ ಪ್ರಧಾನಿಗಳು ತೀವ್ರ ಆತಂಕ, ಕಳವಳ ವ್ಯಕ್ತಪಡಿಸಿದ್ದಾರೆ.

ಬಜೆಟ್ ಅಧಿವೇಶನದ ವೇಳೆ ಪ್ರತಿಪಕ್ಷಗಳ ಸದಸ್ಯರು ನಿರಂತರವಾಗಿ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದು, ಅದರಲ್ಲಿಯೂ ಕಾಂಗ್ರೆಸ್ ಸಂಸದರು ಸಂಸತ್ತಿನ ಒಳಗೆ ಹಾಗೂ ಸಂಸತ್ತಿನ ಆವರಣದಲ್ಲಿ ಘೋಷಣೆ ಕೂಗುವುದು, ಫಲಕ ಪ್ರದರ್ಶನ ಮಾಡುವುದು, ನಿರ್ದಿಷ್ಟವಾಗಿ ಹೆಸರು ಕೂಗುವುದು, ಧರಣಿ ಮತ್ತು ಕಲಾಪ ಸ್ಥಗಿತ ಆಗುವಂತೆ ಮಾಡುವುದು ಮಾಡುತ್ತಿದ್ದಾರೆ. ಇದು ಸಂಸತ್ತಿನ ಘನತೆಯನ್ನು ಕುಗ್ಗಿಸುತ್ತಿದೆ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಮೂಲ ತತ್ವಗಳಿಗೆ ಧಕ್ಕೆ ಉಂಟು ಮಾಡುತ್ತದೆ ಎಂದು ಮಾಜಿ ಪ್ರಧಾನಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

**ನನ್ನ ರಾಜಕೀಯ ಜೀವನದ 90ರಷ್ಟು ಕಾಲವನ್ನು ಪ್ರತಿಪಕ್ಷದಲ್ಲಿಯೇ ಕಳೆದಿದ್ದೇನೆ:** ತಮ್ಮ 65 ವರ್ಷಗಳ ಸುದೀರ್ಘ ಸಾರ್ವಜನಿಕ ಜೀವನವನ್ನು ಪತ್ರದಲ್ಲಿ ಉಲ್ಲೇಖಿಸಿರುವ ಮಾಜಿ ಪ್ರಧಾನಿಗಳು; ನನ್ನ ರಾಜಕೀಯ ಜೀವನದ ತೊಂಬತ್ತರಷ್ಟು ದೀರ್ಘಾವಧಿಯ ಕಾಲವನ್ನು ಪ್ರತಿಪಕ್ಷದಲ್ಲಿಯೇ ಕಳೆದಿದ್ದೇನೆ. ನೀವು ಕೂಡ ಹೆಚ್ಚು ಕಾಲ ವಿರೋಧ ಪಕ್ಷದಲ್ಲಿಯೇ ಇದ್ದೀರಿ. ಪ್ರತಿಪಕ್ಷದ ಹೊಣೆಗಾರಿಕೆ ಹಾಗೂ ಜವಾಬ್ದಾರಿಗಳ ಬಗ್ಗೆ ತಮಗೆ ಅರಿವಿದೆ. ವಿರೋಧ ಪಕ್ಷಗಳು ತಮ್ಮ ವಿರೋಧವನ್ನು ತೋರಿಸಬಹುದು, ಆದರೆ ಅದು ನಿಯಮಗಳು, ಸಂಪ್ರದಾಯಗಳು ಮತ್ತು ಘನತೆಗೆ ಧಕ್ಕೆ ತರುವಂತಿರಬಾರದು. ಆದರೆ, ಪ್ರಸಕ್ತ ಸಂದರ್ಭದಲ್ಲಿ ಪ್ರತಿಪಕ್ಷ ಸದಸ್ಯರ ವರ್ತನೆ ನನಗೆ ಬಹಳ ನೋವುಂಟು ಮಾಡಿದೆ. ಪ್ರತಿಪಕ್ಷದಲ್ಲಿ ಇದ್ದರೂ ಸಂಸತ್ತಿನ ಘನತೆ ಮತ್ತು ಸಂಪ್ರದಾಯಗಳನ್ನು ಕಾಪಾಡಿಕೊಳ್ಳಲು ಶ್ರಮಿಸಿದ್ದೇನೆ ಎಂದು ಮಾಜಿ ಪ್ರಧಾನಿಗಳು ಪತ್ರದ ಮೂಲಕ ಬೇಸರ ಹೇಳಿದ್ದಾರೆ.

ಪ್ರತಿಪಕ್ಷ ಸದಸ್ಯರು, ಅದರಲ್ಲಿಯೂ ತಮ್ಮ ಪಕ್ಷದ ಸದಸ್ಯರು ತಮ್ಮ ವರ್ತನೆಯನ್ನು ಸರಿಪಡಿಸಿಕೊಂಡು ಸಂಸದೀಯ ವ್ಯವಸ್ಥೆಯ ಪಾವಿತ್ರ್ಯತೆಯನ್ನು ಎತ್ತಿಹಿಡಿಯುತ್ತಾರೆ ಎಂದು ನಿರೀಕ್ಷಿಸಿದ್ದೇ. ಅದು ಆಗಲಿಲ್ಲ. ನಿಮ್ಮ ಸದಸ್ಯರು ಸಂಸತ್ತಿನ ಆವರಣದಲ್ಲಿ ಮತ್ತು ಸಂಸತ್ತಿನ ಒಳಗೆ ಪ್ರಚೋದನಾತ್ಮಕ ರೀತಿಯಲ್ಲಿ ವರ್ತಿಸಿ, ಸಂಸತ್ತಿನ ಕಲಾಪಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಹೀಗಾಗಿ ತಮಗೆ ಪತ್ರ ಬರೆಯುವ ಸನ್ನಿವೇಶ ಸೃಷ್ಟಿಯಾಯಿತು ಎಂದು ಮಾಜಿ ಪ್ರಧಾನಿಗಳು ತಿಳಿಸಿದ್ದಾರೆ.

ಭಾರತೀಯ ಸಂಸದೀಯ ಪ್ರಜಾಪ್ರಭುತ್ವದ ಪರಂಪರೆಯ ಬಗ್ಗೆ ಪತ್ರದಲ್ಲಿ ದೇವೇಗೌಡರು ಒತ್ತಿ ಹೇಳಿದ್ದು; ಪಂಡಿತ್ ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಬಿ.ಆರ್. ಅಂಬೇಡ್ಕರ್ ಮತ್ತು ಮೌಲಾನಾ ಅಬ್ದುಲ್ ಕಲಾಂ ಆಜಾದ್ ಮುಂತಾದವರು ಹಾಕಿಕೊಟ್ಟ ಬುನಾದಿ ಹಾಗೂ ಅವರ ಮಾರ್ಗದರ್ಶನದ ಮೇಲೆ ಪರಂಪರೆಯೂ ನಿರ್ಮಿತವಾಗಿದೆ. ನನ್ನ ಸುದೀರ್ಘ ಸಂಸದೀಯ ಅನುಭವದಲ್ಲಿ ಇತ್ತೀಚೆಗೆ ಕಂಡಂತಹ ಅವ್ಯವಸ್ಥೆ ಮತ್ತು ಅಡಚಣೆಯನ್ನು ನಾನು ಎಂದಿಗೂ ನೋಡಿಲ್ಲ. ನನ್ನ ಇಡೀ ರಾಜಕೀಯ ಜೀವನದಲ್ಲಿ ಸಂಸತ್ತಿನ ಪ್ರಚೋದನ್ಮಕವಾಗಿ ವರ್ತಿಸುವುದು, ಪ್ರತಿಭಟಿಸುವುದು, ಸದನದ ಬಾವಿಗೆ ಇಳಿದು ಕೂಗುವುದನ್ನು ಮಾಡಿಲ್ಲ. ಉತ್ತಮ ಸಂಸದೀಯ ಸಂಸ್ಕೃತಿಯನ್ನು ನಮ್ಮ ಪ್ರಜಾಪ್ರಭುತ್ವದ ಹಿರಿಯರು ನಮಗೆ ಕಲಿಸಿದ್ದಾರೆ ಎಂದು ದೇವೇಗೌಡರು ಪತ್ರದಲ್ಲಿ ಪ್ರತಿಪಾದಿಸಿದ್ದಾರೆ.

ವಿರೋಧ ಪಕ್ಷದ ನಾಯಕನ ಕರ್ತವ್ಯ ಸುಲಭವಲ್ಲ ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅವರ ಎದುರು ಬೆಟ್ಟದಷ್ಟು ಸವಾಲುಗಳು ಇರುತ್ತವೆ. ಜನರ ಸಂಕಷ್ಟಗಳ ಬಗ್ಗೆ ಕಾಲ ಕಾಲಕ್ಕೆ ಸರಕಾರದ ಗಮನಕ್ಕೆ ತರಬೇಕಾಗುತ್ತದೆ. ಹಾಗಿದ್ದರೂ ಪ್ರತಿಭಟನೆ ಮಾಡುವ ಸಂದರ್ಭ ಬಂದರೆ ಅದಕ್ಕೆ ತನ್ನದೇ ಆದ ರೀತಿನೀತಿ ಇರುತ್ತದೆ. ಅಂತಹ ಸಂದರ್ಭದಲ್ಲಿ ಪೀಠಕ್ಕೆ ಅಗೌರವ ತೋರುವ, ಅಪಚಾರ ಎಸಗುವ ಕೆಲಸ ಆಗಬಾರದು. ಸಂಸದೀಯ ನಿಯಮ, ಕಟ್ಟುಪಾಡುಗಳನ್ನು ಮೀರದೆ ಕಾರ್ಯ ನಿರ್ವಹಣೆ ಮಾಡುವುದರಲ್ಲಿ ವಿರೋಧ ಪಕ್ಷ ನಾಯಕನ ಯಶಸ್ಸು ಅಡಗಿದೆ ಎಂದು ನಾನು ನಂಬಿದ್ದೇನೆ. ನಾವು ಸಂಸದರಾಗಿ ಪ್ರಮಾಣ ವಚನ ಸ್ವೀಕರಿಸುವಾಗ ನಾವು ಸಂಸತ್ತಿನ ನಿಯಮಗಳು ಮತ್ತು ಸ್ಥಾಪಿತ ಕಾರ್ಯ ವಿಧಾನಗಳಿಗೆ ಬದ್ಧರಾಗಿರುತ್ತೇವೆ ಎಂದು ಹೇಳುತ್ತೇವೆ. ಅದಕ್ಕೆ ಎಲ್ಲರೂ ಬದ್ಧರಾಗಿ ವರ್ತಿಸಬೇಕು ಎಂದು ನಾನು ನಿಮ್ಮ ಗಮನಕ್ಕೆ ತರಲಿಸುತ್ತೇನೆ ಎಂದು ದೇವೇಗೌಡರು ಸೋನಿಯಾ ಗಾಂಧಿ ಅವರಿಗೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸಂಸತ್ತಿನ ಮೆಟ್ಟಿಲುಗಳ ಮೇಲೆ ಚಹಾ ಸೇವನೆ ಮಾಡುವುದು ಸರಿಯಾದ ನಡವಳಿಕೆ ಅಲ್ಲ. ಈ ಹಿಂದೆ ವಿರೋಧ ಪಕ್ಷಗಳು ರಾಷ್ಟ್ರೀಯ ಹಿತಾಸಕ್ತಿಯನ್ನು ಗೌರವಿಸಿ, ಸಂಯಮದಿಂದ ವರ್ತಿಸಿದ್ದವು. ಸಂಸತ್ತಿನ ಮೆಟ್ಟಿಲುಗಳ ಮೇಲೆ ಕುಳಿತು ಚಹಾ, ಬಿಸ್ಕತ್ತು, ಪಕೋಡಾ ತಿನ್ನುವುದು ಅತಿರೇಖದ ಕ್ರಮಗಳು. ಇವು ಅನುಚಿತ ಎಂದು ಗೌಡರು ಟೀಕಿಸಿದ್ದಾರೆ.

ನಾನು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸರ್ಕಾರವನ್ನು ಮುನ್ನಡೆಸಿದ್ದೇನೆ. ಆ ಸಂದರ್ಭದಲ್ಲಿ ವಿರೋಧ ಪಕ್ಷಗಳು ಸಂಸದೀಯ ಸದಾಚಾರ ಹಾಗೂ ಮೌಲ್ಯಗಳನ್ನು ಮೀರಿ ನಡೆದಿಲ್ಲ. ಅಂದಿನ ಸದಸ್ಯರು ರಾಷ್ಟ್ರೀಯ ಹಿತಾಸಕ್ತಿಗೆ ಅನುಗುಣವಾಗಿ ಸಂಯಮದಿಂದ ಕಾರ್ಯನಿರ್ವಹಿಸಿದ್ದಾರೆ. ಅವರು ಪ್ರತಿಭಟಿಸಿದಾಗಲೂ ಅವರು ಎಂದೂ ಸಂಸತ್ತಿನ ಪ್ರವೇಶ ದ್ವಾರವನ್ನು ನಿರ್ಬಂಧಿಸಲಿಲ್ಲ. ಇವತ್ತು ಅದಕ್ಕೆ ವಿರುದ್ಧವಾದ ಸನ್ನಿವೇಶ ಸೃಷ್ಟಿಯಾಗಿದೆ. ಇದು ಸಂಸದೀಯ ಹೆಗ್ಗಳಿಕೆಗೆ ಅಪಾರ ಹಾನಿ ಉಂಟು ಮಾಡುತ್ತಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ನನ್ನ ಕಾಳಜಿ ಮತ್ತು ನನ್ನ ಉದ್ದೇಶವನ್ನು ನೀವು ಅರ್ಥಮಾಡಿಕೊಳ್ಳುತ್ತೀರಿ ಎಂದು ನನಗೆ ನಂಬಿಕೆಯಿದೆ. ನಾನು ಯಾರನ್ನೂ ಲಘುವಾಗಿ ನೋಡುವ ಅಥವಾ ಯಾರ ಉತ್ಸಾಹವನ್ನು ಕಡಿಮೆ ಮಾಡುವ ಉದ್ದೇಶ ಹೊಂದಿಲ್ಲ. ಆದರೆ, ವಿರೋಧ ಪಕ್ಷದ ಹಿರಿಯ ಸ್ಥಾನದಲ್ಲಿರುವ ನೀವು, ನಿಮ್ಮ ರಾಜಕೀಯ ಅನುಭವ ಮತ್ತು ಪ್ರಬುದ್ಧತೆಯನ್ನು ಬಳಸಿಕೊಂಡು ನಿಮ್ಮ ಪಕ್ಷದ ನಾಯಕರು ಮತ್ತು ಇತರರೊಂದಿಗೆ ಮಾತನಾಡಿ ಸರಿಪಡಿಸಬೇಕು ಒತ್ತಾಯಿಸುತ್ತೇನೆ ಎಂದು ದೇವೇಗೌಡರು ಸೋನಿಯಾ ಗಾಂಧಿ ಅವರನ್ನು ಆಗ್ರಹಿಸಿದ್ದಾರೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)